ಬೆಲೆ: ಎರಡು ಆಣೆ

ಕರ್ಮವೀರ

ವರ್ಗಣಿ ದರ
(ಅಂಚೆವೆಚ್ಚ ಸೇರಿ)
ವರ್ಷಕ್ಕೆ ರೂ. ೬-೪-೦
೬ ತಿಂಗಳಿಗೆ ,, ೩-೪-೦
೩ ತಿಂಗಳಿಗೆ ,, ೧-೧೨-೦
ವ್ಹಿ. ಪಿ. ಮೂಲಕ ತರಿಸಿಕೊಂಡಲ್ಲಿ ೫ ಆಣೆ ಹೆಚ್ಚಿಗೆ ಬೀಳುವದು.

KARMAVEER
WEEKLY
HUBLI
SEPT. 15
1946

ಸಂಪಾದಕರು : ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor : H. R. Purohit, M. A.

ಸಂಪುಟ ೧೮] ಹುಬ್ಬಳ್ಳಿ ಸೋಮವಾರ ತಾರೀಖು ೧೬ — ೯ — ೧೯೪೬ [ಸಂಚಿಕೆ ೩೩

'ಮರೆತುಹೋದ ಜನಸಾಮಾನ್ಯರಿಗಾಗಿ ದುಡಿವೆವು'

ನಡುಗಾಲ ಸರಕಾರದ ಸ್ವದೇಶ-ವಿದೇಶ ಧ್ಯೇಯ ಧೋರಣೆಗಳ ಬಗ್ಗೆ ಜವಾಹರಲಾಲರ ಆಕಾಶವಾಣಿ ಭಾಷಣ— ಘಟನಾ ಸಮಿತಿಯಲ್ಲಿ ಸಹಕರಿಸಲು ಲೀಗಿನವರಿಗೆ ಬಿನ್ನಹ

ನಡುಗಾಲ ಸರಕಾರದ 'ಮುಖ್ಯ ಮಂತ್ರಿ'ಗಳಾಗಿರುವ ಪಂಡಿತ ಜವಾಹರಲಾಲ ನೆಹರೂ ಅವರು ತಮ್ಮ ಸರಕಾರದ ಧ್ಯೇಯ ಧೋರಣೆಗಳನ್ನು ವಿವರಿಸಿ ಮೊನ್ನೆ ರವಿವಾರ [ತಾ. ೮] ಆಕಾಶವಾಣಿ ಭಾಷಣ ಮಾಡಿದರು. ಅದರಲ್ಲಿ ಅವರು ಸರ್ವ ರಾಷ್ಟ್ರಗಳಿಗೂ ಸೌಹಾರ್ದವನ್ನು ಪ್ರದರ್ಶಿಸಿದ್ದರೂ ಪ್ರಬಲ ರಾಷ್ಟ್ರಗಳ ಅಧಿಕಾರಲಾಲಸೆಯ ರಾಜಕಾರಣದಲ್ಲಿ ಪ್ರವೇಶಿಸದೆ ಶಾಂತಿಮಯವಾದ ಒಂದೇ ಜಗತ್ತಿಗಾಗಿ ದುಡಿಯುವದಾಗಿ ಸಾರಿದ್ದಾರೆ. ಘಟನಾ ಸಮಿತಿಯನ್ನು ಮಲ್ಲಯುದ್ಧದ ಕಣವಾಗಿ ಮಾಡುವ ಇಚ್ಛೆಯಾಗಲಿ ತಮ್ಮ ಅಭಿಪ್ರಾಯವನ್ನು ಬಲವಂತದಿಂದ ಎದುರಾಳಿಗಳ ಮೇಲೆ ಹೇರುವದಾಗಲಿ ತಮ್ಮ ಉದ್ದೇಶವಿಲ್ಲವೆಂದು ಆಶ್ವಾಸನವಿತ್ತು 'ನಮ್ಮೊಡನೆ ಮತಭೇದವಿರುವವರೂ' ಅದರಲ್ಲಿ ಸಹಕರಿಸಬೇಕೆಂದು ಬಿನ್ನವಿಸಿಕೊಂಡಿರುವರು.



ಗೆಳೆಯರೆ, ಬಂಧುಗಳೆ, ಜಯ-ಹಿಂದ!

ಆರು ದಿನಗಳ ಹಿಂದೆ ನಾನೂ ನನ್ನ ಸಹಯೋಗಿಗಳೂ ಹಿಂದುಸ್ತಾನ ಸರಕಾರದ ಉನ್ನತ ಅಧಿಕಾರ ಪೀಠಗಳನ್ನೇರಿದೆವು. ಈ ಪುರಾತನ ದೇಶದಲ್ಲಿ ನೂತನ ಸರಕಾರವೊಂದು ಅಸ್ತಿತ್ವಕ್ಕೆ ಬಂದಿದೆ. ನಡುಗಾಲ ಅಥವಾ ತಾತ್ಪೂರ್ತಿಕ ಸರಕಾರವೆಂದು ಕರೆಸಿಕೊಳ್ಳುತ್ತಿರುವ ಈ ಸರಕಾರ ಹಿಂದುಸ್ತಾನದ ಸಂಪೂರ್ಣ ಸ್ವಾತಂತ್ರ್ಯದ ಮೊದಲ ಮೆಟ್ಟಲು. ಜಗತ್ತಿನ ಎಲ್ಲ ಭಾಗಗಳಿಂದಲೂ ಹಿಂದುಸ್ತಾನದ ಮೂಲೆ ಮೂಲೆಯಿಂದಲೂ ನಮಗೆ ಸಾವಿರಗಟ್ಟಲೆ ಅಭಿನಂದನಪರ ಸಂದೇಶಗಳು ಬಂದಿವೆ. ಆದರೂ ಈ ಚರಿತ್ರಾರ್ಹ ಮುಹೂರ್ತವನ್ನು ಉತ್ಸವಗಳಿಂದ ಆಚರಿಸಬೇಕೆಂದು ನಾವು ಬೇಕೊಂಡಿದ್ದಿಲ್ಲ, ಬದಲಾಗಿ ನಮ್ಮ ಜನರ ಲವಲವಿಕೆಯನ್ನು ತಡೆಗಟ್ಟಲು ಪ್ರಯತ್ನಿಸಿದೆವು. ನಾವಿನ್ನೂ ಗುರಿಯ ದಾರಿಯಲ್ಲೆ ಇದ್ದೇವೆ, ಅದನ್ನು ಇನ್ನೂ ಮುಟ್ಟಿಲ್ಲ, ಎಂಬೀ ಮಾತನ್ನು ಅವರು ಮನಗಾಣಬೇಕೆಂಬದು ನಮ್ಮ ಉದ್ದೇಶವಾಗಿತ್ತು. ನಮ್ಮ ದಾರಿಯಲ್ಲಿ ಅನೇಕ ಅಡ್ಡಿ ಆತಂಕಗಳಿವೆ. ಜನರು ಭಾವಿಸಿದಷ್ಟು ಸಮೀಪದಲ್ಲಿ ನಮ್ಮ ಗುರಿಯಿರಲಿಕ್ಕಿಲ್ಲ. ಈ ಸ್ಥಿತಿಯಲ್ಲಿ ತುಸು ದೌರ್ಬಲ್ಯವನ್ನಾಗಲಿ ಆಲಸ್ಯವನ್ನಾಗಲಿ ತೋರಿಸಿದೆವಾದರೆ ನಮ್ಮ ಧ್ಯೇಯಕ್ಕೆ ಅಪಾರ ಹಾನಿಯುಂಟಾಗದಿರದು.

ಈ ಕಲಹವೇಕೆ ?

ಕಲಕತ್ತೆಯ ಭಯಾನಕ ದುರಂತ,ಅಣ್ಣತಮ್ಮಂದಿರಲ್ಲಿ ಮುಸಗಿದ ಮೂಢ ಕಲಹ ಇವುಗಳಿಂದಲೂ ನಮ್ಮ ಹೃದಯ ಭಾರವಾಗಿತ್ತು. ತಲೆಮಾರುಗಳಿಂದ ಕಷ್ಟ ಕ್ಲೇಶಗಳನ್ನು ಅನುಭವಿಸಿ ನಾವು ಏತಕಾಗಿ ದುಡಿದೆವೊ ಆ ಸ್ವಾತಂತ್ರ್ಯ ಹಿಂದುಸ್ತಾನದ ಎಲ್ಲ ಜನರಿಗಾಗಿ ಹೊರತು ಯಾವೊಂದು ಗುಂಪು ಅಥವಾ ವರ್ಗಕ್ಕಾಗಿ ಇಲ್ಲವೆ ಯಾವೊಂದು ಧರ್ಮದ ಅನುಯಾಯಿಗಳಿಗಾಗಿ ಮಾತ್ರ ಉದ್ದಿಷ್ಟವಾಗಿರಲಿಲ್ಲ. ಸಹಕಾರಪೂರ್ವಕವಾದ ಸರ್ವೋದಯವೇ ನಮ್ಮ ಗುರಿಯಾಗಿತ್ತು. ಎಲ್ಲರಿಗೂ ಸಮಾನವಾದ ಅವಕಾಶ, ಮಾನವ ಜೀವನವನ್ನು ಅಮೂಲ್ಯವಾಗಿ, ಅಪೇಕ್ಷಣೀಯವಾಗಿ ಮಾಡುವ ಎಲ್ಲ ವಸ್ತುಗಳಲ್ಲಿಯೂ ಎಲ್ಲರಿಗ ಸಮಾನವಾದ ಭಾಗ ದೊರೆಯಬೇಕೆಂಬ ಆಶಯ ನಮ್ಮದಾಗಿತ್ತು. ಹಾಗಿದ್ದರೆ ಈ ಕಲಹವೇಕೆ? ಈ ಪರಸ್ಪರ ಭೀತಿ-ಕುಶಂಕೆಗಳೇಕೆ ?

ಭವಿತವ್ಯದಲ್ಲಿ ಶ್ರದ್ಧೆ

ಸರಕಾರದ ಧೋರಣವನ್ನು ಕುರಿತಾಗಲಿ ಮುಂದಿನ ದಿನಗಳ ನಮ್ಮ ಯೋಜನೆಯ ಬಗೆಗಾಗಲಿ ನಾನಿಂದು ನಿಮ್ಮ ಮುಂದೆ ವಿಶೇಷವಾಗಿ ಮಾತಾಡುವದಿಲ್ಲ. ಅದಕ್ಕಿನ್ನೂ ಸ್ವಲ್ಪಕಾಲಬೇಕು. ನೀವು ನಮಗೆ ಕಳಿಸಿದ ಪ್ರೀತ್ಯಾದರದ ವಿಪುಲ ಸಂದೇಶಗಳಿಗಾಗಿ ನಿಮ್ಮ ಉಪಕಾರ ಸ್ಮರಿಸುವದೇ ನನ್ನ ಭಾಷಣದ ಉದ್ದೇಶ. ಆ ಪ್ರೇಮಕ್ಕೆ ಆ ಸಹಕಾರಬುದ್ಧಿಗೆ ಯಾವಾಗಲೂ ಸ್ವಾಗತವಿದ್ದೇ ಇದೆ. ಆದರೆ ಮುಂಬರುವ ಕಠಿನ ದಿನಮಾನದಲ್ಲಿ ಅವುಗಳ ಅವಶ್ಯಕತೆ ಎಂದಿಗಿಂತ ಹೆಚ್ಚಾಗುವದು. "ರಾಜ್ಯ ನೌಕೆಯ ಮೊದಲ ಕರ್ಣಧಾರನೆ ! ನೀನು ಎಲ್ಲ ಬಿರುಗಾಳಿಗಳನ್ನು ಗೆದ್ದು ಯಶಸ್ವಿಯಾಗು ! ಶುಭಾಸ್ತೇಪಂಥಾನಃ!" ಎಂದೊಬ್ಬ ಗೆಳೆಯ ಸಂದೇಶ ಕಳಿಸಿರುವ ಹುರುಪಿನ ಸಂದೇಶವಿದು ನಿಜ. ಆದರೆ ನಾವು ಎದುರಿಸಬೇಕಾದ ಬಿರುಗಾಳಿಗಳು ಹಲವು, ನಮ್ಮ ರಾಜ್ಯನೌಕೆ ಹಳೆಯದು, ಒಡಕು; ಅದರ ವೇಗವೂ ಉಡುಗುತಿದೆ. ಶೀಘ್ರ ಪರಿವರ್ತನಶೀಲವಾದ ಇಂದಿನ ಯುಗಕ್ಕೆ ತಕ್ಕ ನೌಕೆಯಲ್ಲ ಅದು. ಅದನ್ನು ರದ್ದುಮಾಡಿ ಹೊಸ ನೌಕೆಗೆ ಎಡೆಗೊಡಬೇಕು. ಆದರೆ ಹಡಗೆಷ್ಟು ಹಳೆಯದಾಗಿದ್ದರೂ ನಾವಿಕನೆಷ್ಟು ಮುದುಕನಾಗಿದ್ದರೂ ಕೋಟ್ಯಂತರ ಸ್ನೇಹಲ ಹೃದಯಗಳೂ ಸಹಾಯಕ ಹಸ್ತಗಳೂ ಕೈಗೊಡಲು ಸಿದ್ಧವಾಗಿರುವಾಗ ರುದ್ರ ಸಮುದ್ರವನ್ನು ಧಿಕ್ಕರಿಸಿ ಬರಲಿರುವದನ್ನು ಎದುರಿಸಲು ಆತ್ಮವಿಶ್ವಾಸದಿಂದ ಮುಂದಾಗಬಲ್ಲೆವು.

ಭವಿಷ್ಯತ್ತು ಈಗಾಗಲೆ ರೂಪುಗೊಳ್ಳುತಲಿದೆ ಅದರಲ್ಲಿ ಹಿಂದುಸ್ತಾನ,ನಮ್ಮೀ ಪ್ರಾಚೀನ ಪ್ರೀತ್ಯಾಸ್ಪದ ಭೂಮಿ, ಕ್ಲೇಶಸಂಕಷ್ಟಗಳ ನಡುವೆ ತನ್ನ ತಾನರಿತುಕೊಳ್ಳುತಿದ್ದಾಳೆ. ಅವಳ ಯೌವನ ಮರಳಿದೆ, ಅವಳ ಕಣ್ಣುಗಳಲ್ಲಿ ಸಾಹಸದ ಕಾಂತಿ ಮಿನುಗುತಿದೆ. ತನ್ನಲ್ಲಿಯೂ ತಾನು ಬೀರಬಂದ ಸಂದೇಶದಲ್ಲಿಯೂ ಅವಳ ವಿಶ್ವಾಸ ಉಕ್ಕಿದೆ. ಹಲಗಾಲದಿಂದ ಬಂಧನದಲ್ಲಿದ್ದ ಆಕೆ ಚಿಂತೆಯ ಕಡಲಲ್ಲಿ ಮುಳುಗಿ ಹೋಗಿದ್ದಳು. ಆದರಿಂದು ಅವಳು ವಿಶಾಲ ಜಗತ್ತನ್ನು ನೆರೆನೋಡಿ—ಆ ಜಗತ್ತು ಇನ್ನೂ ಕಲಹಪೂರ್ಣವಾಗಿಯೂ ಯುದ್ಧಚಿಂತನೆಯಲ್ಲಿ ಮಗ್ನವಾಗಿಯೂ ಇರಲೊಲ್ಲದೇಕೆ- ಇತರ ಜನಾಂಗಗಳಿಗೆ ತನ್ನ ಸ್ನೇಹಹಸ್ತವನ್ನು ನೀಡಲು ಸಿದ್ಧಳಾಗಿದ್ದಾಳೆ.

ಸ್ವತಂತ್ರ ರಾಷ್ಟ್ರವಾಗಿ ವರ್ತಿಸುವದು

ನಡುಗಾಲ ಸರಕಾರವಿದು, ಬೇಗನೆ ಸೇರಿ ಸ್ವತಂತ್ರ ಹಿಂದುಸ್ತಾನದ ರಾಜ್ಯಘಟನೆಯನ್ನು ರೂಪಿಸಲಿರುವ ಘಟನಾ ಸಮಿತಿಯನ್ನೊಳಗೊಂಡ ಇನ್ನೂ ವಿಸ್ತಾರವಾದ ಯೋಜನೆಯ ಒಂದು ಅಂಗವಾಗಿದೆ. ಬೇಗನೆ ಪೂರ್ಣ ಸ್ವಾತಂತ್ರ್ಯ ಕೈಗೂಡುವದೆಂಬ ಈ ನಿರೀಕ್ಷೆಯ ಕಾರಣದಿಂದಲೆ ಇಂದು ನಾವು ಈ ಸರಕಾರದಲ್ಲಿ ಸೇರಿದ್ದೇವೆ. ಮತ್ತು ಆಂತರಿಕ ಮತ್ತು ವಿದೇಶ ವಿಚಾರಗಳೆರಡರಲ್ಲೂ ಆ ಕ್ರಿಯಾಸ್ವಾತಂತ್ರ್ಯವನ್ನು ಹೆಚ್ಚು ಹೆಚ್ಚಾಗಿ ಸಾಧಿಸಿಕೊಳ್ಳಬೇಕೆಂದು ನಮ್ಮ ಅಭಿಪ್ರಾಯವಿದೆ

ಅಂತರ್‍ರಾಷ್ಟ್ರೀಯ ಪರಿಷತ್ತುಗಳಲ್ಲಿ ನಾವು ನಮ್ಮದೇ ಆದ ಧೋರಣೆಯೊಡನೆ ಸ್ವತಂತ್ರ ರಾಷ್ಟ್ರದಂತೆ ಪೂರ್ಣವಾಗಿ ಭಾಗ ವಹಿಸುವೆವು ಹೊರತು ಇನ್ನೊಂದು ರಾಷ್ಟ್ರದ ಮಾಂಡಲಿಕರಂತಲ್ಲ. ಇತರ ರಾಷ್ಟ್ರಗಳೊಡನೆ ನೇರವಾಗಿ ನಿಕಟ ಸಂಬಂಧವನ್ನು ಬೆಳಸಿ, ಜಾಗತಿಕ ಶಾಂತಿ ಸ್ವಾತಂತ್ರ್ಯಗಳ ಉದಯಕ್ಕಾಗಿ ಅವುಗಳೊಡನೆ ಸಹಕರಿಸಬೇಕೆಂದು ನಮ್ಮ ಆಶೆ.

ಬಲಾಬಲ ರಾಜಕಾರಣದಿಂದ ದೂರ ಇರುವೆವು

ಒಂದಕ್ಕೊಂದು ಸ್ಪರ್ಧಿಸುವ ಗುಂಪುಗಳ ಬಲಾಬಲದ ಅಥವಾ ಅಧಿಕಾರಲಾಲಸೆಯ ರಾಜಕಾರಣದಿಂದ ನಾವು ಸಾಧ್ಯವಿದ್ದಷ್ಟು ದೂರವಿರುವೆವು ಇಂಥ ರಾಜಕಾರಣದಿಂದ ಈ ಹಿಂದೆ ಜಗದ್ವ್ಯಾಪಿ ಯುದ್ಧಗಳು ಪರಿಣಮಿಸಿವೆ, ಇನ್ನು ಮುಂದಾದರೂ ಅದರಿಂದ ಅನಾಹುತಗಳು ಈ ಮೊದಲಿಗಿಂತಲೂ ವಿಸ್ತಾರ ಪ್ರಮಾಣದಲ್ಲಿ ಒದಗಬಹುದು. ಶಾಂತಿ ಸ್ವಾತಂತ್ರ್ಯಗಳು ಅವಿಭಾಜ್ಯವೆಂದು ನಮ್ಮ ನಂಬಿಕೆ. ಎಲ್ಲಾದರೊಂದೆಡೆ ಸ್ವಾತಂತ್ರ್ಯಕ್ಕೆ ಅಡ್ಡಗಾಲು ಬಿದ್ದರೆ ಬೇರೆ ಕಡೆಗಳಲ್ಲಿಯೂ ಸ್ವಾತಂತ್ರ್ಯಕ್ಕೆ ವಿಪತ್ತು ಬಂದು ಹೋರಾಟದಲ್ಲಿ ಪರ್ಯವಸಾಯಿಯಾಗುವದು. ವಸಾಹತು ಮತ್ತು ಪರಾಧೀನ ದೇಶಗಳ ಮತ್ತು ಪ್ರಜೆಗಳ ವಿಮೋಚನೆಯಲ್ಲಿಯೂ ಎಲ್ಲ ಜನಾಂಗಗಳಿಗೆ ಸಮಾನ ಸಂಧಿ-ಅವಕಾಶಗಳಿರಬೇಕೆಂಬ ತತ್ವದ ಆಚರಣೆಯಲ್ಲಿಯೂ ನಮಗೆ ವಿಶೇಷ ಆಸ್ಥೆಯುಂಟು.

ವರ್ಣದ್ವೇಷದ ನಾಝೀ ಸಿದ್ಧಾಂತವನ್ನು,ಅದು ಎಲ್ಲಿ ಯಾವ ವೇಷದಲ್ಲಿ ಆಚರಿಸಲ್ಪಡುತಿರಲಿ, ನಾವು ಸರ್ವಥಾ ನಿಷೇಧಿಸುತ್ತೇವೆ. ಬೇರೆಯವರ ಮೇಲೆ ನಾವು ಎಳ್ಳಷ್ಟು 'ಬಲುಮೆ' ತೋರಿಸಲು ಬಯಸುವದೂ ಇಲ್ಲ, ಇತರರಿಗಿಂತ ನಮಗೆ ಹೆಚ್ಚು ಸೌಕರ್ಯಗಳು, ಪಕ್ಷಪಾತದ ಸ್ಥಾನಮಾನ ಬೇಕೆಂದು ಬೇಡುವದೂ ಇಲ್ಲ. ಆದರೆ ನಮ್ಮ ಜನರು ಎಲ್ಲಿಗೇ ಹೋಗಿರಲಿ ಅಲ್ಲಿ ಅವರನ್ನು ಸಮಾನವಾಗಿ ಮರ್ಯಾದೆಯಿಂದ ನಡೆಸಿಕೊಳ್ಳಬೇಕೆಂದು ಮಾತ್ರ ನಾವು ಸಾಧಿಸುತ್ತೇವೆ. ಅವರ ವಿರುದ್ಧ ಪಂಕ್ತಿಭೇದ ಮಾಡುವದನ್ನು ನಾವು ಒಪ್ಪಿಕೊಳ್ಳಲಾರೆವು

ಒಂದೇ ಜಗತ್ತು


ದ್ವೇಷ, ಅಸೂಯೆ, ಒಳ ಕಲಹಗಳು ತುಂಬಿದ್ದರೂ ಜಗತ್ತು ಅನಿವಾರ್ಯವಾಗಿ ನಿಕಟ ಸಹಕಾರದ ಕಡೆಗೆ, ಜಾಗತಿಕ ರಾಷ್ಟ್ರಕೂಟದ ಸ್ಥಾಪನೆಯತ್ತ ಸರಿಯುತಿದೆ ಒಂದಾದ ಜಗತ್ತಿಗಾಗಿ, ಎಲ್ಲಿ ಸ್ವತಂತ್ರ ಜನಾಂಗಗಳ ಸ್ವೇಚ್ಛೆಯ ಸಹಕಾರವಿದೆಯೊ ಎಲ್ಲಿ ಒಂದು ವರ್ಗ ಅಥವಾ ಗುಂಪು ಇನ್ನೊಂದನ್ನು ಸೂರೆ ಮಾಡುವಂತಿಲ್ಲವೊ ಅಂಥ ಜಗತ್ತಿಗಾಗಿ ಸ್ವತಂತ್ರ ಹಿಂದುಸ್ತಾನ ದುಡಿಯುವದು.

ಈ ಮುಂಚೆ ನಾವು ಎಷ್ಟೇ ಜಗಳಾಡಿರಲಿ ಇಂಗ್ಲಂಡಿನೊಡನೆಯೂ ಬ್ರಿಟಿಶ ಕಾಮನವೆಲ್ಥಿನ ಇತರ ದೇಶಗಳೊಡನೆಯೂ ಸ್ವತಂತ್ರ ಹಿಂದುಸ್ತಾನದ ಸಂಬಂಧ ಸ್ನೇಹ ಸಹಕಾರಗಳಿಂದ ಕೂಡಿರುವದೆಂದು ಆಶಿಸುತ್ತೇವೆ ಆದರೆ ಬ್ರಿಟಿಶ ಕಾಮನವೆಲ್ತಿನ ಒಂದು ಭಾಗದಲ್ಲಿ ಇಂದು ಏನು ನಡೆಯುತಿದೆಯೊ ಅದನ್ನು ನೆನಪಿನಲ್ಲಿಡುವದೊಳಿತು. ದಕ್ಷಿಣ ಆಫ್ರಿಕೆಯಲ್ಲಿ ವರ್ಣದ್ವೇಷವೆಂಬುದು ಸರಕಾರಿ ಸಿದ್ಧಾಂತವಾಗಿಬಿಟ್ಟಿದೆ. ಅಲ್ಲಿ ಒಂದು ಅಲ್ಪಸಂಖ್ಯಾಕ ಪಕ್ಷದ ವರ್ಣದ್ವೇಷದ ದಬ್ಬಾಳಿಕೆಯನ್ನೆದುರಿಸಿ ನಮ್ಮ ಜನರು ಶೌರ್ಯದಿಂದ ಕಾದುತಿದ್ದಾರೆ. ಈ ವರ್ಣ ಪಕ್ಷಪಾತದ ತತ್ವವನ್ನು ಸಹಿಸಿದರೆ, ಪ್ರಚಂಡ ಕಲಹವೂ ಜಾಗತಿಕ ಅನಾಹುತವೂ ಒದಗುವದನ್ನು ಯಾರೂ ತಡೆಯಲಾರರು.

ಅಮೇರಿಕಾ ರಶಿಯಾಗಳಿಗೆ ವಂದನೆ

ಅಂತರ್‍ರಾಷ್ಟ್ರೀಯ ವಿಚಾರಗಳಲ್ಲಿ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಿಗೆ ದೈವವೇ ಮಹತ್ವದ ಪಾತ್ರವನ್ನು ಕೊಟ್ಟಿದೆ. ಆ ರಾಷ್ಟ್ರದ ಜನರಿಗೆ ನಮ್ಮ ವಂದನೆಗಳು. ಅದಕ್ಕೆ ವಹಿಸಲ್ಪಟ್ಟ ಈ ಪ್ರಚಂಡ ಹೊಣೆಗಾರಿಕೆಯನ್ನು ಅದು ಶಾಂತಿ, ಮಾನವ ಸ್ವಾತಂತ್ರ್ಯಗಳು ಎಲ್ಲೆಲ್ಲೂ ಕಲೆಯುತ್ತವಂತೆ ಮಾಡುವ ಸತ್ಕಾರ್ಯಕ್ಕೆ ವಿನಿಯೋಗಿಸುವದೆಂದು ಹಾರೈಸುವೆವು. ಜಾಗತಿಕ ಘಟನಾವಳಿಯನ್ನು ರೂಪಿಸುವ ವಿಸ್ತಾರವಾದ ಹೊಣೆಗಾರಿಕೆಯನ್ನು ಹೊತ್ತ ಆ ಇನ್ನೊಂದು ಆಧುನಿಕ ಮಹಾರಾಷ್ಟ್ರವಾದ ಸೋವಿಯೆಟ್ ಯೂನಿಯನ್ನಿಗೂ ನಮ್ಮ ಅಭಿವಂದನೆಗಳನ್ನು ಕಳಿಸುತ್ತೇವೆ. ಅವರು ಏಶಿಯಾದಲ್ಲಿ ನಮ್ಮ ನೆರೆಯವರು. ಅದರಿಂದ

–ಪುಟ ೬ಕ್ಕೆ



ಹಾರಿ

ಲೇಖಕರು: ಶ್ರೀ ರಮಾನಂದ ಅಮೀನ್
ಪ್ರಕಾಶಕರು: ರಂಗಮಂಗ ಪ್ರಕಾಶನ, ಧಾರವಾಡ. ಕ್ರೌ. ೧. ಪ. ೧೮ ಪುಟ ಬೆಲೆ: ೯ ಆಣೆ.

ಇದೊಂದು ಪ್ರೇಮ ಕಥೆ. ಸುಧಾರಿತ ಸಮಾಜದಲ್ಲಿ ನಡೆದಿರುವ "ಮದುವೆಯ ಮುಂಚಿನ ಪ್ರೇಮ" ದ ಸುತ್ತ ಹೆಣೆದಿರುವ ಈ ಕಥೆಯಲ್ಲಿ ಶ್ರೀಮಂತ ಕುವರಿ ನಳಿನಿ ತನ್ನ ತಂದೆಯ ಆಶ್ರಿತನಾದ ಜಯನಲ್ಲಿ ಮೊದಲು ಅನುರಕ್ತಳಾಗಿ ಆ ಮೇಲೆ ವಿಲಾಯತಿಗೆ ಹೋಗಿ ಬಂದವಳು ಅಲ್ಲಿಯ ನೂತನ ವಿಚಾರ ವಿಲಾಸಗಳಿಗೆ ಬಲಿಯಾಗಿ ನಟೇಶನೆಂಬ ವಿಲಾಯತಿಯಿಂದ ಮರಳಿದ ಕಾಮುಕನ ಪ್ರೇಮದ ಬಲೆಯಲ್ಲಿ ಬೀಳುವಳು ಮತ್ತು ತಂದೆಯ ಆಶ್ರಿತನಾದ ಜಯನನ್ನು ಸೇವಕ ಬುದ್ಧಿಯಿಂದ ನೋಡತೊಡಗುವಳು. ಅವಮಾನಿತನಾದ ಜಯ ದೇಶತ್ಯಾಗ ಮಾಡಿ ಎಲ್ಲಿಯೋ ಅಲೆಯುತ್ತಿರುವಾಗ ನದಿಯಲ್ಲಿ ಹಾರಿಕೊಂಡು ಆತ್ಮಹತ್ಯ ಮಾಡಿಕೊಳ್ಳುತ್ತಿದ್ದ ಯುವತಿಯೊಬ್ಬಳನ್ನು ರಕ್ಷಿಸುವ ಯೋಗ ಅವನಿಗೆ ದೊರೆಯುವದು. ಆಶ್ಚರ್ಯವೆಂದರೆ ಅವಳು ನಟೇಶನ ವಿವಾಹ ಪೂರ್ವ ಪ್ರೇಮಕ್ಕೆ ಬಲಿಯಾಗಿ ಬಸಿರಾಗಿ, ಪರಿತ್ಯಕ್ತೆಯಾದ ಕಮಲೆಯಾಗಿದ್ದಳು. ಅಷ್ಟರಲ್ಲಿ ನಟೇಶ ನಳಿನಿಯನ್ನೂ ತನ್ನ ಕಾಮದ ಪತಂಗವಾಗಿ ಮಾಡುವ ದುರುದ್ದೇಶದಿಂದ ದೇಶಪರ್ಯಟನದ ನೆವದಿಂದ ಕರೆದುಕೊಂಡು ಹೊರಟವನು ಆ ನದೀ ತೀರಕ್ಕೆ ಅವಳೊಡನೆ ಬಂದು "ದೇಹಸುಖ"ಕ್ಕಾಗಿ ಅವಳನ್ನು ಕಾಡುತ್ತಿರುವನು. ಅವರನ್ನು ದನಿಯಿಂದರಿತ ನಟೇಶ—ಕಮಲೆಯರು ಅವರ ಸಂಕೇತ ಸ್ಥಾನಕ್ಕೆ ಹೋಗಿ ನಟೇಶನ ಹಳೆಯ ಕಥೆಯನ್ನೆಲ್ಲ ಬಯಲಿಗೆಳೆಯುವರು ನಟೇಶ ನಾಚಿಕೊಂಡು ಕಮಲೆಯನ್ನು ಮದುವೆಯಾಗಲೊಪ್ಪವ. ನಳಿನಿಯ ಮನ ಮತ್ತೆ ಜಯನ ಕಡೆ ತಿರುಗುವದು. ಅವಳನ್ನು ಅವನು ಊರಿಗೆ ಕರೆದುಕೊಂಡು ಹೋದರೂ ಅವಳಿಂದ ವಿಮುಖನಾಗುವನು. ಕೊನೆಗೆ ಅವನ ತಾಯಿಯ ಬುದ್ಧಿವಾದದಿಂದ ಪಶ್ಚಾತ್ತಾಪದಗ್ಧಳಾದ ನಳಿನಿಯೊಡನೆ ಜಯನ ಮದುವೆಯಾಗುವದು.

ಒಳ್ಳೆಯ ಚಾತುರ್ಯದಿಂದ ಹೆಣೆದ ಈ ಕಥೆಯಲ್ಲಿ ಸ್ವಾಭಾವಿಕತೆಗಿಂತ ನಾಟಕೀಯತೆ ಹೆಚ್ಚಾಗಿದೆ. ಜಯನ ತಾಯಿಯೊಡನೆ ನಳಿನಿಯ ತಂದೆಯ ಭೆಟ್ಟಿ (ಸ್ಮಶಾನದಲ್ಲಿ!) ಮುಂದೆ ಪ್ರೇಮಿಯುಗಲದ್ವಯದ ಭೆಟ್ಟಿ (ನದೀತೀರದಲ್ಲಿ) ಇವೆರಡೂ ಪ್ರಸಂಗಗಳ ಕೇವಲ ದೈವಾಯತ್ತತೆ ತುಸು ಯೋಜಿನದೇ ಆಗಿದೆ. ಕಥೆಯ ಕೊನೆಯಾದರೂ ಚಲಚ್ಚಿತ್ರಕಥೆಯ ತರಹದ್ದೇ. ಸ್ವಲ್ಪ ಪ್ರಯತ್ನಿಸಿದ್ದರೆ ಕಥೆಯ ಸ್ವಾಭಾವಿಕತೆಯನ್ನು ಹೆಚ್ಚಿಸುವದು ಕಷ್ಟಕರವಾಗುತ್ತಿದ್ದಿಲ್ಲ. ಆದರೆ ಒಟ್ಟಿನ ಮೇಲೆ ಕಥೆ ಸ್ವಾರಸ್ಯವಾಗಿದೆಯೆನ್ನಲಡ್ಡಿಯಿಲ್ಲ.

ಶ್ರೀ ಅಮೀನರ ಶೈಲಿಯನ್ನು ಕುರಿತು ಒಂದು ಮಾತು ಹೇಳಬೇಕಾಗಿದೆ. ಅವರ ಶೈಲಿ ಸರಳವಾಗಿದ್ದರೂ ವ್ಯಾಕರಣ, ವಾಕ್ಯ, ಶಬ್ದ ದೋಷಗಳು ಪುಟ ಪುಟಕ್ಕೂ ದೊರೆಯುತ್ತವೆ. ಎಷ್ಟೋ ಶಬ್ದಗಳನ್ನು ಅವುಗಳ ನಿಜವಾದ ಅರ್ಥ ಬಿಟ್ಟು ಯಾವುದೋ ಅರ್ಥದಲ್ಲಿ ಬಳಸಲಾಗಿದೆ. ಪ್ರಕಾಶಕರು ಇದರ ಮೇಲೆ ಒಮ್ಮೆ ಕೈಯಾಡಿಸಿದ್ದರೆ ಅದು ತಪ್ಪಾಗುತ್ತಿರಲಿಲ್ಲ. "ಕತೆಯಲ್ಲಿಯ ಭಾಷೆ ಅವರ ಬಳಕೆಯ ಭಾಷೆಯು" ಎಂದು ಪ್ರಕಾಶಕರ ಹೇಳಿಕೆ. ಆದರೆ ಮಂಗಳೂರವರಾದ ಶ್ರೀ ಅಮೀನರ ಭಾಷೆಯಲ್ಲಿ ತುಳು ಶೈಲಿಯ ಪ್ರಭಾವ ಮೂಡಿದಷ್ಟು ಮಟ್ಟಿಗೆ ಮಾತ್ರ ಇದು ನಿಜ. ಶ್ರೀ ಅಮೀನರು ಬಳಸಿದ ಶಬ್ದಗಳಿಗೆ ಇದು ಹೊಂದಿಕೆಯಾಗದೆಂದು ಹೇಳಬೇಕು.

ಜ್ಞಾನ ಪ್ರಭಾ:

ಬರೆದವರು: "ಧನ್ವಂತ" ಪ್ರಕಾಶಕರು ಎಚ್.ಎನ್. ರಾವ್ ಬ್ರದರ್ಸ, ಬೆಂಗಳೂರು ನಗರ. ೮೮ ಪುಟ. ಬೆಲೆ ರೂ. ೧

ಯುದ್ಧ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಓಡಿಸಾ, ಬಂಗಾಲ, ಬ್ರಹ್ಮ, ಮದ್ರಾಸ ಪ್ರಾಂತಗಳಲ್ಲಿ ಅಲೆದಾಡುವ ಕಥೆಯಿದು. ರಂಗೂನಿನಲ್ಲಿ ಪ್ರೊಫೆಸರರಾಗಿದ್ದ ಹೇಮಂತರ ಮನೆಯಲ್ಲಿ ನಿಂತು ಸರಕಾರಿ ಕೆಲಸ ನೋಡುತ್ತಿದ್ದ ಓಡಿಯಾ ಯುವಕ ಶೈಲ ಅಲ್ಲಿ ಕೆಲಸ ಮುಗಿಸಿಕೊಂಡು ಕೃಷಿತಜ್ಞನಾಗಿ ಕಲಕತ್ತೆಗೆ ಮರಳುವಾಗ ವಜ್ರಹಾರವೊಂದನ್ನು ಕಟಕದಲ್ಲಿ ತನ್ನ ಅಜ್ಜನೊಡನಿದ್ದ ತಮ್ಮ ಮಗಳು ಪ್ರಭೆಗೆ ಮುಟ್ಟಿಸಲು ಹೇಮಂತರು ಕೊಟ್ಟಿರುತ್ತಾರೆ. ಅಷ್ಟರಲ್ಲಿ ಪ್ರಾಚ್ಯದಲ್ಲಿ ಯುದ್ಧದ ಧಗೆ ಉರಿದೆದ್ದು ಅವಳೊಡನೆ ಅವಳ ಅಜ್ಜ ಕಟಕ ಬಿಟ್ಟು ಎಲ್ಲಿಯೋ ಹೋಗಿಬಿಟ್ಟಿರುವದರಿಂದ ಅದನ್ನು ಮುಟ್ಟಿಸುವದಾಗುವದಿಲ್ಲ. ಶೈಲ ಅವರನ್ನು ಕಂಡುಹಿಡಿಯಲಾರದೆ ನೀಲಗಿರಿಗೆ ಬಂದು ಅಲ್ಲಿ ಒಬ್ಬ ಶ್ರೀಮಂತರ ತೋಟದಲ್ಲಿ ಕೃಷಿತಜ್ಞನಾಗಿ ಕೆಲಸಕ್ಕೆ ನಿಂತಿರುವಾಗ ಆ ಶ್ರೀಮಂತರ ಗೆಳೆಯರಾಗಿದ್ದ ಪ್ರಭೆಯ ಅಜ್ಜ ಅವಳೊಡನೆ ಆ ತೋಟದಲ್ಲಿದ್ದ ಬಂಗಲೆಯಲ್ಲಿ ಬಂದು ವಾಸಿಸುವರು. ಆದರೆ ಅವರಿಗೆ ಪರಸ್ಪರ ಪರಿಚಯವಿಲ್ಲ. ದೃಢ ಬುದ್ಧಿಯ ಈ ತೋಟಗಾರನ ಬಗೆಗೆ ಕುತೂಹಲಗೊಂಡ ಪ್ರಭೆಗೆ ಕ್ರಮೇಣ ಅವನು ತನ್ನ ತಂದೆಯಿಂದ ವಜ್ರಹಾರವನ್ನು ತಂದ ಯುವಕನಿವನೆಂದು ತಿಳಿಯುವದು. ಅಷ್ಟರಲ್ಲಿ ಯುದ್ಧ ಮುಗಿದಿದ್ದು ಎಲ್ಲರ ಸಮಾಗಮವಾಗುವದು. ಪ್ರಭೆಯ ವಿವಾಹ ಶೈಲನೊಡನಾಗುವದೆಂಬ ಸೂಚನೆಯೊಡನೆ ಕಥೆ ಮುಗಿಯುತ್ತದೆ.

ಬ್ರಹ್ಮದೇಶದಲ್ಲಿ ಹಿಂದೀಯರ ಬಗ್ಗೆ ಇರುವ ಕ್ಲೇಷ, ೧೯೪೨ ರ ಯುದ್ಧ ಪರಿಸ್ಥಿತಿ, ರಾಜಕೀಯ ಜ್ವಾಲಾಮುಖಿ ಮೊದಲಾದ ಹಲವು ವಿಷಯಗಳು ಕಥೆಯ ಉದ್ದಕ್ಕೂ ಬಂದು ಹೋಗುತ್ತವೆ. ಆದರೆ ಅವೆಲ್ಲವುಗಳು ಕಥೆಯ, ಪಾಕಕ್ಕೆ ಸನ್ನಿವೇಶಕ್ಕೆ ಪೋಷಕವಾಗುವಂತೆ ಹೆಣೆಯುವದರಲ್ಲಿ ಮಾತ್ರ ಲೇಖಕರು ಅಷ್ಟು ಯಶಸ್ವಿಯಾಗಿಲ್ಲ. ೮೮ ಪುಟಗಳ "ಕಾದಂಬರಿ"ಯಲ್ಲಿ ಅವೆಲ್ಲವುಗಳ ಶುದ್ಧ ಆಕೃತಿಯನ್ನು ಮನಸ್ಸಿನಲ್ಲಿ ಮೂಡಿಸಲು ಅವಶ್ಯವಿರುವಷ್ಟು ಸ್ಥಳವಿಲ್ಲ. ಪ್ರತ್ಯಕ್ಷ ಜ್ಞಾನದ ಅಪರ್ಯಾಪ್ತಿಯೂ ಲೇಖಕರನ್ನು ಹೆಚ್ಚು ವಿಸ್ತರಿಸದಂತೆ ತಡೆದಿರಬಹುದೇನೊ. ಹೀಗೆ ಕಥೆಯಲ್ಲಿ ಬಿಗುಹು ತಪ್ಪಿ ಪರಿಣಾಮಕಾರಿಯಾಗದಂತಾಗಿದೆ. ಉಪಪಾತ್ರನಾದ "ಸೋಮಯ್ಯ"ನ ಬಗ್ಗೆ ಅನವಶ್ಯಕ ವಿಸ್ತರಣೆಯಾಗಿದೆ.

ಶ್ರೀ "ಧನ್ವಂತ"ರು ಈ ಪುಸ್ತಕವನ್ನು ಸರಿಯಾಗಿ ತಿದ್ದಿ ಮುದ್ರಣಕ್ಕೆ ಕಳಿಸಬೇಕಾಗಿತ್ತು. ಈಗಿರುವಂತೆ ಅದರೆ ಅವರಿಗಾಗಿ ಬೇರೆ ವ್ಯಾಕರಣವನ್ನೂ ಕೋಶವನ್ನೂ ಸೃಷ್ಟಿಸಬೇಕಾದೀತೇನೊ. ಭವಭೂತಿ ಹೇಳಿದಂತೆ "ವಾಚಂಅರ್ಥೋ(ನು ಧಾವತಿ" ಎಂದಾದರೆ ಮಾತ್ರ ಲೇಖಕರ ಪ್ರಯೋಗಗಳು ಕ್ಷಮ್ಯವಾದಾವು. ಅಂಥ ಖ.ಷಿ ಪಟ್ಟದ ಭಲ ಲೇಖಕರಿದೆಯೆ? ಪ್ರಥಮಾ ವಿಭಕ್ತಿಯ "ಉ" ಪ್ರತ್ಯಯದ ನ್ಯಾಯವಾದ ಲೋಪದೊಡನೆ ದ್ವಿತೀಯಾ, ಷಷ್ಠೀ ವಿಭಕ್ತಿಗಳಿಗೂ ಅನ್ಯಾಯದ ಅರ್ಧಚಂದ್ರವನ್ನಿತ್ತು ಲೇಖಕರು ಕರ್ತೃ ಕರ್ಮ ಕ್ರಿಯಾ ಭ್ರಾಂತಿಯನ್ನು ಹುಟ್ಟಿಸಿದ್ದಾರೆ.

ಮೌಲಾನಾ ಅಬುಲ್‌ಕಲಾಂ ಆಜಾದ

ಲೇ:— ಗೊರೂರು ರಾಮಸ್ವಾಮಯ್ಯಂಗಾರ್. ರಾಷ್ಟ್ರೀಯ ಸಾಹಿತ್ಯ ಸಮಿತಿ ಗೊರೂರು (ಹಾಸನ ಜಿಲ್ಲಾ). ಕ್ರೌನ ಅಷ್ಟಪತ್ರದ ೯೬ ಪುಟಗಳು. ಬೆಲೆ ಹನ್ನೆರಡಾಣೆ.

ಕನ್ನಡದಲ್ಲಿ ಹಲವಾರು ಉಪಯುಕ್ತ ಪುಸ್ತಕಗಳನ್ನು ಬರೆದು ಕನ್ನಡಿಗರಿಗೆಲ್ಲ ಚಿರಪರಿಚಿತರಾದ ಶ್ರೀ ಗೊರೂರರು ಈ ಸಲ ಅಬುಲ್‌ಕಲಂ ಅಜಾದರ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಹಿಂದೀ ಮುಖಂಡರಲ್ಲಿ ಅಜಾದರದು ಉಜ್ವಲ ಜೀವನ. ರಾಷ್ಟ್ರೀಯ ಮುಸಲ್ಮಾನರಲ್ಲಿ ಹಿಂದುಸ್ತಾನದ ಸ್ವಾತಂತ್ರ್ಯದ ಬಗ್ಗೆ ಉತ್ಸಾಹ ಹುಟ್ಟಿಸಿದ ಮುಸಲ್ಮಾನ ಮುಖಂಡರಲ್ಲಿ ಅಜಾದರೇ ಪ್ರಮುಖರೆಂದು ಹೇಳಬಹುದು. ಆರು ವರ್ಷಗಳ ವರೆಗೆ ಕಾಂಗ್ರೆಸ್ಸಿನ ಸೂತ್ರಗಳನ್ನು ಹಿಡಿದು ಅದರ ಸ್ಥಾನಮಾನಗಳನ್ನು ಕಾಯ್ದುಕೊಂಡು ಇಡೀ ಜಗತ್ತಿನಲ್ಲಿ ಕಾಂಗ್ರೆಸ್ಸಿನ ಧ್ಯೇಯ ಧೋರಣಗಳು ಗೊತ್ತಾಗುವಂತೆ ಮಾಡಿದ ಶ್ರೇಯಸ್ಸು ಬಹುಮಟ್ಟಿಗೆ ರಾಷ್ಟ್ರಪತಿ ಅಜಾದರಿಗೆ ಸಲ್ಲುವದು. ದೇಶದ್ರೋಹಿಗಳಾದ ಹಲವು ಜಾತಿಬಾಂಧವರು ತಮ್ಮನ್ನು ಎಷ್ಟೇ ಹೀಯಾಳಿಸಿದರೂ ಅಂಜದೆ ಅಳುಕದೆ ಅಜಾದರು ರಾಷ್ಟ್ರಕಾರ್ಯವನ್ನು ಒಂದೇ ಸವನೆ ಮಾಡುತ್ತಿರುವರು. ಇಂಥ ರಾಷ್ಟ್ರಪುರುಷರ ಜೀವನವನ್ನು ಶ್ರೀ ಗೊರೂರರು ತಿಳಿಯಾದ ಭಾಷೆಯಲ್ಲಿ ಬರೆದು ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ. ಅಜಾದರು ರಾಷ್ಟ್ರಕಾರ್ಯದಲ್ಲಿ ಧುರೀಣರಿದ್ದಂತೆ ಇಸ್ಲಾಮ ಧರ್ಮದಲ್ಲಿಯೂ ಒಳ್ಳೆ ಪಂಡಿತರಾಗಿರುವರು. ಅರಬ್ಬಿ ಪರ್ಶಿಯನ್ ಭಾಷೆಗಳ ಮೇಲೆ ಇವರಿಗೊಳ್ಳೆ ಪ್ರಭುತ್ವ. ಅಂತೆಯೆ ಮುಸಲ್ಮಾನರು ಇವರನ್ನು ಗೌರವಿಸುತ್ತಿರುವರು. ಭಾರತ ಸ್ವತಂತ್ರವಾದ ಹೊರತು ಜಗತ್ತಿಗೆ ಶಾಂತಿಯಿಲ್ಲೆಂದು ಮೌಲಾನಾ ಅಜಾದರು ಕೊಟ್ಟ ಸಂದೇಶ ತರುಣರಲ್ಲಷ್ಟೇ ಅಲ್ಲದೆ ವೃದ್ಧರಲ್ಲಿ ಕೂಡ ಸ್ವಾತಂತ್ರ್ಯ ಪ್ರೇಮವನ್ನು ಹುಟ್ಟಿಸುತ್ತಿದೆ. ರಾಷ್ಟ್ರೀಯ ಸಾಹಿತ್ಯ ಸಮಿತಿಯವರು ಕನ್ನಡ ಸಾಹಿತ್ಯದ ಹಾಗು ರಾಷ್ಟ್ರದ ಸೇವೆಯನ್ನು ಇಂತಹ ಪುಸ್ತಕಗಳಿಂದ ಮಾಡುತ್ತಿರುವದು ಅಭಿನಂದನೀಯವಾಗಿದೆ. ಕನ್ನಡಿಗರು ಅವರ ಕಾರ್ಯಕ್ಕೆ ಸಕ್ರಿಯ ಬೆಂಬಲ ಕೊಡಬೇಕೆಂದು ಕೇಳಿಕೊಳುತ್ತೇವೆ.

ಎಲ್ಲರಿಗೂ ಉದ್ಯೋಗ

ಲೇ:- ಬಿ ಟಿ. ರಣದಿವೆ. ಜನತಾ ಸಾಹಿತ್ಯ ಹುಬ್ಬಳ್ಳಿ. ಕ್ರೌನ ಅಷ್ಟಪತ್ರದ ೩೨ ಪುಟಗಳು. ಬೆಲೆ ಮೂರಾಣೆ.

ಕಮ್ಯುನಿಸ್ಟ ಪಕ್ಷದ ಧುರೀಣರಾದ ಶ್ರೀ ಬಿ. ಟಿ. ರಣದಿವೆಯವರು ಬರೆದ ಪುಸ್ತಕದ ಅನುವಾದವನ್ನು ಶ್ರೀ ಕುಳಕುಂದ ಶಿವರಾಯರು ತಿಳಿಯಾದ ಭಾಷೆಯಲ್ಲಿ ಬರೆದಿರುವರು. ಕಮ್ಯುನಿಸ್ಟ ಪಕ್ಷದ ಧೋರಣೆಗನುಸಾರವಾಗಿ ಶ್ರೀ ರಣದಿವೆಯವರು ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು ಉಪಾಯಗಳನ್ನು ಸೂಚಿಸಿದ್ದಾರೆ. ಅದರ ಜತೆಯಲ್ಲಿಯೆ ತಮ್ಮ ಪಕ್ಷದ ಪ್ರಚಾರವನ್ನೂ ಈ ಚಿಕ್ಕ ಪ[illegible] ಮಾಡಿದ್ದಾರೆ.

ಎಲ್ಲರಿಗೂ ಆಹಾರ

ಲೇ:— ಶ್ರೀ ಗಂಗಾಧರ ಅಧಿಕಾರಿ ಜನತಾ ಸಾಹಿತ್ಯ, ಹುಬ್ಬಳ್ಳಿ. ಕ್ರೌನ ಅಷ್ಟಪತ್ರದ ೨೦ ಪುಟಗಳು. ಬೆಲೆ ಮೂರಾಣೆ.

ಕಮ್ಯುನಿಸ್ಟ ಪಕ್ಷದವರು ಹೊರಡಿಸಿದ ಮತ್ತೊಂದು ಪುಸ್ತಿಕೆ. ಸಂತೆಮನೆ ಕೃಷ್ಣಮೂರ್ತಿಯವರು ಇದನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ ಬಂಗಾಲದ ಬರಗಾಲದ ಅನಾಹುತವನ್ನೆ ತಳಹದಿಯಾಗಿಟ್ಟುಕೊಂಡು ಹಿಂದುಸ್ತಾನದಲ್ಲಿ ಆಹಾರ ಕೊರತೆಯೆಷ್ಟಿದೆಂಬದನ್ನು ವಿವರಿಸಿ ಎಲ್ಲರಿಗೂ ಆಹಾರ ಸಿಕ್ಕುವಂತಾಗಬೇಕಾದರೆ ಏನು ಮಾಡಬೇಕೆಂಬದನ್ನು ಕಮ್ಯುನಿಸ್ಟರ ರೀತಿಯಲ್ಲಿ ವಿವರಿಸಿದ್ದಾರೆ.

ಭಾರತದ ಸರದಾರ 'ವೀರ ವಲ್ಲಭಭಾಯಿ ಪಟೇಲ'

ಶ್ರೀ ನಾಡಿಗ ಕೃಷ್ಣಮೂರ್ತಿ. ಶ್ವೇತ ಕುಸುಮಮಾಲೆಯ ಮೊದಲನೇ ಪುಷ್ಪ ಪ್ರಕಾಶಕರು ಎಸ್. ಎ. ಸಾವಂತ, ಬೆಳಗಾವಿ ಕ್ರೌನ ಅಷ್ಟಪತ್ರದ ೩೬ ಪುಟಗಳು. ಬೆಲೆ ಎಂಟಾಣೆ

ಹಿಂದುಸ್ತಾನದ ಧುರೀಣರಲ್ಲಿ ಮೊದಲನೆ ಸ್ಥಾನದಲ್ಲಿರುವ ಸರದಾರ ವಲ್ಲಭಭಾಯಿ ಪಟೇಲರ ಜೀವನ ಚರಿತ್ರೆಯನ್ನು ಸಂಕ್ಷೇಪತಃ ಈ ಪುಸ್ತಿಕೆಯಲ್ಲಿ ಚಿತ್ರಿಸಲಾಗಿದೆ. ಅವರು ಹಿಂದುಸ್ತಾನಕ್ಕೆ ಸಲ್ಲಿಸಿದ ಸೇವೆಯನ್ನು ನಾಡಿಗರು ಮನಮುಟ್ಟುವಂತೆ ಬಣ್ಣಿಸಿದ್ದಾರೆ. ಬಾರ್ಡೋಲಿ ರೈತರಿಗಾಗಿ ಸರದಾರರು ಪಟ್ಟ ಪರಿಶ್ರಮವನ್ನು ನೋಡಿಯೆ ಅವರಿಗೆ ಸರದಾರರೆಂದು ಗೌರವಿಸಲಾಯಿತು. ವಜ್ರದೇಹಿ ಸರದಾರರೆಂದು ನಾಡಿಗರು ಸಂಬೋಧಿಸಿದ್ದು ಯಥಾರ್ಥವಾಗಿದೆ. ಕನ್ನಡ ತರುಣರು ಇದನ್ನೋದಿ ಭಾರತಾಂಬೆಯ ಬಂಧವಿಮೋಚನೆಗಾಗಿ ಅಣಿಯಾದರೆ ಲೇಖಕರು ಪಟ್ಟ ಪರಿಶ್ರಮ ಸಾರ್ಥಕವಾಗುವದು.

The Latest Fad

By Acharya J. B. Kripalani. Vora & Co. Publishers Ltd., 3 Round Building, Kalbadevi Road, Bombay.

ಗಾಂಧೀಜಿಯ ತತ್ವಗಳಿಗೂ ಉಪದೇಶಗಳಿಗೂ ತಾರ್ಕಿಕ ವಿವರಣೆ, ವ್ಯಾಖ್ಯೆಗಳನ್ನು ಕೊಡುವದರಲ್ಲಿ ಎತ್ತಿದ ಕೈಯಾದ ಆಚಾರ್ಯ ಕೃಪಲಾಣಿಯವರು ಈ ಪುಸ್ತಕದಲ್ಲಿ ಗಾಂಧೀಜಿಯ "ಸದ್ಯದ ಹುಚ್ಚಾದ" ಮೂಲ ಶಿಕ್ಷಣದ ಸರ್ವತೋಮುಖ ಪರ್ಯಾಲೋಚನೆಯನ್ನು ಮಾಡಿದ್ದಾರೆ. ೧೯೩೮ ರಲ್ಲಿ ಪ್ರಸಿದ್ಧವಾದ ಇದರ ಮೊದಲನೆಯ ಆವೃತ್ತಿಯಲ್ಲಿ ಕೃಪಲಾಣಿಯವರು ಗಾಂಧೀಜಿಯ ಈ "ಹುಚ್ಚು" ಹೇಗೆ ಹುಚ್ಚಲ್ಲ, ಜಾಣತನವೆಂದು ತರ್ಕಬದ್ಧವಾಗಿ ಪ್ರತಿಪಾದಿಸಿದ್ದರು. ಅಂದಿನಿಂದೀಚೆಗೆ ಬಿಹಾರ, ಕಾಶ್ಮೀರ ಮೊದಲಾದೆಡೆಗಳಲ್ಲಿ ಈ ಶಿಕ್ಷಣ ಪದ್ಧತಿಯ ಪ್ರಯೋಗಗಳು ನಡೆದು ಅವರ ಪ್ರತಿಪಾದನೆಯ ಸತ್ಯತೆಯನ್ನು ಸಿದ್ಧಗೊಳಿಸಿವೆ. ಮೂಲಶಿಕ್ಷಣ ಪದ್ಧತಿಯಿಂದ ಕಲಿತ ವಿದ್ಯಾರ್ಥಿಗಳು ಹೇಗೆ ಹೆಚ್ಚು ನೈತಿಕ ಹಾಗು ಬೌದ್ಧಿಕ ಸಾಮರ್ಥ್ಯವನ್ನು ತೋರಿದರು, ಜೀವನದ ಕಣದಲ್ಲಿ ಧುಮ್ಮಿಕ್ಕುವಾಗ ಅವರು ಹೇಗೆ ಹೆಚ್ಚು ಆತ್ಮವಿಶ್ವಾಸವನ್ನು ಪ್ರದರ್ಶಿಸಿದರು, ಇತ್ಯಾದಿ ವಿವರಗಳನ್ನು ಇಲ್ಲಿ ಕೊಡಲಾಗಿವೆ. ಮೂಲ ಶಿಕ್ಷಣ ಇಂದು ಹೆಚ್ಚು ಕಡಿಮೆ ಹಿಂದುಸ್ತಾನದ ಕಾಂಗ್ರೆಸ್ ಪ್ರಾಂತಗಳಲ್ಲೆಲ್ಲ ಸಾಮಾನ್ಯವಾಗಿ ಅಂಗೀಕೃತವಾದ ಧೋರಣೆಯಾಗಿ ಬಿಟ್ಟಿರುವಾಗ ಶಿಕ್ಷಕರು ಈ ಪುಸ್ತಕದಿಂದ ವಿಶೇಷ ಲಾಭವನ್ನು ಹೊಂದಬಹುದು. ಈ ಪ[illegible]ತಿಯ ವಿಷಯಕ್ಕೆ ಪೂರ್ವಗ್ರಹಗಳನ್ನಿಟ್ಟುಕೊಂಡವರು ಆಚಾರ್ಯ ಕೃಪಲಾಣಿಯವರ ಈ ಗ್ರಂಥವನ್ನೋದಿದರೆ ಅವರ ಎಷ್ಟೋ ಸಂಶಯಗಳಿಗೆ ಸಮಾಧಾನ ದೊರಕದಿರದು.

Varshaphal or Hindu Progressed Horoscope

by Raman, (Rs. 3/)

Strijataka or Female Horoscopy

by Prof. B. Suryanarayan Rao (Rs. 3/-).

both published by Raman Publications, Malleswaram, Bangalore.

ಆಧುನಿಕ ಕಾಲದಲ್ಲಿ ಹಿಂದೂ (ಭವಿಷ್ಯ) ಜ್ಯೋತಿಷಕ್ಕೆ ಪ್ರೊ. ಸೂರ್ಯನಾರಾಯಣರು ಮತ್ತು ಅವರ ಮೊಮ್ಮಕ್ಕಳಾದ ಶ್ರೀ ಬಿ. ವಿ. ರಮಣರು ಮಾಡಿದಷ್ಟು ಸೇವೆಯನ್ನು ಮಾಡಿದವರು ವಿರಳ. ಮೇಲಿನವು ಅವರಿಬ್ಬರು ಈ ವಿಷಯದಲ್ಲಿ ಬರೆದಿರುವ ಅನೇಕ ಆದರಣೀಯ ಪುಸ್ತಕಗಳಲ್ಲೆರಡು. ಮೊದಲನೆಯದು ಮೂರನೆಯ ಸಂಸ್ಕರಣದಲ್ಲಿ ಮತ್ತು ಎರಡನೆಯದು ನಾಲ್ಕನೆಯ ಸಂಸ್ಕರಣದಲ್ಲಿ ಈಗ ಪ್ರಕಟವಾಗುತ್ತಿರುವುದು ಅವುಗಳಿಗೆ ದೊರೆತಿರುವ ಆದರಕ್ಕೆ ಸಾಕ್ಷಿಯಾಗಿದೆ. ಸ್ತ್ರೀ ಜಾತಕದ ಸೂಕ್ಷ್ಮ ವಿವೇಚನೆಯನ್ನು ಮೊದಲನೆಯದು ಮಾಡುತ್ತಿದ್ದರೆ ಎರಡನೆಯದು ಸ್ವಲ್ಪ ಅಲಕ್ಷ್ಯಕ್ಕೆ ಗುರಿಯಾದ ಶ್ರೀ ನೀಲಕಂಠ ಮತ್ತು ಕೇಶವರೆಂಬ ವಿದ್ವಾಂಸರ ತಾಜಕ ಪದ್ಧತಿಯಲ್ಲಿ ಜಾತಕನ ವರ್ಷಫಲವನ್ನು ಹೇಗೆ ಅರಿತುಕೊಳ್ಳಬಹುದೆಂದು ವಿವರಿಸುತ್ತದೆ. ಭವಿಷ್ಯ ಜ್ಯೋತಿಷದ ನಾಡಿಗಳನ್ನು ಅರಿತುಕೊಳ್ಳಲಪೇಕ್ಷಿಸುವವರು ಅವಶ್ಯ ಸಂಗ್ರಹಿಸಬೇಕಾದ ಪುಸ್ತಕಗಳಿವು.

—ಪುಟ೧೬ಕ್ಕೆ

ಸಂಪಾದಕೀಯ * * * ಟೀಕೆ-ಟಿಪ್ಪಣೆಗಳು

ಮುಂಬಯಿ ಆಹಾರ ಪರಿಸ್ಥಿತಿ

ಮುಂಬಯಿ ಪ್ರಾಂತದ ಆಹಾರ ಪರಿಸ್ಥಿತಿ ಇದೀಗ ಬಿಕ್ಕಟ್ಟಿಗೆ ಬಂದಿದೆ. ಈ ವರ್ಷಾಂತ್ಯದ ವರೆಗೆ ೨೨೪೦೦೦ ಟನ್ ಆಹಾರ ಧಾನ್ಯಗಳ ಕೊರತೆಯಿದೆಂದು ಸರಕಾರದವರು ಲೆಕ್ಕ ಹಾಕಿದ್ದಾರೆ. ಹೊರಗಿನಿಂದ, ಪರಪ್ರಾಂತಗಳಿಂದ ಆಹಾರ ಧಾನ್ಯಗಳು ಬರದಿದ್ದರೆ ಪರಿಸ್ಥಿತಿ ಭೀಕರವಾಗಬಹುದು ಹೀಗಿದ್ದರೂ ನಿರಾಶೆಹೊಂದುವ ಕಾರಣವಿಲ್ಲೆಂದು ಆಹಾರ ಮಂತ್ರಿಗಳು ಆಶ್ವಾಸಿಸುತ್ತಾರೆ. ಈ ವರ್ಷ ಪ್ರಾಂತದಲ್ಲೆಲ್ಲ ಸಾಧಾರಣ ಸಾಕಷ್ಟು ಮಳೆಯಾಗಿದ್ದು ಬೆಳೆಗಳೂ ಚೆನ್ನಾಗಿವೆಂದು ವರದಿ ಬಂದಿದೆ. ಅನುಕೂಲ ಗಾಳಿಯಿಂದ ಬೆಳೆ ಚೆನ್ನಾಗಿ ಬಂದರೆ ಪ್ರಾಂತದ ಆಹಾರದ ಸಮಸ್ಯೆ ಬಗೆಹರಿಯುವುದು. ಆದರೆ ಸರಕಾರದ ಧಾನ್ಯ ಎತ್ತುವಳಿ ಕಾರ್ಯದಲ್ಲಿ ರೈತರೆಲ್ಲ ಮನಮುಟ್ಟಿ ಸಹಕರಿಸಬೇಕು. ಇದೀಗ ಕೇಂದ್ರದಲ್ಲಿ ನಡುಗಾಲ ಸರಕಾರ ಸ್ಥಾಪಿತವಾದ್ದರಿಂದ ಹೊರಗಿನಿಂದ ಆಹಾರ ಪದಾರ್ಥಗಳನ್ನು ತರಿಸಿಕೊಳ್ಳುವಲ್ಲಿ ಹೆಚ್ಚು ಪ್ರಯತ್ನ ನಡೆಯಬಹುದು. ಮುಂಬಯಿ ಪ್ರಾಂತದಲ್ಲಿ ಧಾನ್ಯ ಬೆಳೆಸುವುದರಲ್ಲಿ ಸರಕಾರ ಹೆಚ್ಚು ದಕ್ಷತೆ ವಹಿಸಿ ರೈತರಿಗೆ ಸರ್ವವಿಧ ಸಹಾಯ ಮಾಡಲು ಮುಂದಾದರೆ ಮುಂಬಯಿ ಪ್ರಾಂತದಲ್ಲಿಯ ಕೊರತೆ ಹಿಂಗಿ ಅದು ಉಳಿತಾಯದ ಪ್ರಾಂತವಾಗುವುದೆಂಬಲ್ಲಿ ಸಂದೇಹವಿಲ್ಲ. ಮುಂಬಯಿ ಜನತಾ ಆಹಾರ ಮಂಡಳದ ಅಧ್ಯಕ್ಷ ಶ್ರೀ ಮೀನೂ ಮಸಾನಿಯವರು ಇದೇ ಮಾತನ್ನು ಆಹಾರ ಮಂಡಳದ ಸಭೆಯಲ್ಲಿ ಹೇಳಿರುವರು. ಇತ್ತ ಸರಕಾರದವರು ಮತ್ತು ಸಾರ್ವಜನಿಕರು ಗಮನಿಸಬೇಕಾದುದು ಅವಶ್ಯವಾಗಿದೆ. ಹಿಂದಿನ ಸರಕಾರದವರು ಒಕ್ಕಲತನ ಅಭಿವೃದ್ಧಿಯ ಮಾತುಗಳನ್ನೇನೊ ಬೇಕಷ್ಟು ಆಡುತ್ತಿದ್ದರು. ಆದರೆ ಕೃತಿಯಲ್ಲಿ ಯೋಜನೆಗಳು ಇಳಿಯಬೇಕಾದರೆ ದ್ರಾವಿಡೀ ಪ್ರಾಣಾಯಾಮದ ಧೋರಣದಿಂದ ಅಡೆತಡೆಗಳುಂಟಾಗುತ್ತಿದ್ದವು ಅದರಿದೀಗ ಲೋಕಪ್ರಿಯ ಲೋಕಪ್ರಾತಿನಿಧಿಕ ಸರಕಾರ ಅಸ್ತಿತ್ವದಲ್ಲಿ ಬಂದಿದ್ದರಿಂದ ಅದು ಹೆಚ್ಚು ಆಸ್ಥೆಯಿಂದ ಆಹಾರ ಪದಾರ್ಥಗಳು ಹೆಚ್ಚಾಗಿ ಬೆಳೆಯುವಂತೆ ಉಪಾಯಗಳನ್ನು ಯೋಜಿಸಬೇಕು. ರೈತರಾದರೂ ಹೊಲಗಳಲ್ಲಿ ಮನಮುಟ್ಟಿ ಧಾವತಿ ಮಾಡಿ ಹೆಚ್ಚು ಕಾಳು ಬರುವಂತೆ ನೋಡಿಕೊಳ್ಳಬೇಕು. ಮಳೆಯನ್ನವಲಂಬಿಸುವ ಬೆಳೆ ಯಾವಾಗಲೂ ಅನಿಶ್ಚಿತ. ಅಂತೆಯೆ ಪ್ರಾಂತದಲ್ಲಿ ನೀರಾವರಿಗಳನ್ನು ಹೆಚ್ಚಿಸಲು ಸರಕಾರವನ್ನು ಕೇಳಿಕೊಳ್ಳುವುದು. ಯಾವಾಗಲೂ ಪರರನ್ನವಲಂಬಿಸುವುದಕ್ಕಿಂತ ಪ್ರಾಂತವನ್ನು ಸ್ವಾವಲಂಬಿಯನ್ನಾಗಿ ಮಾಡಿಕೊಳ್ಳುವುದು ಯಾವಾಗಲೂ ಶ್ರೇಯಸ್ಕರ. ಸರಕಾರದವರು ಮತ್ತು ರೈತರು ಈ ಧೋರಣೆಯನ್ನಿಟ್ಟುಕೊಂಡು ಆಹಾರ ಪರಿಸ್ಥಿತಿ ಸುಧಾರಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಸೀದಾ ಪದ್ಧತಿ

ಯುದ್ಧಕಾಲದಲ್ಲಿ ಸೀದಾ ಪದ್ಧತಿಯನ್ನು ಜಾರಿಯಲ್ಲಿ ತರಲಾಯಿತು. ಈಗ ಯುದ್ಧ ನಿಂತಿದ್ದರೂ ಆಹಾರ ಪದಾರ್ಥಗಳ ಕೊರತೆಗಾಗಿ ಸೀದಾ ಪದ್ಧತಿ ಇನ್ನೂ ಜಾರಿಯಲ್ಲಿದೆ. ಅಷ್ಟೇ ಅಲ್ಲ ಸೀದಾ ಪದಾರ್ಥಗಳ ಪ್ರಮಾಣವನ್ನು ಕಡಿಮೆ ಮಾಡಿರುವದಲ್ಲದೆ ಅನಾರೋಗ್ಯಕರವಾದ ಪದಾರ್ಥಗಳನ್ನೂ ಪೂರಯಿಸಲಾಗುತ್ತದೆ. ಜೋಳದ ಪೂರಯಿಕೆ ಸಾಕಷ್ಟಿಲ್ಲೆಂದು ಇದೀಗ ಗೋವಿನ ಜೋಳವನ್ನು ಒತ್ತಾಯದಿಂದ ಕೊಡಲಾಗುತ್ತದೆ. ಗೋವಿನ ಜೋಳವನ್ನೆಂದೂ ತಿನ್ನದಿದ್ದ ಜನರು ಒಮ್ಮೆಲೆ ಅದನ್ನು ತಿನ್ನಹತ್ತಿದರೆ ಅವರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮವಾಗುವಲ್ಲಿ ಸಂದೇಹವಿಲ್ಲ. ಜನತೆಯ ಆರೋಗ್ಯ ರಕ್ಷಣೆ ಅತ್ಯವಶ್ಯವಾಗಿದ್ದರಿಂದ ಸರಕಾರದವರು ಒಳ್ಳೆ ಪದಾರ್ಥಗಳನ್ನು ಆಯಾ ಭಾಗದ ಜನರ ನೈಸರ್ಗಿಕ ಆಹಾರ ಪದಾರ್ಥಗಳನ್ನು ಪೂರಯಿಸುವ ಧೋರಣವನ್ನು ವಹಿಸಬೇಕು. ಬರಿ ಅಕ್ಕಿ ತಿನ್ನುವವರಿಗೆ ಗೋದಿ ತಿನ್ನ ಹಚ್ಚುವದು, ಗೋದಿ ತಿನ್ನುವವರಿಗೆ ಅಕ್ಕಿ ತಿನ್ನ ಹೇಳುವದು, ಜೋಳದ ಮೋರೆ ನೋಡದಿದ್ದವರಿಗೆ ಒತ್ತಾಯದಿಂದ ಅದನ್ನು ಕೊಡುವುದು ಸಮಂಜಸವಾದ ಧೋರಣವಲ್ಲ. ಸರಕಾರದವರು ಸ್ವಲ್ಪ ದಕ್ಷತೆ ವಹಿಸಿದರೆ ಆಯಾ ಭಾಗದ ಜನರ ಆಹಾರ ಪದಾರ್ಥಗಳನ್ನೆ ಒದಗಿಸುವುದು ಶಕ್ಯವಿದೆ. ಮುಂಬಯಿ ಪ್ರಾಂತದ ಜನತಾ ಆಹಾರ ಮಂಡಳವು ಸೀದಾ ಪ್ರಮಾಣವನ್ನು ೧೧ ಔಂಸುಗಳಿಂದ ೧೬ ಔಂಸಗಳಿಗೇರಿಸಬೇಕೆಂದು ಕೇಳಿಕೊಂಡಿದ್ದು ಉಚಿತವಾಗಿದೆ ನಾವು ಮೇಲೆ ಹೇಳಿದಂತೆ ಸರಕಾರದವರು ಧಾನ್ಯ ಸಂಗ್ರಹ ಧೋರಣೆಯನ್ನು ಸಮರ್ಪಕವಾಗಿ ವಹಿಸಿದ್ದಾದರೆ ಜನತೆಗೆ ಅವಶ್ಯವಾದ ಆಹಾರ ಪದಾರ್ಥಗಳನ್ನು ಪೂರಯಿಸಲು ಕಠಿನವೇನೂ ಎನಿಸದು. ಆದರೆ ಜನತೆಯಾದರೂ ಸರಕಾರದ ಈ ಕಾರ್ಯದಲ್ಲಿ ಮನಸಾ ಸಹಕರಿಸಬೇಕು. ರೈತರು ಹೆಚ್ಚು ಕಾಳುಗಳನ್ನು ಸಂಗ್ರಹಿಸಿಟ್ಟುಕೊಳ್ಳದೆ ನಿಯಮದಂತೆ ತಮಗೆ ಬೇಕಷ್ಟು ಇಟ್ಟುಕೊಂಡು ಉಳಿದುದನ್ನೆಲ್ಲ ಸರಕಾರಕ್ಕೆ ಮಾರಿಬಿಡಬೇಕು. ಎಂದರೆ ಸರಕಾರದವರಿಗೆ ಸೀದಾ ಪ್ರಮಾಣಕ್ಕನುಸಾರವಾಗಿ ಧಾನ್ಯ ಒದಗಿಸಲು ಅನುಕೂಲವಾಗುವುದು. ಇನ್ನೊಂದು ಮಹತ್ವದ ಮಾತೆಂದರೆ ಸೀದಾ ಪದಾರ್ಥಗಳನ್ನು ನಿಯಮದಂತೆ ತೂಕ ಮಾಡಿ ಕೊಡದೆ ಅಳತೆ ಮಾಡಿ ಕೊಡುತ್ತಿರುವದು. ಕಾಳುಗಳನ್ನು ಅಳತೆ ಮಾಡುವುದರಿಂದ ನಿಯಮದಂತೆ ಸಿಕ್ಕಬೇಕಾದಷ್ಟು ಪದಾರ್ಥಗಳು ಸಿಕ್ಕುವುದಿಲ್ಲೆಂಬುದು ಅನುಭವದ ಮಾತು. ಅದುದರಿಂದ ತೂಕ ಮಾಡಿಯೆ ಆಹಾರ ಪದಾರ್ಥಗಳನ್ನು ಕೊಡುವುದನ್ನು ಪ್ರಾರಂಭಿಸಬೇಕು. ಮೇಲೆ ಹೇಳಿದಂತೆ ಸದ್ಯಕ್ಕೆ ಇಲ್ಲಿ ಕೊಡಲಾಗುತ್ತಿರುವ ಗೋವಿನಜೋಳ ಬಹಳ ಕೆಟ್ಟದ್ದು ಬರಿ ಜರಟು ಇದೆ. ತೂಕದಲ್ಲಿಯೂ ಬಹಳ ಕಡಮೆಯಾಗುವುವು ಇದನ್ನು ಮನದಂದು ಸರಕಾರದವರು ಒಳ್ಳೆ ಕಾಳುಗಳನ್ನು ತೂಕ ಮಾಡಿ ಕೊಡುವ ಯೋಜನೆ ಜಾರಿಯಲ್ಲಿ ತರಬೇಕು. ಲೋಕಪ್ರಾತಿನಿಧಿಕ ಸರಕಾರದವರು ಹೆಚ್ಚು ದಕ್ಷತೆ ವಹಿಸಿ ಅವಶ್ಯಕ ಬದಲಾವಣೆಗಳನ್ನು ಮಾಡಿ ಜನತೆಯ ಆರೋಗ್ಯದತ್ತ ಗಮನಿಸಿ ಸೀದಾ ಪದಾರ್ಥಗಳ ಪೂರಯಿಕೆಯನ್ನು ಮಾಡಬೇಕೆಂದು ಆಗ್ರಹಪಡಿಸುತ್ತೇವೆ.

ಮೊದಲ 'ಮುಖ್ಯ ಮಂತ್ರಿ'ಗಳ ಮನವಿ

ಹಿಂದುಸ್ತಾನ ಸರಕಾರದ ಮೊದಲನೆ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರು ಅವರು ಮೊನ್ನೆ ೮ ನೇ ತಾರೀಕು ರಾತ್ರಿ ಆಕಾಶವಾಣಿ ಭಾಷಣ ಮಾಡಿ ಜಗತ್ತಿಗೆ ಸಹಕಾರದ, ಶಾಂತಿಯ ಸಂದೇಶವನ್ನು ಬೀರಿರುವರು. ಅದರೆ ಅದೇ ಕಾಲಕ್ಕೆ ಅವರು ಹಿಂದುಸ್ತಾನವು ವಿಶ್ವಶಾಂತಿ ಪ್ರಯತ್ನದಲ್ಲಿ ಸರಿಸಮಾನ ಸ್ವತಂತ್ರ ರಾಷ್ಟ್ರದಂತೆ ಸಹಕರಿಸುವುದೆಂದೂ ಅನ್ಯೋನ್ಯ ಸಹಕಾರ ಶಾಂತಿ ಸ್ವಾತಂತ್ರ್ಯಗಳಿಂದ ಮುನ್ನಡೆವಲ್ಲಿ ಲೋಕಕಲ್ಯಾಣವಿದೆಂದು ಅವರು ಹೇಳಿದ್ದಾರೆ. ಜಗತ್ತಿನಲ್ಲಿಯ ಪ್ರಬಲ ರಾಷ್ಟ್ರಗಳು ಸಮಾನತೆಯ ಧೋರಣ ವಹಿಸದೆ ಸ್ವಾರ್ಥಪರರಾಗಿ ದುರ್ಬಲ ರಾಷ್ಟ್ರಗಳನ್ನು ಗಿಳಂಕೃತ ಮಾಡುವ ಇಲ್ಲವೆ ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಳ್ಳುವ ಧೋರಣ ವಹಿಸಿದ್ದರಿಂದಲೆ ಜಗತ್ತಿನಲ್ಲಿ ಅಶಾಂತಿ ನಲಿದಾಡುತ್ತಿದೆ, ಪರಸ್ಪರರಲ್ಲಿ ಘರ್ಷಣೆ ನಡೆಯುತ್ತಿದೆ, ಸುಖಸಮೃದ್ಧಿಗಳಿಲ್ಲದಂತಾಗಿದೆ. ಇನ್ನು ಮೇಲಾದರೂ ಈ ರಾಷ್ಟ್ರಗಳು ಜಗತ್ತಿನಲ್ಲಿ ನಿಜವಾದ ಶಾಂತಿ ಪ್ರಸ್ಥಾಪನೆಗಾಗಿ ಪ್ರಯತ್ನಿಸಬೇಕೆಂದು ಸೂಚಿಸಬಯಸುತ್ತೇವೆ. ಪಂಡಿತ ಜವಾಹರಲಾಲರು ಹಿಂದುಸ್ತಾನದ ಸಮಸ್ಯೆಯ ಬಗ್ಗೆಯೂ ಬಿಚ್ಚು ಮಾತುಗಳನ್ನು ಹೇಳಿದ್ದಾರೆ. ಮುಸ್ಲಿಂ ಲೀಗಿನವರು ವಹಿಸಿದ ಧೋರಣದಿಂದ ದೇಶದ ಸ್ವಾತಂತ್ರ್ಯಕ್ಕೆ ಎಷ್ಟೊಂದು ಆಘಾತವಾಗುತ್ತಿದೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಅಂತೆಯೆ ದೇಶ ಸ್ವಾತಂತ್ರ್ಯಕ್ಕಾಗಿ ಭಾರತೀಯರೆಲ್ಲರೂ ಸಹಕರಿಸಬೇಕೆಂದು ಪಂಡಿತ ಜವಾಹರಲಾಲರು ಬಿನ್ನವಿಸಿಕೊಂಡಿದ್ದಾರೆ. ಘಟನಾ ಸಮಿತಿಯ ಸಂಬಂಧದಲ್ಲಿ ಲೀಗಿನವರು ಪಟ್ಟ ಸಂಶಯ ನಿವಾರಣೆಗಾಗಿ ಪಂಡಿತರು ಆ ಬಗ್ಗೆ ಕಾಂಗ್ರೆಸ್ಸಿನ ಧೋರಣವನ್ನು ಸ್ಪಷ್ಟಪಡಿಸಿದ್ದಾರೆ. ಘಟನಾ ಸಮಿತಿಯೇನು ಮಲ್ಲಶಾಲೆಯಲ್ಲ. ಗುಂಪುಗಳಾಗಿ ಕುಳಿತುಕೊಂಡು ಪ್ರಾಂತಗಳ ಗುಂಪುಗಳ ರಚನೆಯ ಪ್ರಶ್ನೆಯನ್ನು ವಿಚಾರಿಸುವಾ ಎಂದು ಅವರು ಆಶ್ವಾಸಿಸಿ ಮುಸ್ಲಿಂ ಲೀಗಿನವರು ನಡುಗಾಲ ಸರಕಾರದಲ್ಲಿ ಮತ್ತು ಘಟನಾ ಸಮಿತಿಯಲ್ಲಿ ಸಹಕರಿಸಬೇಕೆಂದು ಕೇಳಿಕೊಂಡಿದ್ದಾರೆ. ಕಾಂಗ್ರೆಸ್ಸಿನ ಈ ಧೋರಣವು ಅತ್ಯಂತ ಸಮಂಜಸವಾಗಿದೆ. ಮುಸ್ಲಿಂ ಲೀಗಿನ ಸಹಕಾರ ಪಡೆಯಬೇಕೆಂದು ಕಾಂಗ್ರೆಸ್ಸು ಇಂತು ಪರಿಶ್ರಮ ಪಡುತ್ತಿದ್ದರೂ ಜಿನ್ನಾರವರು ಮತ್ತೆ ಮತ್ತೆ ಅಸಹಕಾರ ಧೋರಣ ವಹಿಸುತ್ತಿರುವುದು ಶೋಚನೀಯವಾಗಿದೆ.

ಕಾರ್ಗತ್ತಲೆ ಕವಿದಿದೆಯಂತೆ

ಪಂಡಿತ ಜವಾಹರಲಾಲರ ಈ ಸ್ಪಷ್ಟೀಕರಣದಿಂದ ಬ್ಯಾ. ಜಿನ್ನಾರವರು ತೃಪ್ತರಾದಂತೆ ತೋರುವುದಿಲ್ಲ. ಅವರು ಇತ್ತೀಚೆ ಡೇಲೀ ಮೇಲ ಪತ್ರಿಕೆಗೆ ಕೊಟ್ಟ ಸಂದರ್ಶನದಲ್ಲಿ ಪಂಡಿತ ನೆಹರೂರವರು ನಿಶ್ಚಿತ ಸೂಚನೆ ಮುಂದಿಟ್ಟಿಲ್ಲ. ಬರಿ ಸವಿ ಮಾತುಗಳಿಂದ ಪ್ರಯೋಜನವೇನೆಂದು ಕೇಳಿದ್ದಾರೆ. ಬ್ರಿಟಿಶ ಸರಕಾರದವರು ತಮ್ಮ ಬೆನ್ನಿನಲ್ಲಿ ಇರಿದದ್ದರಿಂದುಂಟಾದ ರಕ್ತಸ್ರಾವ ಇಂಥ ಶಬ್ದಗಳಿಂದ ವಾಕ್ಯಗಳಿಂದ ನಿಲ್ಲಲಾರದೆಂದೂ ಅವರು ಹೇಳಿರುವರು. ಬ್ರಿಟಿಶ ಕೂಲಿಕಾರ ಸರಕಾರ ಹೊಸ ಮತ್ತು ಅನನುಭವಿಕವಿದ್ದುದರಿಂದ ಹಿಂದುಸ್ತಾನದಲ್ಲಿಯ ಸಮಸ್ಯೆ ಅವರಿಗೆ ಸಂಪೂರ್ಣ ಗೊತ್ತಾಗದು. ಅದು ಕಾಂಗ್ರೆಸ್ಸಿನ ಬಲೆಗೆ ಬಿದ್ದು ಮೋಸ ಹೋಗಿರುವದೆಂದು ಹೇಳಿ ಹಿಂದು ಮತ್ತು ಮುಸಲ್ಮಾನ ಎರಡು ಪ್ರತ್ಯೇಕ ಜನಾಂಗಗಳಿದ್ದು ಅವೆರಡರಲ್ಲಿ ಕಾಯಂ ಒಡಂಬಡಿಕೆ ಶಕ್ಯವಿಲ್ಲೆಂದೂ ಪಾಕಿಸ್ತಾನ ಮತ್ತು ಹಿಂದುಸ್ತಾನ ಹೀಗೆ ದೇಶ ವಿಭಾಗಿಸುವದೆ ಅವಶ್ಯವೆಂದೂ ಹೇಳಿರುವರು. ತಮ್ಮ ಮುಂದೆ ಕಾರ್ಗತ್ತಲೆ ಕವಿದಿದೆ. ಗ್ರೇಟಬ್ರಿಟನ್, ಅಮೇರಿಕೆ ಹಾಗು ರಶಿಯಾಗಳಲ್ಲಿಯ ಸಂಬಂಧ ಕೆಟ್ಟು ಹೋದರೆ ಆ ಗಂಡಾಂತರ ಸಮಯದಲ್ಲಿ ಹಿಂದೀ ಮುಸಲ್ಮಾನರು ಎತ್ತ ನೂಕಲ್ಪಡುವರೆಂದು ಹೇಳುವದು ಸಾಧ್ಯವಿಲ್ಲೆಂದು ಅಭಿಪ್ರಾಯಪಟ್ಟು ಜನತೆಯ ಎದುರಿಗೆ ಭಾವೀ ಭಯಾನಕ ಚಿತ್ರವನ್ನು ರೇಖಿಸಿದ್ದಾರೆ ಇತರರೊಡನೆ ನನ್ನನ್ನು ಸರಿಸಮಾನತೆಯಿಂದ ನಡೆಸಿಕೊಂಡು ವಿಚಾರ ವಿನಿಮಯ ನಡೆಸುವದಕ್ಕಾಗಿ ಲಂಡನದಲ್ಲಿ ಸಭೆ ಸೇರಿಸಿ ನನ್ನನ್ನು ಆಮಂತ್ರಿಸಿದ್ದಾದರೆ ನಾನು ಒಪ್ಪಿಕೊಳ್ಳುವೆನು ಎಂದೂ ಹೇಳಿರುವರು. ಇದನ್ನೆಲ್ಲ ನೋಡಿದರೆ ಬ್ಯಾ. ಜಿನ್ನಾಸಾಹೇಬರು ಕಾಂಜರ್ವೇಟಿವ ಪಕ್ಷದವರು ಮತ್ತು ಚರ್ಚಿಲ್ಲರು ಕೊಟ್ಟ ಆಶ್ವಾಸನದಿಂದ ಹುರುಪುಗೊಂಡು ಪಾಕಿಸ್ತಾನ ಪಡೆಯಲು ಅವರ ಹಸ್ತಕರಾಗಬಯಸಿದ್ದು ವಿಷಾದಾಸ್ಪದವಾಗಿದೆ. ಕಾಂಜರ್ವೇಟಿವ್ ಪಕ್ಷದವರು ಹಿಂದೀ ಸ್ವಾತಂತ್ರ್ಯದ ಬಗ್ಗೆ ಎಷ್ಟೊಂದು ಪ್ರತಿಗಾಮಿಗಳಾಗಿರುವರೆಂಬುದು ಸುಸ್ಪಷ್ಟ. ಅಂಥವರ ಬೆನ್ನು ಮತ್ತೆ ಹತ್ತುವುದೆಂದರೆ ಈಗ ದೊರೆತ ಅಲ್ಪ ಸ್ವಲ್ಪ ಅಧಿಕಾರವನ್ನೂ ಬಿಟ್ಟುಗೊಟ್ಟಂತೆಯೆ ಸೈ. ಬ್ರಿಟಿಶ ಕೂಲಿಕಾರ ಸರಕಾರ ಬ್ಯಾ ಜಿನ್ನಾರವರ ಈ ಧೋರಣಕ್ಕೆ ಹೂಂಗುಟ್ಟುವ ಸಂಭವವಿಲ್ಲದ್ದರಿಂದ ಟೋರಿ ಪಕ್ಷದವರು ಅಧಿಕಾರಕ್ಕೆ ಬರುವವರೆಗೆ ಹೇಗಾದರೂ ಈ ಸಮಸ್ಯೆಯನ್ನು ಮುಂದಕ್ಕೆ ಹಾಕಬೇಕೆಂದು ಜಿನ್ನಾರವರು ಬಯಸಿದಂತೆ ತೋರುವದು. ಆದರೆ ಇದರಿಂದ ಮುಸಲ್ಮಾನರಿಗಾಗಲಿ ದೇಶಕ್ಕಾಗಲಿ ಯಾವದೆ ಬಗೆಯ ಲಾಭವಾಗದು. ಅದುದರಿಂದ ಬ್ಯಾ. ಜಿನ್ನಾರವರು ತಮ್ಮ ಈ ಘಾತಕ ಧೋರಣವನ್ನು ಬಿಟ್ಟುಗೊಟ್ಟು ಪಂಡಿತ ಜವಾಹರಲಾಲರ ಆಶ್ವಾಸನಕ್ಕೆ ಮನ್ನಣೆ ಕೊಟ್ಟು ನಡುಗಾಲ ಸರಕಾರದಲ್ಲಿ ಮತ್ತು ಘಟನಾ ಸಮಿತಿಯಲ್ಲಿ ಭಾಗವಹಿಸಬೇಕೆಂದು ಸೂಚಿಸುತ್ತೇವೆ.

ಕಿಡಿಗೇಡಿಗಳನ್ನು ದಂಡಿಸಿರಿ

ಬಂಗಾಲದ ಮುಖ್ಯ ಮಂತ್ರಿಗಳಾದ ಸುರ್ಹವರ್ದಿಯವರು ಹೊರಡಿಸಿದ ಪ್ರಕಟನೆಯಲ್ಲಿ ಅನಾಮಧೇಯ ಹಸ್ತಪತ್ರಿಕೆಗಳು ಉಲ್ಲೇಖವು ಬಂದಿದೆ ಜಾತೀಯತೆಯನ್ನು ಪ್ರೋತ್ಸಾಹಿಸುತ್ತಿರುವ ಇಂಥ ಹೆಸರಿಲ್ಲದ ಹಸ್ತಪತ್ರಿಕೆಗಳು ಮುದ್ರಿಸಲ್ಪಟ್ಟು ಕಲಕತ್ತೆಯಲ್ಲೆಲ್ಲ ಹಂಚಲ್ಪಟ್ಟವೆಂದು ಅವರು ಹೇಳಿರುವರು. ಇಂಥ ಹಸ್ತಪತ್ರಿಕೆಗಳಿಂದ ಜಾತೀಯ ಕ್ಲೇಷ ಮತ್ತಷ್ಟು ಹಬ್ಬುತ್ತಿದೆಂದು ಬೇರೆ ಹೇಳಬೇಕಿಲ್ಲ. ಈ ಕಿಡಿಗೇಡಿತನಕ್ಕೆ ಕಾರಣರಾದವರು ಯಾವ ಪಂಗಡದವರೇ ಇರಲಿ ಅವರನ್ನು ಹಿಡಿದುಕೊಡುವದು ಸಾರ್ವಜನಿಕರ ಕರ್ತವ್ಯವಾಗಿದೆ. ಅದರೆ ಅವರನ್ನು ಸಮಾಜದಿಂದ ಹೊರದೂಡಲು ಸಾಧ್ಯವಾಗುವದೆಂದೂ ಅವರು ಹೇಳಿರುವರು. ಸರಕಾರದಲ್ಲಿ ಬೇಕಾದಷ್ಟು ಸಿಪಾಯರು ಗುಪ್ತ ಸಿಪಾಯರು ಇರುವರು. ಅವರೆಲ್ಲ ಮನಸು ಮಾಡಿದರೆ ಸರಕಾರದವರು ವಿಧಿಸಿದರೆ ಇಂಥ ಕಿಡಿಗೇಡಿಗಳ ತಳಬುಡವನ್ನು ಸಹಜವಾಗಿ ಗೊತ್ತುಹಚ್ಚಬಹುದು. ಸಾರ್ವಜನಿಕರ ಮೇಲೆ ಈ ಹೊಣೆಯನ್ನು ಹೊರಿಸಿ ಸರಕಾರದವರು ತಮ್ಮ ಹೊಣೆಯನ್ನು ಜಾರಿಸಿಕೊಳ್ಳುವುದು ಯಾವ ರೀತಿಯಿಂದಲೂ ನ್ಯಾಯವಾಗದು. ಅದುದರಿಂದ ಸುರ್ಹವರ್ದಿಯವರು ಇಂಥ ಕಿಡಿಗೇಡಿಗಳ ಪತ್ತೆ ಹಚ್ಚಲು ಸಿ ಐ ಡಿ ಅಧಿಕಾರಿಗಳಿಗೆ ವಿಧಿಸಿ ತಪ್ಪಿತಸ್ಥರೆಂದು ಗೊತ್ತಾದವರನ್ನೆಲ್ಲ ದಂಡಿಸಿ ಇಂಥ ಉಪದ್ವ್ಯಾಪದ ಮೂಲವನ್ನು ಕಿತ್ತೊಗೆಯಬೇಕೆಂದು ಸೂಚಿಸುತ್ತೇವೆ.

ಅನುಚಿತ ಧೋರಣ

ಸಿಂಧದ ಮಂತ್ರಿಮಂಡಳದವರು ಮತ್ತು ಗವರ್ನರರು ಸ್ವೀಕರಿಸಿದ ಧೋರಣವು ಅತ್ಯಂತ ಅನ್ಯಾಯದ್ದು ಮತ್ತು ಹೊಣೆಗೇಡಿತನದ್ದಾಗಿದೆಂದು ಬೇರೆ ಹೇಳಬೇಕಿಲ್ಲ. ಸಿಂಧ ಮಂತ್ರಿಮಂಡಳದ ಧೋರಣೆಗೆ ಬೇಸತ್ತು ಶಾಸನ ಸಭಾ ಸದಸ್ಯರನೇಕರು ತಮ್ಮ ಬೆಂಬಲವನ್ನು ನಿರಾಕರಿಸಿದ್ದರಿಂದ ಸರಕಾರ ಪಕ್ಷಕ್ಕಿಂದು ಲೋಕಮತದ ಬೆಂಬಲವಿಲ್ಲದಂತಾಗಿದೆ. ಕೇವಲ ಯುರೋಪಿಯನ್‌ರ ಬೆಂಬಲದಿಂದ ಅಧಿಕಾರದಲ್ಲುಳಿಯಲು ಮಂತ್ರಿಮಂಡಳದವರು ಯುಕ್ತಿಪ್ರಯುಕ್ತಿಗಳನ್ನು ಮಾಡುತ್ತಿರುವರು. ಯುರೋಪಿಯನ್ ಸದಸ್ಯರನ್ನು ಕೂಡಿಸಿದರೂ ತಮ್ಮ ಪಕ್ಷದ ಸದಸ್ಯರ ಸಂಖ್ಯೆ ೨೯ ಮತ್ತು ವಿರೋಧಿ ಪಕ್ಷದವರ ಸಂಖ್ಯೆ ೩೦ ಆದುದರಿಂದ ತಮ್ಮ ಪಕ್ಷದ ಅಧ್ಯಕ್ಷರಿಗೆ ರಾಜೀನಾಮೆ ಕೊಡಹಚ್ಚಿದರು. ಇದರಿಂದ ವಿರೋಧಿ ಪಕ್ಷದ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆ ಸೇರಿದರೆ ತಮಗೆ ೩೦, ವಿರೋಧಿ ಪಕ್ಷದವರಿಗೆ ೨೯ ಮತಗಳು ದೊರೆತು ಮಂತ್ರಿಮಂಡಳ ಉಳಿಸಿಕೊಳ್ಳಲು ಅವಕಾಶ ಸಿಕ್ಕುವುದೆಂದು ಹಿದಾಯತುಲ್ಲಾರವರ ಹವಣಿಕೆ. ಆದರೆ ಉಪಾಧ್ಯಕ್ಷರೂ ತಮ್ಮ ಸ್ಥಳಕ್ಕೆ ರಾಜೀನಾಮೆ ಕೊಟ್ಟದ್ದರಿಂದ ಅವರ ಈ ಹಂಚಿಕೆ ಸಾಧ್ಯವಾಗಲಿಲ್ಲ. ಈಗೇನೋ ಮಂತ್ರಿಮಂಡಳವನ್ನು ಪುನರ್ರಚಿಸಲು ನಾಲ್ಕು ಜನ ಮಂತ್ರಿಗಳಿಂದ ರಾಜೀನಾಮೆ ಕೊಡಿಸಿದ್ದಾರೆ. ಮಂತ್ರಿಮಂಡಳ ಪುನರ್ರಚಿಸಿದ್ದಾದರೆ ಮತ್ತೆ ಕೆಲ ಸದಸ್ಯರು ತಮ್ಮ ಪಕ್ಷಕ್ಕೆ ಬರಬಹುದೆಂದು ಗುಲಾಮ ಹುಸೇನರ ಹಂಚಿಕೆ. ಅವರ ಈ ಅನುಚಿತ ಧೋರಣೆಗೆ ಗವರ್ನರ ಮುಡಿ ಸಾಹೇಬರು ಬೆಂಬಲ ಕೊಡುತ್ತಿರುವದು ಅತ್ಯಂತ ಅನ್ಯಾಯದ್ದಾಗಿದೆ. ಮುಡಿ ಸಾಹೇಬರೀಗ ಶಾಸನ ಸಭೆಯನ್ನು ಮುಂದರಿಸದೆ ಯಾವ ಪಕ್ಷಕ್ಕೂ ಸೇರದೆ ಇದ್ದ ಯುರೋಪಿಯನರೊಬ್ಬರನ್ನು ಅಧ್ಯಕ್ಷರನ್ನಾಗಿ ನೇಮಿಸಿ ಶಾಸನ ಸಭೆಯಲ್ಲಿ ವಿರೋಧಿ ಪಕ್ಷದವರು ಮಂಡಿಸಲಿದ್ದ ಅವಿಶ್ವಾಸ ಗೊತ್ತುವಳಿಗೆ ಅವಕಾಶ ಕಲ್ಪಿಸಿ ಕೊಡಬೇಕಾಗಿತ್ತು. ಯುರೋಪಿಯನ್‌ರಿಗೆ ಶಾಸನ ಸಭೆಗಳಲ್ಲಿ ಪ್ರವೇಶ ಕೊಟ್ಟದ್ದು ಇಲ್ಲಿನ ಆಡಳಿತವಲ್ಲಿ ಕೈವಾಡ ನಡೆಸಬೇಕೆಂದಲ್ಲ. ಅದರೆ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳುವುದಕ್ಕೆಂದು. ಹೀಗಿರುವಾಗ ಅವರ ಬೆಂಬಲದಿಂದಲೆ ಮಂತ್ರಿಮಂಡಳವುಳಿಸಿಕೊಳ್ಳಲು ಪ್ರಯತ್ನಿಸುವದು ಅದಕ್ಕೆ ಗವರ್ನರ ಸಾಹೇಬರು ಬೆಂಬಲ ಕೊಡುವದು ಹೊಣೆಗೇಡಿತನದ್ದಾಗಿದೆ. ಇದರಿಂದ ಪ್ರಾಂತದ ಉನ್ನತಿ ಯಾವ ರೀತಿಯಿಂದಲೂ ಸಾಧಿಸದು. ಆದುದರಿಂದ ಗವರ್ನರ ಸಾಹೇಬರು ಇನ್ನು ಮೇಲಾದರೂ ಯುರೋಪಿಯನ್‌ರೊಬ್ಬರ ಅಧ್ಯಕ್ಷತೆಯಲ್ಲಿ ಶಾಸನ ಸಭೆ ಸೇರಿಸಿ ಯಾವ ಪಕ್ಷಕ್ಕೆ ಸದಸ್ಯರ ಬೆಂಬಲವಿದೆಂಬುದನ್ನು ನಿರ್ಧರಿಸಿ ಅವರ ಕೈಯಲ್ಲಿ ಆಡಳಿತ ಸೂತ್ರಗಳನ್ನೊಪ್ಪಿಸಬೇಕು. ಇದೇ ಅವರಿಗೆ ಭೂಷಣಾಸ್ಪದವಾಗಿದೆ.

ನಡುಗಾಲ ಸರಕಾರದ ಸ್ಥಾಪನೆಯ ನಂತರ—

ಹಿಂದುಸ್ತಾನದಲ್ಲಿಯ ಪ್ರತಿಕ್ರಿಯೆ; ಮುಸಲ್ಮಾನ ಮುಖಂಡರ ಅಭಿಪ್ರಾಯ; ವಾಯಿಸರಾಯರಿಂದ ಬ್ಯಾ. ಜಿನ್ನಾರಿಗೆ ಕರೆ; ಮುಸ್ಲಿಂಲೀಗು ಸಹಕರಿಸುವದೆ?

ಜವಾಹರರ ಸಂದೇಶದ ನಂತರ

ಪಂಡಿತ ಜವಾಹರಲಾಲ ನೆಹರುಗಳು ನಡುಗಾಲ ಸರಕಾರದ ಉಪಾಧ್ಯಕ್ಷರಾದ ಆರು ದಿನಗಳಲ್ಲಿಯೆ ಹಿಂದುಸ್ತಾನದ ಆಕಾಶವಾಣಿಯಲ್ಲಿ ಭಾಷಣ ಮಾಡಿ ಹಿಂದುಸ್ತಾನಕ್ಕೆ ಮತ್ತು ಜಗತ್ತಿಗೆ ಸಂದೇಶ ಕೊಟ್ಟಿದ್ದಾರೆ. ಜವಾಹರರ ಈ ಸಂದೇಶವನ್ನು ಇಡೀ ಜಗತ್ತಿನ ಪ್ರಮುಖರು ಒಳ್ಳೆ ಆತುರತೆಯಿಂದ ಆಸ್ಥೆಯಿಂದ ಕೇಳಿದರು. ಇಷ್ಟೊಂದು ಆಸ್ಥೆಯಿಂದ ಹಿಂದೀ ಮುಖಂಡರ ಭಾಷಣವನ್ನು ಬ್ರಿಟಿಶ್‌ರು ಕೇಳಿದ್ದು ಇದೇ ಮೊದಲನೆ ಸಲವೆಂದು ಹೇಳಬಹುದು. ಜವಾಹರರ ಈ ಸಂದೇಶದಿಂದ ಅನೇಕ ಸಮಸ್ಯೆಗಳ ಸ್ಪಷ್ಟೀಕರಣ ಮಾದಂತಾಯಿತು. ಕಾಂಗ್ರೆಸ ಧೋರಣೆಯ ಬಗ್ಗೆ ವಿಶೇಷತಃ ಘಟನಾ ಸಮಿತಿಯ ಬಗ್ಗೆ ಜವಾಹರಲಾಲರು ಹೇಳಿದ ಮಾತುಗಳು ಸುಸ್ಪಷ್ಟವಾಗಿವೆ. ನಡುಗಾಲ ಸರಕಾರದಲ್ಲಿ ಮುಸ್ಲಿಂ ಲೀಗಿನವರು ಸೇರಲು ಇನ್ನೂ ಬಾಗಿಲು ತೆರೆದಿದೆಂಬ ಸೂರ್ಯಪ್ರಕಾಶದಷ್ಟು ಸ್ಪಷ್ಟವಾಯಿತು. ಜವಾಹರಲಾಲರ ಈ ಸಂದೇಶದಿಂದ ಮುಸ್ಲಿಂ ಲೀಗಿನ ಕೆಲವು ಮುಖಂಡರನ್ನು ಹೊರತುಪಡಿಸಿ ಉಳಿದವರೆಲ್ಲ ಸಮಾಧಾನ ಹೊಂದಿದಂತೆ ತೋರುತ್ತದೆ. ಆಯಾ ಮುಖಂಡರು ಮತ್ತು ಜಿನ್ನಾರವರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ವಿಮರ್ಶಿಸುವಾ.

ಜಿನ್ನಾರವರ ಪ್ರತಿಕ್ರಿಯೆ

ಬ್ಯಾ. ಜಿನ್ನಾರವರು ಡೇಲಿ ಮೇಲ ಪತ್ರಿಕೆಗೆ ಕೊಟ್ಟ ಸಂದರ್ಶನದಲ್ಲಿ ಪಾಕಿಸ್ತಾನದ ಹೊರತು ಮುಸಲ್ಮಾನರ ಮೋಕ್ಷವಿಲ್ಲೆಂದು ಮತ್ತೆ ಸಾರಿದರು. ಅವರ ಸಂದರ್ಶನದ ಮುಖ್ಯಾಂಶವಿಂತಿದೆ— ಹಿಂದುಸ್ತಾನದ ಹಾಗು ಜಗತ್ತಿನ ಶಾಂತಿಗಾಗಿ ಹೊಸದಾಗಿ ಪುನಃ ಪ್ರಯತ್ನ ಮಾಡಬೇಕು. ಗಾಯವು ಆಳವಾಗಿದ್ದು ಈ ಬೇಸಿಗೆಯಲ್ಲಿ ನಡೆದ ಮಾತುಕತೆಯಿಂದ ವೈಷಮ್ಯ ಹೆಚ್ಚಾಗಿ ಬೆಳೆದದ್ದರಿಂದ ನಾವು ಸದ್ಯದ ಮಾತುಕತೆ ಮುಂದುವರಿಸುವಂತಿಲ್ಲ ಹಿಂದಿನದೆಲ್ಲವನ್ನು ಪೂರ್ಣವಾಗಿ ಅಳಿಸಿ ಮೊದಲಿನಿಂದ ಪುನಃ ಪ್ರಾರಂಭಿಸಬೇಕು. ವಾಯಿಸರಾಯರು ಈ ರೀತಿ ಮಾಡಿದ ಮೇಲೆ ನಾನು ನನ್ನ ಪಕ್ಷ ಸಮರ್ಥಿಸಲು ಲಂಡನಕ್ಕೆ ಹೋಗುವದಿಲ್ಲ ಆದರೆ ಚಕ್ರವರ್ತಿ ಸರಕಾರದವರು ಇತರ ಸಂಘಾಸಂಘಗಳೊಡನೆ ಸಮವಾದ ತಳಹದಿಯ ಮೇಲೆ ಹೊಸದಾಗಿ ಮಾತುಕತೆ ಮಾಡಲು ನನ್ನನ್ನು ಆಮಂತ್ರಿಸಿದರೆ ನಾನು ಆ ಆಮಂತ್ರಣ ಸ್ವೀಕರಿಸುವೆನು ಹಿಂದುಸ್ತಾನದಲ್ಲಿ ಈಗ ನಡೆದ ರಕ್ತಪಾತ ನೋಡಿ ಯಾರಿಗೆ ದುಃಖ ಹಾಗು ವೇದನೆ ಆಗದಿರದು? ಬ್ರಿಟಿಶರು ತಮ್ಮ ಬಂದೂಕುಗಳಿಂದ ಸದ್ಯದ ನಡುಗಾಲ ಸರಕಾರಕ್ಕೆ ಸಹಾಯ ಮಾಡುವ ಹೊರತು ಹೆಚ್ಚಿಗೇನೂ ಮಾಡುವದಿಲ್ಲೆಂದು ಹಟ ಹಿಡಿದಿದ್ದರೆ ಮುಸಲ್ಮಾನರು ಕಷ್ಟ ಸಹಿಸಲು ಸಿದ್ಧರಿರುವರೆಂದೂ ಆದರೆ ಅದಕ್ಕೆ ಎಂದೂ ಒಳಗಾಗುವದಿಲ್ಲೆಂದೂ ನಾನು ಹೇಳಬೇಕಾಗುವದು. ಸನ್ಯಾಸ್ಯ ರೀತಿಯಲ್ಲಿ ನಡೆದುಕೊಂಡು ಹೋಗುವದು ಶಕ್ಯವಿರದಿದ್ದರೆ ಬ್ರಿಟಿಶ್‌ರು ತಮ್ಮ ಸೈನ್ಯ ಹಾಗು ಅದಕ್ಕೆ ಹಿತಪಕ್ಷದ ತಮ್ಮ ಹಿತಸಂಬಂಧ ಹಿಂತೆಗೆದುಕೊಳ್ಳಲಿ. ನಾವು ನಮ್ಮದನ್ನು ನೋಡಿಕೊಳ್ಳುವೆವು ಎಂದು ಮುಂತಾಗಿ ಹೇಳಿ ಜಿನ್ನಾಸಾಹೇಬರು ಬ್ರಿಟಿಶರ ಮನವೊಲಿಸುವುದಕ್ಕಾಗಿ ೧೯೪೨ರಲ್ಲಿ ತಾವು ಅವರಿಗೆ ಮಾಡಿದ ಸಹಾಯವನ್ನು ಅವರ ಸ್ಮರಣೆಗೆ ತಂದುಕೊಡಲು ಪ್ರಯತ್ನಿಸಿದ್ದಾರೆ. ಕಾಂಗ್ರೆಸ್ಸು ಸ್ವಾತಂತ್ರ್ಯದ ಸಲುವಾಗಿ ಹೋರಾಡುತಿರುವಾಗ ಮುಸ್ಲಿಂಲೀಗಿನವರು ಸ್ವಾತಂತ್ರ್ಯ ವಿರೋಧಕ ಚಟುವಟಿಕೆಗಳನ್ನು ಕೈಕೊಂಡದ್ದಲ್ಲದೆ ಕಾಂಗ್ರೆಸನ್ನು ಹತ್ತಿಕ್ಕಲು ಬ್ರಿಟಿಶ್‌ರಿಗೆ ಸಹಾಯ ಮಾಡಿದರು. ಜಿನ್ನಾಸಾಹೇಬರೆ ಇದಕ್ಕೆ ಸಾಕ್ಷಿ ಕೊಟ್ಟದ್ದರಿಂದ ಬಳಿಕ ಬೇರೆ ಯಾರೂ ಇದನ್ನು ಅಲ್ಲಗಳೆಯರು. ಕಲಕತ್ತಾ ಮೊದಲಾದ ಕಡೆ ನಡೆದ ದೊಂಬಿಗಳಿಗೆ ಕಾಂಗ್ರೆಸ್ಸಿಗರೆ ಕಾರಣರೆಂದು ಹೇಳಿ ಕೊನೆಯಲ್ಲಿ ಮುಸಲ್ಮಾನರ ಪ್ರತ್ಯಕ್ಷ ಹೋರಾಟವೆಂದರೆ ಸರಕಾರದೊಡನೆ ಸವಿನಯ ಅಸಹಕಾರ ಹೂಡುವದು. ಅದಿನ್ನೂ ಪ್ರಾರಂಭವಾಗಿಲ್ಲ ಅದರ ಸ್ವರೂಪವನ್ನು ಸ್ಪೆಶಲ್ ಸಮಿತಿಯವರು ನಿರ್ಧರಿಸುತಿರುವರು. ಈಗ ಬಿರುದುಗಳನ್ನು ಬಿಟ್ಟದ್ದು ಪ್ರತ್ಯಕ್ಷ ಹೋರಾಟದ ಅಂಗವಲ್ಲ. ಸರಕಾರದ ಧೋರಣ ನಿಷೇಧಿಸಲು ಹಾಗೆ ಮಾಡಲಾಯಿತೆಂದು ಮುಂತಾಗಿ ಹೇಳಿದರು.

ನಡುಗಾಲ ಸರಕಾರದ ಮುಸ್ಲಿಂ ಲೀಗಿನವರು ಸಹಕರಿಸಬೇಕೆಂದು ವಾಯಿಸರಾಯ ಲಾರ್ಡ ವೇವೆಲ್ ಮತ್ತು ನಡುಗಾಲ ಸರಕಾರದ ಉಪಾಧ್ಯಕ್ಷ ಪಂಡಿತ ಜವಾಹರಲಾಲ ನೆಹರುಗಳು ಮಾಡಿದ ಬಿನ್ನಹದ ಬಗ್ಗೆ ದೇಶವಿದೇಶಗಳಲ್ಲಿ ಅನುಕೂಲ ಅಭಿಪ್ರಾಯ ವ್ಯಕ್ತಪಡಿಸಲಾಗುತ್ತದೆ. ಭಾರತದಲ್ಲಿಯ ಮುಸಲ್ಮಾನ ಮುಖಂಡರನೇಕರು ಈ ಸಹಕಾರದ ಹಸ್ತವನ್ನು ಸ್ವೀಕರಿಸಬೇಕೆಂದು ಮುಸ್ಲಿಂ ಲೀಗಿನ ಧುರೀಣ ಬ್ಯಾ. ಜಿನ್ನಾರವರನ್ನು ಬಿನ್ನವಿಸಿಕೊಂಡಿದ್ದಾರೆ. ಎಲ್ಲವನ್ನೂ ಹೊಸದಾಗಿ ವಿಚಾರ ಮಾಡುವುದಾದರೆ ತಾವು ಲಂಡನಕ್ಕೆ ಹೋಗಲು ಸಿದ್ಧರಿರುವುದಾಗಿ ಬ್ಯಾ ಜಿನ್ನಾರವರು ಅಭಿಪ್ರಾಯ ಪಟ್ಟಿದ್ದಾರೆ. ಬಂಗಾಲ ಸರಕಾರದ ಮುಖ್ಯ ಮಂತ್ರಿಗಳೂ ಲೀಗಿನ ಪ್ರಮುಖ ಸದಸ್ಯರೂ ಆಗಿರುವ ಸುರ್ಹ್ರವರ್ದಿಯವರು ವಾಯಿಸರಾಯ ಮತ್ತು ಜಿನ್ನಾರವರ ಭೆಟ್ಟಿಯ ನಂತರ ಹೊರಡಿಸಿದ ಪ್ರಕಟನೆಯಲ್ಲಿ ಪರಸ್ಪರ ಸಹಕಾರ ಬೆಳೆಸುಲೆಂದು ಹಾರಯಿಸಿದ್ದಾರೆ, ಇದೆಲ್ಲದರ ಪರಿಣಾಮವಾಗಿ ಪರಿಸ್ಥಿತಿ ಆಶಾದಾಯಕವೆನಿಸಿತೊ ಏನೊ ವಾಯಿಸರಾಯರು ಬ್ಯಾ. ಜಿನ್ನಾರನ್ನು ಭೆಟ್ಟಿಗೆ ಕರೆಯಿಸಿರುವರು. ಜಿನ್ನಾರವರು ಈ ಆಮಂತ್ರಣ ಸ್ವೀಕರಿಸಿ ರವಿವಾರ ದಿಲ್ಲಿಗೆ ಹೋಗುವರು.

ಹೀಗೆ ಪರಿಸ್ಥಿತಿಯಿರುವಾಗ ಮುಸ್ಲಿಂಲೀಗಿನ ಪ್ರಾಂತಿಕ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು ಪ್ರತ್ಯಕ್ಷ ಹೋರಾಟದ ನಿರ್ಧಾರ ಮಾಡಿ ಅಖಿಲ ಭಾರತ ಮುಸ್ಲಿಂ ಲೀಗಿಗೆ ಗೊತ್ತುವಳಿ ಕಳಿಸಿರುವರೆಂದು ತಿಳಿಯುತ್ತದೆ ಲಾಹೋರಿನ ಕೆಲ ಮುಸಲ್ಮಾನ ಮುಖಂಡರು ತಮ್ಮ ಆಸ್ತಿಯನ್ನು ಹೆಂಡತಿಯ ಇಲ್ಲವೆ ಆಪ್ತೇಷ್ಟರ ಹೆಸರಿನಲ್ಲಿ ಮಾಡಿಸಹತ್ತಿ ಸತ್ಯಾಗ್ರಹದ ಸಿದ್ಧತೆ ಮಾಡಹತ್ತಿರುವರು. ಸತ್ಯಾಗ್ರಹ ಹೂಡಿದರೆ ಆಸ್ತಿ ಜಪ್ತಿ ಲಿಲಾವಾಗಬಾರದೆಂದು ಈ ಮುಂಜಾಗ್ರತೆ ವಹಿಸಿರುವರೆಂದು ಹೇಳಲಾಗುತ್ತದೆ.

ಸುರ್ಹ್ರವರ್ದಿಯವರ ಪ್ರಕಟನೆ

ಬಂಗಾಲ ಮುಖ್ಯ ಮಂತ್ರಿಗಳಾದ ಸುರ್ಹ್ರವರ್ದಿಯವರು ವಾಯಿಸರಾಯ ವೇವೆಲ್ಲರು ಕಲಕತ್ತೆಗೆ ಬಂದಾಗ ಅವರ ಭೆಟ್ಟಿ ತೆಗೆದುಕೊಂಡು ಕಲಕತ್ತೆಯ ಪರಿಸ್ಥಿತಿಯನ್ನು ಚರ್ಚಿಸಿದ್ದಲ್ಲದೆ ನಡುಗಾಲ ಸರಕಾರದ ಬಗ್ಗೆ ಮುಸ್ಲಿಂಲೀಗಿನ ಧೋರಣೆಯನ್ನು ಚರ್ಚಿಸಿದರು. ಅನಂತರ ಸುರ್ಹ್ರವರ್ದಿಯವರು ಮುಂಬಯಿಗೆ ಬಂದು ಬ್ಯಾ. ಜಿನ್ನಾರವರನ್ನು ಭೆಟ್ಟಿಯಾಗಿ ಅವರೊಡನೆ ಚರ್ಚಿಸಿದರು. ಇದೀಗ ಜವಾಹರಲಾಲರ ಆಕಾಶವಾಣಿ ಭಾಷಣದ ನಂತರ ಸುರ್ಹ್ರವರ್ದಿಯವರು ಹೊರಡಿಸಿದ ಪ್ರಕಟನೆಯಲ್ಲಿ ಪರಸ್ಪರ ಸಹಕಾರ ಬೆಳೆಸುಲಿ ಎಂದು ಹಾರೈಸಿರುವರು. ಪರಸ್ಪರ ಕರಾರಗಳೇನೇ ಆಗಲಿ ಉಭಯ ಪಕ್ಷದವರು ಒಬ್ಬರನ್ನೊಬ್ಬರು ಗೆಲ್ಲಲು ಹೊಂಚು ಹಾಕದೆ ಪರಸ್ಪರ ಸಹಕರಿಸಬೇಕಾದುದು ಮುಖ್ಯ ಕರ್ತವ್ಯ. ಕಾಂಗ್ರೆಸ್ಸು ಈಗ ಬಲಿಷ್ಠವಾಗಿರುವದರಿಂದ ನೀವು ಬಯಸಿದ್ದು ನಿಮಗೆ ದೊರೆಯುವದು ಎಂದು ಲೀಗಿಗೆ ಹೇಳಿದರೆ ಮುಸಲ್ಮಾನರು ಕಾಂಗ್ರೆಸ್ಸಿನೊಡನೆ ಸಹಕರಿಸಿ ಉಭಯ ಪಕ್ಷಗಳಿಗೆ ಸಮಾಧಾನಕರವಾದ ತಾತ್ಪೂರ್ತಿಕ ಒಡಂಬಡಿಕೆ ಮಾಡಿಕೊಳ್ಳಬಹುದು. ಹಿಂದುಗಳು ಬಹುಸಂಖ್ಯಾಕರಾಗಿರುವದರಿಂದ ಶಾಬ್ದಿಕವಲ್ಲದ ಅಂದರೆ ನಿಜವಾದ ಸಹಕಾರವನ್ನು ಅವರು ತೋರಬೇಕು. ಹೀಗೆ ಹಿನ್ನೆಲೆ ಸಿದ್ಧವಾದರೆ ಒಡಂಬಡಿಕೆಯ ವಿವರಗಳನ್ನು ರೂಪಿಸಲು ವಿಲಂಬವಾಗುವದಿಲ್ಲ. ಲೀಗಿನ ಪ್ರತ್ಯಕ್ಷ ಹೋರಾಟ ಅಹಿಂಸೆಯುದಿರುವದು. ಅದು ಕೊಲೆ ಸುಲಿಗೆಗಳ ಸ್ವರೂಪದ್ದೇನೂ ಆಗುವದಿಲ್ಲ ಮುಸಲ್ಮಾನರು ಹಿಂಸಾಚಾರಕ್ಕೆ ಕೈಯಿಡದಂತೆ ದಕ್ಷರಾಗಿರತಕ್ಕದ್ದು. ಎಂದು ಸುರ್ಹ್ರವರ್ದಿಯವರು ಹೇಳಿದರು. ಹೆಸರು ದೆಸೆಯಿಲ್ಲದ ಹಂಚಲಾದ ಹಸ್ತಪತ್ರಿಕೆಗಳು ಜಾತೀಯ ಶ್ವೇಷವನ್ನು ಬೆಳೆಸಲು ಕಾರಣವಾಗಿವೆ. ಈ ಕಿಡಿಗೇಡಿತನಕ್ಕೆ ಕಾರಣರಾದವರು ಯಾರೇ ಇರಲಿ ಅವರನ್ನು ಹಿಡಿದು ಕೊಡುವದು ಸಾರ್ವಜನಿಕರ ಕರ್ತವ್ಯವಾಗಿದೆ. ಅಂದರೆ ಸಮಾಜದಿಂದ ಹೊರದೂಡಲು ಸಾಧ್ಯವಾಗುವದು. ಈಗ ಸಾಕಷ್ಟು ಕೊಲೆ ಸುಲಿಗೆ ನಡೆದಿದೆ. ಇದು ನಿಲ್ಲಬೇಕು. ಬಲಪ್ರಯೋಗದಿಂದಾದರೂ ಶಾಂತಿಯನ್ನು ಕಾಪಾಡಿಕೊಳ್ಳಲು ನಿರ್ಧರಿಸಿದ್ದೇವೆಂದೂ ಅವರು ಹೇಳಿದರು. ಸುರ್ಹ್ರವರ್ದಿಯವರು ಬಂಗಾಲದ ಮುಖ್ಯ ಮಂತ್ರಿಗಳು. ಮನಸ್ಸು ಮಾಡಿದರೆ ಇಂಥ ಕಿಡಿಗೇಡಿಗಳನ್ನು ಬೇಕಾದ ಹಾಗೆ ಹಿಡಿಯಬಲ್ಲರು. ಕೇವಲ ಜನತೆಯ ಮೇಲೆ ಆ ಹೊಣೆ ಹೊರಿಸಿ ನಿಶ್ಚಿಂತರಾಗದೆ ತಮ್ಮ ಪೋಲೀಸ ಪಡೆಯನ್ನೆಲ್ಲ ಅದಕ್ಕಾಗಿ ನಿಯಮಿಸಿದರೆ ಬೇಗನೆ ಉದ್ದಿಷ್ಟ ಸಾಧಿಸಬಲ್ಲುದು. ಅಲ್ಲದೆ ಹಿಂಸಾಚಾರದ ಹೊಣೆಯನ್ನು ಕಾಂಗ್ರೆಸ್ಸಿಗರ ಮೇಲೆ ಹೊರಿಸುವ ಸಾಹಸ ಮಾಡದೆ ದೊಂಬಿಯನ್ನು ಸ್ಪಷ್ಟ ಶಬ್ದಗಳಲ್ಲಿ ನಿಷೇಧಿಸಿ ಪುಂಡರನ್ನು ಶಿಕ್ಷಿಸುವ ಧೋರಣ ವಹಿಸಬೇಕು. ಅಂದರೇನೇ ಪರಿಸ್ಥಿತಿ ಶಾಂತವಾಗಬಹುದು.

ಮುತ್ಸದ್ದಿತನದ ದಿವಾಳಿ

ಮುಸ್ಲಿಂ ಲೀಗಿನವರು ತಮ್ಮ ಪಾತ್ರವನ್ನು ಚೆನ್ನಾಗಿ ನಿರ್ವಹಿಸುವರೆಂದು ಹಿಂದಿನ ಅನುಭವದಿಂದ ಊಹಿಸಲಾಗಿತ್ತು. ಆದರೆ ಅವರ ಮುತ್ಸದ್ದಿತನದ ದಿವಾಳಿಯಾಗಿ ಅವರಿಗೆ ಯಶಸ್ಸು ಸಿಕ್ಕಲಿಲ್ಲ ಈಗ ಅವರು ಅಕ್ರಮ ಹಾಗು ಅಶಾಂತವಾದ ಯುದ್ಧ ಸ್ವರೂಪದ ಚಟುವಟಿಕೆ ಪ್ರಾರಂಭಿಸಲು ಉಜ್ಜುಗಿಸಿರುವರು. ಇದರಲ್ಲಿಯೂ ಅವರು ಅಯಶಸ್ವಿಯಾಗಿರುವರೆಂಬಲ್ಲಿ ಸಂದೇಹವಿಲ್ಲ ಎಂದು ಶೇಖ ಅಬ್ದುಲ್ ಮಜೀದರು ಖಂಡತುಂಡಾಗಿ ಹೇಳಿರುವರು. ಮುಸ್ಲಿಂ ಲೀಗಿನವರು ಎತ್ತಿದ ಎಲ್ಲ ಆಕ್ಷೇಪಗಳನ್ನು ವಾಯಿಸರಾಯರು ತಮ್ಮ ಆಕಾಶವಾಣಿ ಭಾಷಣದಲ್ಲಿ ದೂರೀಕರಿಸಿದ್ದಾರೆ ಮುಸ್ಲಿಂ ಲೀಗಿಗೆ ಈಗ ಎರಡೇ ಮಾರ್ಗಗಳು ಉಳಿದಿವೆ. ಕಾಂಗ್ರೆಸ್ಸಿನ ಬೆಂಬಲ ದೊರಕಿಸಿಕೊಂಡು ವಾಯಿಸರಾಯರ ಕೊಡುಗೆಯನ್ನು ಸ್ವೀಕಾರ ಮಾಡಬೇಕು ಇಲ್ಲವೆ ಮುಸಲ್ಮಾನರನ್ನು ಅನಾಹುತಗಳಿಗೆ ಗುರಿ ಮಾಡಬೇಕು. ಯುದ್ಧಗಳು ಕೊನೆಗೆ ಒಪ್ಪಂದದಲ್ಲಿಯೆ ಮುಕ್ತಾಯವಾಗಲೆಬೇಕು ಆದರೆ ಈಗ ಶಾಂತತೆಯಲ್ಲಿ ದೊರೆತಷ್ಟು ಮುಂದೆ ಸಿಕ್ಕಲಾರದು. ಅಂದ ಮೇಲೆ ಯಾವದೇ ಕಲಹದ ಅವಶ್ಯಕತೆಯೇನೂ ಇಲ್ಲ ಎಂದು ಮುಂತಾಗಿ ಹೇಳಿರುವರು.

ಮೈಸೂರಿಗೆ ಭಾರತದಲ್ಲಿ ಅಗ್ರಸ್ಥಾನ

ದೊರಕಿಸಲು ದಿವಾಣರ ಪ್ರತಿಜ್ಞೆ

“ಭಾರತಮಾತೆಯ ದೀನಸೇವಕನು ನಾನು, ೩೫ ವರ್ಷಗಳ ನನ್ನ ಸಾರ್ವಜನಿಕ ಜೀವನದಲ್ಲಿ ಭಾರತ ದೇವಿಯ ಸ್ವಾತಂತ್ರ್ಯ ಸಂದೇಶಗಳನ್ನು ವಿಶ್ವದ ಮೂಲೆ ಮೂಲೆಗಳಲ್ಲಿ ಕೊಂಡೊಯ್ದಿದ್ದೇನೆ. ಅಂತರ ರಾಷ್ಟ್ರೀಯ ಕೂಟಗಳಲ್ಲಿ ಭಾರತದ ಸಂಸ್ಕೃತಿ ಸಾರವನ್ನು ಹಿಗ್ಗಿ ಹಿಗ್ಗಿ ಹೇಳಿದ್ದೇನೆ. ಪವಿತ್ರವಾದ ಪೂಜ್ಯವಾದ ಭಾರತದ ಹಿರಿಮೆಯೆ ನನ್ನ ಸಾರ್ವಜನಿಕ ಜೀವನದ ಮಂಗಳಗೀತೆ. ದಿಕ್ಕು ದಿಕ್ಕುಗಳಲ್ಲಿ ಭಾರತದ ಬಡಸೇವಕನಂತೆ ಅಲೆದಾಡಿದ್ದೇನೆ. ಅಲ್ಪನಾದ ನನಗೆ ಅಂತಹ ಅವಕಾಶವು ದೊರೆತಿದ್ದಿತಲ್ಲಾ ಎಂದು ನನ್ನ ಆನಂದ ಉಕ್ಕಿ ಹರಿಯುತ್ತಿದೆ. ನಿರಂತರವೂ ಭಾರತಮಾತೆಯ ಪವಿತ್ರ ಪಾದದಡಿಗಳಲ್ಲಿ ಜೀವನವನ್ನು ಸವೆಸುತ್ತಿರುವ ನನಗೆ ಭಾರತಕ್ಕೆ ವಿಶ್ವಶ್ರೇಣಿಯಲ್ಲಿ ಪ್ರಥಮ ಪೀಠ ದೊರೆಯಲೆಂಬ ಹಿರಿಯಾಸೆ ಇಲ್ಲವೆ? ನನ್ನ ನೆಲವಿನನಾಡು, ನಲವಿನ ನಾಡಿನ ಪ್ರಗತಿಗಾಗಿ ಕಂಕಣಬದ್ಧನಾಗಿದ್ದೇನೆ. ಆವೇಶಕ್ಕೆ ಬಲಿಯಾಗಿದ್ದೇನೆ. ಉಕ್ಕಿಬರುತ್ತಿರುವ ರಸಾವೇಶದಿದಿರಿನಲ್ಲಿ ಪರಾಜಿತನಾಗಿದ್ದೇನೆ” ಎಂಬುದಾಗಿ ಚಿಕ್ಕಬಳ್ಳಾಪುರದಲ್ಲಿ ಬಿಲಜರ ಹಾಸ್ಟಲಿನ ಆರಂಭೋತ್ಸವ ನೆರವೇರಿಸುತ್ತಾ ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರರು ತಿಳಿಸಿದರು.

ಮೈಸೂರಿನ ವಿಷಯವಾಗಿ ಅವರು ಮಾತನಾಡುತ್ತಾ—‘ಮೈಸೂರು ಮಂಗಳಭೂಮಿ. ಅದು ಇಂದು ನನ್ನ ಪ್ರೇಮದ ನಾಡಾಗಿದೆ. ಮೈಸೂರಿಗೆ ಭಾರತದಲ್ಲೇ ಅಗ್ರಸ್ಥಾನ ದೊರೆಯಲು ದಾಸನಂತೆ ದುಡಿಯುತ್ತೇನೆ ಎಂದು ನಿಮ್ಮೆದುರಿನಲ್ಲಿ ನಾನು ಪ್ರತಿಜ್ಞಾ ವಚನವನ್ನು ಸ್ವೀಕರಿಸುತ್ತೇನೆ’ ಎಂದು ನುಡಿದರು.

ಅವರು ಮುಂದರಿಯುತ್ತಾ ಈ ರೀತಿ ತಿಳಿಸಿದರು. ಪ್ರಜಾ ಬಂಧುಗಳ ಘಟನಾಸಮಿತಿಗೆ ಮೈಸೂರಿನಿಂದ ಹೋಗಲಿರುವ ನಿಯೋಗವು ಮೈಸೂರಿನ ಪ್ರತಿ ಪ್ರಜೆಗೂ ಅಭಿಮಾನದಾಯಕವಾಗಿರುವುದೆಂಬ ಭರವಸೆ ಈಯುತ್ತೇನೆ.

ಘಟನಾ ಸಮಿತಿಗೆ ಪ್ರಜಾಪ್ರತಿನಿಧಿಗಳು ?

ಮೈಸೂರು ಸಂಸ್ಥಾನದಿಂದ ಘಟನಾ ಸಮಿತಿಗೆ ಸದಸ್ಯರನ್ನಾರಿಸಲು ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಯ ಸಂಯುಕ್ತ ಅಧಿವೇಶನವನ್ನು ಬೇಗನೆ ಕರೆಯಲಾಗುವದೆಂದೂ ದಸರಾ ಸಮಯದಲ್ಲಿ ಈ ಅಧಿವೇಶನ ಮೈಸೂರಲ್ಲಿ ದಿವಾಣರ ಅಧ್ಯಕ್ಷತೆಯಲ್ಲಿ ಸೇರುವದೆಂದೂ ದಟ್ಟವಾದ ಸುದ್ದಿ ಹಬ್ಬಿದೆ.

ಜಿನ್ನಾರಿಗೆ ಮಶ್ರೂಕಿಯವರ ಮನವಿ

ಖಾಕಸಾರ ಮುಖಂಡರಾದ ಶ್ರೀ ಅಲ್ಲಮಾ ಮಶ್ರೂಕಿಯವರಿಗೆ ಬ್ಯಾ. ಜಿನ್ನಾರವರು ಮುಸ್ಲಿಂ ಲೀಗನ್ನು ಸೇರಬೇಕೆಂದು ಬಿನ್ನವಿಸಿದ್ದರಷ್ಟೆ. ಅದಕ್ಕೆ ಉತ್ತರವೆಂದು ಮಶ್ರೂಕಿಯವರು ಕಳಿಸಿದ ಪತ್ರ ಮನನೀಯವಾಗಿದೆ. ನಿಜವಾಗಿ ಹೇಳಬೇಕೆಂದರೆ ನಿಮ್ಮನ್ನೂ ಮುಸಲ್ಮಾನರನ್ನೂ ಭಾರತ ಸ್ವಾತಂತ್ರ್ಯದ ವಿರುದ್ಧವಾಗಿ ಬ್ರಿಟಿಶರು ಉಪಯೋಗಿಸುತ್ತಿರುವರೆಂದು ನನಗೇಕೋ ಅನ್ನಿಸದೆ ಅರಿಯದೆಯೋ ಖಂಡಿತವಾಗಿದೆ. ನಡುಗಾಲ ಸರಕಾರವನ್ನು ಸ್ಥಾಪಿಸಿದ ಬಗ್ಗೆ ಗಾಂಧೀಜಿಯವರಾಗಲಿ ಕಾಂಗ್ರೆಸ್ಸಾಗಲಿ ಪಟ್ಟುಕೊಳ್ಳುತ್ತಿರುವ ಸಮಾಧಾನವನ್ನು ನಾನು ನಚ್ಚುವದಿ . ಭಾವೀ ಸ್ವಾತಂತ್ರ್ಯದ ಒಂದು ಅಂಗವಾಗಿ ನೀವು ಪಾಕಿಸ್ತಾನವನ್ನು ಪಡೆಯಲಪೇಕ್ಷಿಸುತಿರುವಿರಿ ಮತ್ತು ಇದಕ್ಕಾಗಿ ನೀವು ಗಾಂಧೀಜಿಯವರೊಡನೆ ಸಹಕರಿಸಿ ಇದೇ ತತ್ವದ ಮೇಲೆ ಬ್ರಿಟಿಶ ಯೋಜನೆಗಳನ್ನು ಎದುರಿಸಿ ಹೋರಾಡಲು ಸಿದ್ಧರಿರುವಿರಿ ಎಂದು ನೀವು ನನಗೆ ಬರೆಹದ ಮೂಲಕ ಬಿಂಬಿಸಿ ಕೊಟ್ಟರೆ ಇಡೀ ಖಾಕ್ಸರ ಸಂಸ್ಥೆಯನ್ನೆ ನಿಮ್ಮ ಬೆಂಬಲಕ್ಕೆ ಕೊಡುವೆನು. ಮತ್ತು ನಾವು ಸಾವಿರಗಟ್ಟಲೆ ಜನೆ

೧೩ನೇ ಪುಟಕ್ಕೆ

ಬರ್ನ್ಸರು ಹೇಳಿದ್ದು

ಮಿತ್ರರು ಗೆದ್ದ ಗೆಲವು ಗೆಲವಲ್ಲವೆಂಬ ಮಾತು ದಿನ ದಿನಕ್ಕೆ ಹೆಚ್ಚು ಸ್ಪಷ್ಟವಾಗುತ್ತಿದೆ. ಸೋತ ಜರ್ಮನಿಯ ದುರ್ದೈವ ಎಣಿಸಿದಷ್ಟು ಭಯಾನಕವಾಗಿಯೂ ಇಲ್ಲವೇನೊ. ಯುದ್ಧ ಕಾಲದಲ್ಲಿ ಜರ್ಮನಿಯನ್ನು ಛಿನ್ನ—ವಿಚ್ಛಿನ್ನವಾಗಿ ಮುಂದ ತಲೆಯೆತ್ತದಂತೆ ಮಾಡಬೇಕೆಂಬ ಮಾತನ್ನು ಮಿತ್ರ ಪಕ್ಷದ ಹೊಣೆಯರಿತ ಜನರು ಕೂಡ ಆಡುತಿದ್ದರು. ಆದರೆ ಈಗ, ಮೊದಲನೆ ಮಹಾಯುದ್ಧದ ನಂತರ ಆದಂತೆ, ಜರ್ಮನಿಯನ್ನು ಉದ್ಧರಿಸುವ ಪ್ರಯತ್ನ ಎಲ್ಲ ಕಡೆಗಳಿಂದಲೂ ನಡೆಯಲಾರಂಭಿಸಿದೆ. ರಶಿಯಾಕ್ಕೂ ಅಂಗ್ಲೋ-ಅಮೇರಿಕನ್ನರಿಗೂ ನಡೆದ ಸ್ಪರ್ಧೆಯ ಅನಿವಾರ್ಯ ಪರಿಣಾಮ ಇದು. ಇದೇ ಕೆಲ ದಿನಗಳ ಹಿಂದೆ ರಶಿಯನ್ನರು ಜರ್ಮನಿಗೆ ಕೆಲ ಸೌಲಭ್ಯಗಳನ್ನು ಕೊಡುವ ಸಂಭವವಿದೆಯೆಂಬ ವಾರ್ತೆ ಹೊರಟಿತ್ತು. ಜರ್ಮನಿಯಿಂದ ಕಸಿದು ಪೋಲಂಡಿಗೆ ಕೊಟ್ಟ ಸೈಲೇಶಿಯಾದ ಔದ್ಯೋಗಿಕ ಪ್ರದೇಶವನ್ನು ತಿರುಗಿ ಕೊಡಿಸಿ ಅದರ ಬದಲು ಪೋಲಂಡಿಗೆ ಬೇರೆ ಪ್ರದೇಶಗಳನ್ನು ಕೊಡಲು ರಶಿಯಾ ನಿಶ್ಚಯಿಸಿದೆಯೆಂದು ಆ ವರದಿಯ ಹೇಳಿಕೆಯಾಗಿತ್ತು. ಆದಾದ ಕೆಲ ದಿನಗಳಲ್ಲಿಯೆ ಅಮೇರಿಕೆಯ ವಿದೇಶ ಮಂತ್ರಿ ಜೇಮ್ಸ್ ಬರ್ನ್ಸರು ಸ್ಟುಟ್‌ಗಾರ್ಟನಲ್ಲಿ ಜರ್ಮನರಿಗೆ ಕೊಟ್ಟ ಭಾಷಣ ಇದೀಗ ಅಂತರ್ ರಾಷ್ಟ್ರೀಯ ಮಹತ್ವವನ್ನು ಸಂಪಾದಿಸಿದೆ. ಅದು ಜರ್ಮನರಿಗೆ ಹಾಕಿದ ಗಾಳವಾಗಿತ್ತೆಷ್ಟೋ ಅಷ್ಟೇ ರಶಿಯಾಕ್ಕೆ ತೋರಿದ ಬೆದರುಗುಂಡೂ ಆಗಿತ್ತು. ಜರ್ಮನಿಯಲ್ಲಿ ಆರ್ಥಿಕ ವಿಪನ್ನಾವಸ್ಥೆಯಿದೆ, ಯುದ್ಧ ಮುಗಿದು ವರ್ಷವೊಂದು ಕಳೆದಿದ್ದರೂ ಅದಿನ್ನೂ ದೂರವಾಗಿಲ್ಲ ಎಂದು ಅವರು ಹೇಳಿದರು. ಜರ್ಮನಿಯ ಯುದ್ಧ ಶಕ್ತಿಯನ್ನು ಸಂಪೂರ್ಣವಾಗಿ ಅಳಿಸಿಬಿಡಬೇಕೆಂಬ ಮಿತ್ರರ ಹಳೆಯ ಮತಕ್ಕೆ ಅವರಿನ್ನೂ ಅಂಟಿಕೊಂಡಿದ್ದರೂ ಅದರ ಆರ್ಥಿಕ ಸ್ಥಿತಿ, ಜೀವನದ ಮಟ್ಟ, ಯುರೋಪಿನ ಇತರ ರಾಷ್ಟ್ರಗಳಿಗಿಂತ ಕಳಕೆಯದಾಗಿರಕೂಡದೆಂದು ಅವರು ಅನುಕಂಪೆ ತೋರಿಸಿದರು. ಪಾಟ್ಸಡ್ಯಾಂ ಪರಿಷತ್ತಿನಲ್ಲಿ ಮಿತ್ರತ್ರಯರು ನಿರ್ಣಯಿಸಿದ್ದಕ್ಕಿಂತ ಹೆಚ್ಚಿನ ಪರಿಹಾರದ್ರವ್ಯವನ್ನು ಜರ್ಮನಿಯಿಂದ ಸೆಳೆದುಕೊಳ್ಳಲು ಅಮೇರಿಕೆ ಸಿದ್ಧವಿಲ್ಲವೆಂದು ಬರ್ನ್ಸರು ಅಮೇರಿಕನ್ ಔದಾರ್ಯವನ್ನು ಜರ್ಮನ ಜನತೆಯ ಮೇಲೆ ಬಿಂಬಿಸಲೆಳಸಿದ್ದಲ್ಲದೆ ಜರ್ಮನಿಯನ್ನು ಪಾಟ್ಸಡ್ಯಾಂ ನಿರ್ಣಯಕ್ಕನುಸಾರ ಒಂದೇ ಆರ್ಥಿಕ ಘಟಕವೆಂದು ಬಗೆದು ಅದರಂತೆ ವ್ಯವಸ್ಥೆ ಮಾಡದೆ ಹೋದರೆ, ಪಾಪ, ಜರ್ಮನರು ಕೊಡಬೇಕೆಂದು ನಿರ್ಣಯವಾದ ಪರಿಹಾರ ದ್ರವ್ಯವನ್ನು ಅವರು ಬಹಳ ದುಃಖ-ಕಷ್ಟಗಳಿಗೊಳಗಾಗದೆ ಕೊಡುವದು ಸಾಧ್ಯವಿಲ್ಲವೆಂದೂ ಅವರು ಸೂಚಿಸಿದರು. ಆದರೆ ಈ ಜರ್ಮನ್ ದುರವಸ್ಥೆಗೆ ಹೊಣೆ ಅಮೇರಿಕೆಯಲ್ಲವೆಂದು ಜರ್ಮನರಿಗೆ ತೋರಿಸಿ ಕೊಡಲು ಅವರು ಮರೆಯಲಿಲ್ಲ. ಜರ್ಮನಿಯನ್ನು ಒಂದೇ ಆರ್ಥಿಕ ಘಟಕವಾಗುವಂತೆ ಆಡಳಿತೆ ನಡೆಸಲು ತಪ್ಪಿದ ಮಿತ್ರ ನಿಯಂತ್ರಣ ಸಮಿತಿಯ ತಲೆಯ ಮೇಲೆಯೆ ಆ ಪಾಪವನ್ನು ಅವರು ಹೊರಿಸಿದರು. ಮಾತ್ರವಲ್ಲ ಜರ್ಮನ್ ಆರ್ಥಿಕ ಐಕ್ಯವನ್ನು ಕಾರ್ಯತಃ ಆಚರಣೆಗೆ ತಾರದಿದ್ದರೆ ಅತಿಪ್ರಸರಣ ಹೆಚ್ಚಾಗಿ ಅನಾಹುತವಾದೀತೆಂದೂ ಆದುದರಿಂದ ಜರ್ಮನಿಗೆ ಅವಶ್ಯ ವಸ್ತುಗಳ ಆಯಾತ ನಿರ್ಯಾತದ ಸೌಕರ್ಯಗಳನ್ನೂ ಕೊಟ್ಟು ಆರ್ಥಿಕ ಸ್ವಾವಲಂಬನೆಯನ್ನು ಸಾಧ್ಯ ಮಾಡಬೇಕೆಂದೂ ಶಾಂತಿಯ ಉದ್ಯೋಗಗಳನ್ನು ಹೆಚ್ಚಿಸಿ ತಮ್ಮ ಪ್ರಗತಿಯನ್ನು ಸಾಧಿಸಿಕೊಳ್ಳುವ ಮಾರ್ಗವನ್ನು ಜರ್ಮನಿಯ ಪಾಲಿಗೆ ಪಾಟ್ಸಡ್ಯಾಂ ಪರಿಷತ್ತು ಮುಚ್ಚಿದ್ದಿಲ್ಲವೆಂದೂ ನುಡಿದುದಲ್ಲದೆ ಜರ್ಮನರನ್ನು ಇನ್ನು ಸಂದೇಹದಲ್ಲಿಡದೆ ಶಾಂತಿ ಕರಾರುಗಳನ್ನು ಸಾರಿಬಿಟ್ಟು ಜರ್ಮನಿಯಲ್ಲಿ ಜರ್ಮನರದೇ ಆದ ಪ್ರಜಾತಂತ್ರಾತ್ಮಕ ಸರಕಾರವನ್ನೂ ಸ್ಥಾಪಿಸಬೇಕು, ಜರ್ಮನ್ ಪ್ರತಿನಿಧಿಗಳು ತಮ್ಮ ರಾಜ್ಯಘಟನೆಯನ್ನು ನಿರ್ಮಿಸಿಕೊಳ್ಳುವಂತೆ ಮಾಡಬೇಕೆಂದು ಬರ್ನ್ಸರು ಸಲಹೆಯಿತ್ತರು. ಜರ್ಮನಿಯ ಮೇಲೆ ಸೇಡು ತೀರಿಸಿಕೊಳ್ಳುವ ಇಚ್ಛೆಯನ್ನು ಅಮೇರಿಕೆ ಬಿಟ್ಟುಕೊಟ್ಟದೆಯಂತೆ.

ಇತ್ತ ರಶಿಯನ್ನರಿಗೂ ಅವರು ಕೆಲವು ಅಪ್ರತ್ಯಕ್ಷ ಹೆದರಿಕೆಗಳನ್ನು ಹಾಕಿದರು. ಮೊದಲನೆ ಯುದ್ಧಾನಂತರದಲ್ಲಿ ಮಾಡಿದಂತೆ ಇನ್ನು ಅಮೇರಿಕನ್ನರು ಪ್ರತ್ಯೇಕತಾಧೋರಣೆಯನ್ನು ವಹಿಸದೆ ಯುರೋಪಿನ ರಾಜಕಾರಣದಲ್ಲಿ ತೀವ್ರವಾದ ಆಸ್ಥೆಯನ್ನು ವಹಿಸುವರು. ಜರ್ಮನಿಯಲ್ಲಿ ಮಿತ್ರರ ಆಕ್ರಮಣ ಸೇನೆಯಿರುವಷ್ಟು ಕಾಲ ಅವರಲ್ಲಿ ಅಮೇರಿಕನ್ನರೂ ಇರುವರು ಇತ್ಯಾದಿಯಾಗಿ ಹೇಳಿದಾಗ ಅವರು ರಶಿಯನ್ ಮುನ್ನಡೆಯನ್ನು ತಡೆಯುವ ತಮ್ಮ ದೃಢ ನಿರ್ಧಾರವನ್ನು ಸಾರಿದ್ದಾರೆಂದು ಹೇಳಬಹುದು. ಜರ್ಮನಿಯ ಆರ್ಥಿಕ ಐಕ್ಯಕ್ಕೆ ಅಡ್ಡಿಯಾಗಿರುವವರು ರಶಿಯನ್ನರೇ ಎಂದು ಧ್ವನಿಬರುವಂತೆ ಆಡಿ ಅಮೇರಿಕನ್ನರು ಸಂಭಾವಿತರೆಂದು ತೋರಿಸಬಗೆದಿದ್ದಾರೆ.

ಅಂತರ್ ರಾಷ್ಟ್ರೀಯ

ಒಳಗುಟ್ಟು

ಒಬ್ಬ ಟೀಕಾಕಾರನು ಹೇಳಿರುವಂತೆ ಬರ್ನ್ಸರ ಭಾಷಣ ತೋರಿಕೆಗೆ ಸೌಮ್ಯವಾಗಿದ್ದರೂ ತಿರುಳಿನಲ್ಲಿ ಉದ್ದೇಶಪೂರ್ವಕವಾಗಿ (ರಶಿಯನ್ನರನ್ನು) ಸಿಟ್ಟಿಗೆಬ್ಬಿಸುವಂಥದಿದೆ. ಬರ್ನ್ಸರು ಸಿಟ್ಟಿಗೇಳಲು ಕಾರಣವೂ ಇದೆ. ಜರ್ಮನಿಯನ್ನು ನಾಲ್ಕು ಪಾಲು ಮಾಡಿಕೊಂಡು ಮಿತ್ರರು ಬೇರೆ ಬೇರೆಯಾಗಿ ಆಳಲು ನಿರ್ಧರಿಸಿದಾಗ ಅಮೇರಿಕನ್ನರು ಊಹಿಸದಂಥ ಸಮಸ್ಯೆಗಳು ಈಗ ಉದ್ಭವಿಸಿವಾಗಿವೆ. ಈ ಪಾಲುಗಾರಿಕೆಯಲ್ಲಿ ಪೂರ್ವ ದಿಕ್ಕಿನ ಸಮೃದ್ಧ ಒಕ್ಕಲತನದ ಭಾಗವೆಲ್ಲ ರಶಿಯನ್ನರ ಪಾಲಿಗೆ ಹೋಗಿ ಪಶ್ಚಿಮದ ಔದ್ಯೋಗಿಕ ಭಾಗಗಳು ಉಳಿದ ಮೂವರ ಪಾಲಿಗೆ ಬಂದವು. ಜಗತ್ತಿನಲ್ಲೆಲ್ಲ ಬರಗಾಲ ಬಂದಿರುವ ಈ ಸಮಯ ಜರ್ಮನಿಯ ಹೊಟ್ಟೆ ತುಂಬುವ ಹೊಣೆ ಹೊತ್ತ ಮಿತ್ರರಲ್ಲಿ ರಶಿಯನ್ನರು ಒಕ್ಕಲತನದ ಭಾಗಗಳ ಒಡೆಯರಾಗಿ ಗೆದ್ದರು. ಔದ್ಯೋಗಿಕ ಭಾಗಗಳ ಒಡೆಯರಾದ ಅಂಗ್ಲೊ-ಅಮೇರಿಕನ್-ಫ್ರೆಂಚರು ಸೋತರು. ಜರ್ಮನರನ್ನು ಇದ್ದದ್ದರಲ್ಲಿ ಸಂತುಷ್ಟರಾಗಿರಿಸಿ ರಶಿಯನ್ನರು ಅವರನ್ನು ತಮ್ಮ ಕಮ್ಯುನಿಜಂ ತತ್ವದ ಕಡೆಗೆ ಸೆಳೆಯಲು ಮೊದಲು ಮಾಡಿದರು. ಜನಜಂಗುಳಿಯ ಬುದ್ಧಿಯನ್ನು ಚೆನ್ನಾಗಿ ಅರಿತ ಅವರು ಜರ್ಮನ್ ಜಮೀನ್ದಾರರ ಆಸ್ತಿಗಳನ್ನು ಕಿತ್ತುಕೊಂಡು ರೈತರಿಗೆ ಹಂಚಿ ತಮ್ಮ ಬಡವರ ಬಂಧುತ್ವವನ್ನೂ ಪ್ರದರ್ಶಿಸಿದರು. ಪೂರ್ವ ಜರ್ಮನಿಯಲ್ಲಿರುವವರು ತಮಗಿಂತ ಸೌಖ್ಯವಾಗಿರುವದನ್ನು ಕಂಡು ಅಂಗ್ಲೋ-ಅಮೇರಿಕನ್ ವಿಭಾಗದ ಜನರು ಅತ್ತ ಅಸೂಯದೃಷ್ಟಿಯಿಂದ ನೋಡತೊಡಗಿದ್ದರಿಂದ ಇವರಿಗೆ ದಿಗಿಲಬಿತ್ತು. ಜಗತ್ತಿನ ಮುಂದಾಳ್ತನವನ್ನು ಬ್ರಿಟನದಿಂದ ಸೆಳೆದುಕೊಂಡಿರುವ ಅಮೇರಿಕೆಗೆ ಯುರೋಪಿನಲ್ಲಿ ಜರ್ಮನಿಯನ್ನು ತಮ್ಮ ಪಕ್ಷದಲ್ಲಿರಿಸಿಕೊಳ್ಳದಿದ್ದರೆ ಎಲ್ಲವೂ ಕಮ್ಯುನಿಜಂಗೆ ಸೂರೆಹೋಗುವದೆಂಬ ಭಯವುಂಟಾಗಿದೆ. ಅದಕ್ಕಾಗಿಯೆ ಜರ್ಮನಿಯನ್ನು ಒಲಿಸುವ ಅವರ ಪ್ರಯತ್ನ. ಜರ್ಮನಿಯನ್ನು ಒಂದೇ ಆರ್ಥಿಕ ಘಟಕವಾಗಿ ಮಾಡಿ ಎಲ್ಲೆಡೆಗೂ ಒಂದೇ ಜೀವನ ಮಟ್ಟವಿರ್‍ವಂತಾದರೆ ತಮ್ಮ ಪ್ರಚಾರಕ್ಕೆ ಹೆಚ್ಚು ಸಂಧಿ ದೊರಕೀತೆಂದು ಅವರ ಆಶೆ. ತಮ್ಮ ಭಾಗದ ಜರ್ಮನರ ಹೊಟ್ಟೆ ತುಂಬಬೇಕಾದರೆ ಅಲ್ಲಿ ಔದ್ಯೋಗಿಕ ಉತ್ಪಾದನೆಯನ್ನು ಹೆಚ್ಚಿಸಿ ನಿರ್ಯಾತ ಮಾಡದೆ ಸಾಧ್ಯವಿಲ್ಲವೆಂದೂ ಅವರು ಮನಗಂಡಿದ್ದಾರೆ ಅದಕ್ಕಾಗಿ ಜರ್ಮನಿಯ ಔದ್ಯೋಗಿಕ ಮಟ್ಟದ ಬಗ್ಗೆ ಅವರ ಕಳಕಳಿ. ರಶಿಯನ್ನರ ಪ್ರತಿಷ್ಠೆ ಬೆಳೆದು ದುರ್ನಿವಾರ್ಯವಾಗುವ ಮೊದಲೆ ಅಲ್ಲಿ ತಮಗನುಕೂಲವಾದ ಸರಕಾರವನ್ನು ಸ್ಥಾಪಿಸುವ ಹಂಬಲ ಅವರಿಗೆ. ಅದಕ್ಕಾಗಿ ಜರ್ಮನರನ್ನು “ಸಂದೇಹದಲ್ಲಿಡಬಾರದು” “ಪ್ರಜಾತಂತ್ರಾತ್ಮಕ” ರಾಜ್ಯವನ್ನು ಸ್ಥಾಪಿಸಬೇಕು ಎಂಬ ಅವರ ವೇದಾಂತ. ಅವರು ಸೂಚಿಸಿರುವ “ಪ್ರಜಾತಂತ್ರಾತ್ಮಕ” ರಾಜ್ಯ ಅಮೇರಿಕನ್ ರಾಜ್ಯಪದ್ಧತಿಯನ್ನು ಹೋಲುತ್ತದೆಯೆಂಬುದೂ ಗಮನಾರ್ಹ.

ಪರಿಣಾಮವೇನು ?

ಹೀಗೆ ಬರ್ನ್ಸರ ಭಾಷಣದಲ್ಲಿ ಜರ್ಮನಿಯ ಬಗ್ಗೆ ಕರುಣೆಗಿಂತ ಸೋವಿಯಟ್ ಪ್ರಭಾವಕ್ಕೆ ಅಡ್ಡಗಾಲು ಹಚ್ಚುವ ಪ್ರವೃತ್ತಿ ಒಡೆದು ಕಾಣುತ್ತದೆ. ರಶಿಯನ್ನರೂ ಅವರ ಬೆಂಬಲಿಗರೂ ಇದನ್ನು ಕಂಡು ಹಿಡಿಯುವದು ಖಂಡಿತ. ಅದರಿಂದ ಪರಿಸ್ಥಿತಿ ಇನ್ನಷ್ಟು ಬಿಕ್ಕಟ್ಟಿಗೆ ಹೋಗಿ ಬರ್ನ್ಸರು ಯಾವ ಆರ್ಥಿಕ ಐಕ್ಯ ಬೇಕೆನ್ನುವರೋ ಅದರ ಸಂಭಾವ್ಯತೆ ಇನ್ನಷ್ಟು ದೂರವಾಗದಿರದು ಪೋಲಂಡಿನಲ್ಲಿ ಈಗಾಗಲೆ ಇದರ ಪ್ರತಿಕ್ರಿಯೆ ತೋರಿ ಬಂದಿದೆ. ವಾರ್ಸಾದ ಅಮೇರಿಕನ್ ರಾಯಭಾರ ಗೃಹದ ಮೇಲೆ ಪೋಲಿಶ ಜನಜಂಗುಳಿಯೊಂದು ಏರಿಹೋಗಿ ಖಂಡನಾತ್ಮಕ ಘೋಷಣೆಗಳನ್ನು ಮಾಡಿತು. ಅಮೇರಿಕೆಯ “ಜರ್ಮನ್ ಪಕ್ಷಪಾತಿತ್ವ” ವನ್ನು ತೆಗಳಿತು. ಅಂತೂ ಚಿಕ್ಕ ರಾಷ್ಟ್ರಗಳಲ್ಲಿರುವ ಬಿಕ್ಕಟ್ಟಿಕ್ಕೆ ಇವರಿಂದ ಇನ್ನಷ್ಟು ಪುಟದೊರೆಯುವಂತಾಗುವದು. ಅಮೇರಿಕೆಯ ಪ್ರಸಿದ್ಧ “ಸುದ್ದಿ ಬೇಟೆಗಾರ”ನಾದ ಡ್ರ್ಯೂ ಪಿಯರ್ಸನ್ನರು ಹೇಳುವದು ನಿಜವಾಗಿದ್ದರೆ ಅಂಗ್ಲೋ-ಅಮೇರಿಕನ್ನರಿಗೂ ರಶಿಯನ್ನರಿಗೂ ಬೇಗನೆ ಯುದ್ಧ ಪ್ರಾರಂಭವಾದೀತು. ರಶಿಯನ್ನರು ತಮ್ಮ ಭಾಗದಲ್ಲಿ ಜರ್ಮನ ಸೈನ್ಯ ಕಟ್ಟುತಿದ್ದಾರೆಂದೂ ಅದಕ್ಕೆದುರಾಗಿ ಬ್ರಿಟಿಶ ವಿಭಾಗದಲ್ಲಿ ರುಂಡಸ್ಟೆಟನ ನೇತೃತ್ವದಲ್ಲಿ ೩೦೦ ಜರ್ಮನರ ಗುಂಪು ಕಟ್ಟಿ ಬ್ರಿಟಿಶರು ಅಂಗ್ಲೋ—ರಶಿಯನ್ನರಲ್ಲಿ ಯುದ್ಧವಾದರೆ ಜರ್ಮನ್ ಸೈನ್ಯವನ್ನು ರಶಿಯಾ ವಿರುದ್ಧ ನಡೆಸಬೇಕೆಂದು ಅವನನ್ನು ಕೇಳಿಕೊಂಡರೆಂದೂ ವಿದೇಶೀಯರ ಆಜ್ಞೆಯ ಪ್ರಕಾರ ತಾನು ಸೇನಾಪತಿಯಾಗಲಾರನೆಂದು ಅತ ಹೇಳಿದುದರಿಂದಲೇ ಜರ್ಮನಿಯಲ್ಲಿ ಜರ್ಮನ “ಪ್ರಜಾತಂತ್ರ” ಸರಕಾರ ಸ್ಥಾಪಿಸಲು ಬರ್ನ್ಸರು ಇಷ್ಟು ಆತುರಪಡುತ್ತಾರೆಂದೂ ಅವನ ಹೇಳಿಕೆ.

ಶಾಂತಿ ಪರಿಷತ್ತು

ಶಾಂತಿ ಪರಿಷತ್ತಿನ ಬಹಿರಂಗ ಅಧಿವೇಶನ ತಾ ೫ [ಅಕ್ಟೋಬರ] ಕ್ಕೆ ಪ್ರಾರಂಭವಾಗುವದೆಂದು ಸಾರಲಾಗಿದೆ. ಅದರಿಂದ ವಿವಿಧ ಸಮಿತಿಗಳಿಗೆ ಈಗ ಒಪ್ಪಿಸಲಾಗಿರುವ ಕಾರ್ಯ ಅಷ್ಟರಲ್ಲಿ ಮುಗಿಯುವದೆಂಬ ನಂಬಿಕೆಯಿದೆ. ಪರಿಷತ್ತಿನ ಎಲ್ಲ ಕಾರ್ಯಕಲಾಪ ಅಕ್ಟೋಬರ ೩೫ ರ ಮೊದಲೇ ಮುಗಿಯಬೇಕಾಗಿದೆ. ಹಾಗೆ ಮುಗಿಯುವದೆಂಬ ಭರವಸೆಯೂ ಉಂಟು. ಇದೇ ನಿರೀಕ್ಷೆಯಿಂದ ವಿದೇಶ ಮಂತ್ರಿಗಳ ಸಭೆ ಸೇರಿ ಯುಕ್ತರಾಷ್ಟ್ರಗಳ ಅಧಿವೇಶನವನ್ನು ಸೆಪ್ಟೆಂಬರ ೩೫ ರಿಂದ ಅಕ್ಟೋಬರ ೩೫ ಕ್ಕೆ ಮುಂದೆ ಹಾಕಬೇಕೆಂಬ ರಶಿಯನ್ ಸೂಚನೆಗೆ ಒಪ್ಪಿತು. ಆ ಪ್ರಕಾರ ಯುಕ್ತರಾಷ್ಟ್ರ ಸಭೆಯ ಕಾರ್ಯದರ್ಶಿಗಳಿಗೆ ಸೂಚಿಸಲಾಗಿದೆ. ಆದರೆ ಅಷ್ಟರಲ್ಲಿ ಶಾಂತಿ ಪರಿಷತ್ತು ಹೇಗೆ ಮುಗಿಯುವದೋ ಗೊತ್ತಿಲ್ಲ. ಟ್ರೀಸ್ಟೆ ಮತ್ತು ಯುಗೋಸ್ಲಾವಿಯಾದ ಗಡಿಯ ಬಗ್ಗೆ ವಿದೇಶ ಮಂತ್ರಿಗಳು ಸೂಚಿಸಿದ ನಿರ್ಣಯವನ್ನು ಶಾಂತಿ ಪರಿಷತ್ತು ಒಪ್ಪಿದರೆ ತಾನು ಇಟಲಿಯೊಡನೆ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲು ನಿರಾಕರಿಸುವದಾಗಿ ಯುಗೊಸ್ಲಾವಿಯಾ ಹೇಳಿದೆ. ಇಟಲಿಯಿಂದ ವಸೂಲವಾಗಬೇಕಾದ ಪರಿಹಾರದ್ರವ್ಯವನ್ನು ಕಡಿಮೆ ಮಾಡದಿದ್ದರೆ ಇಟಲಿಯಲ್ಲಿ ಭಯಂಕರ ಕ್ಷೋಭೆಯುಂಟಾಗುವದೆಂದು ಇಟಲಿ ಹೇಳುತ್ತಿದೆ. ಟ್ರೀಸ್ಟೆ ಯುಗೊಸ್ಲಾವಿಯಾಕ್ಕೆ ಹೋಗಬೇಕೆಂದು ರಶಿಯಾ ಹಟ ಹಿಡಿದಿದೆ.

ರಶಿಯಾ ಹೊರಬೀಳುವದು ?

ಯುಕ್ತ ರಾಷ್ಟ್ರ ಸಂಘದ ಕಚೇರಿಯನ್ನು ಅಮೇರಿಕೆಯಿಂದ ಯುರೋಪಿಗೆ ವರ್ಗಾಯಿಸಬೇಕೆಂದು ಅನಿರೀಕ್ಷಿತವಾಗಿ ಬೇಡಿ ಕಳೆದ ವಾರ ರಶಿಯಾ ಜಗತ್ತನ್ನು ಬೆಚ್ಚಿಸಿತು ದೂರ ಅಮೇರಿಕೆಯಲ್ಲಿರುವ ಈ ಕಚೇರಿ ತನ್ನ ವಿರುದ್ಧ ಒಳಸಂಚುಗಳ ಸಂಕೇತ ಸ್ಥಾನವಾಗುತಿದೆಯೆಂಬ ಭೀತಿಯೇ ಈ ಬೇಡಿಕೆಯ ಮೂಲವೆಂದು ತೋರುತ್ತದೆ. ಈ ಬೇಡಿಕೆಯಿಂದ ಶಾಂತಿ ಪರಿಷತ್ತಿನ ಗುಂಪುಗಳಲ್ಲಿ ಊಹಾಪೋಹಗಳಿಗೆ ಎಡೆಯಾಯಿತು. ಯುಕ್ತರಾಷ್ಟ್ರ ಸಂಘವನ್ನು ತೊರೆದು ಹೊರಬೀಳಲು ಈ ಮೂಲಕ ರಶಿಯಾ ಪೀಠಿಕೆ ಹಾಕಿದೆಯೆಂದು ಬಲ್ಲವರು ಆಡಿಕೊಳ್ಳತೊಡಗಿದರು. ಯುಕ್ತರಾಷ್ಟ್ರ ಸಂಘದಲ್ಲಿಯೂ ಶಾಂತಿಯ ದೀರ್ಘಾಯುಷ್ಯದಲ್ಲಿಯೂ ರಶಿಯಾದ ವಿಶ್ವಾಸ ಹಾರಿಹೋಗಿದೆ. ತಾನು ಎರಡರಲ್ಲಿಯೂ ಚಿಕ್ಕ ಪಾಯ ಅಲ್ಪಸಂಖ್ಯಾಕ ಪಕ್ಷವಾಗಿ ಬಿಟ್ಟಿದ್ದೇನೆ ಎಂದು ಮನಗಂಡ ರಶಿಯಾ ಆ ಸಂಘವನ್ನೆ ಬಿಟ್ಟು ಹೋಗಿ ಅದರಿಂದಾಚೆ ತನ್ನ ಬೆಂಬಲಿಗ ರಾಷ್ಟ್ರಗಳ ಎದುರಾಳಿ ರಾಷ್ಟ್ರಸಂಘವೊಂದನ್ನು ಕಟ್ಟಿಕೊಳ್ಳುವ ಹವಣಿಕೆಯಲ್ಲಿದೆ. ಸದ್ಯದ ಶಾಂತಿಪರಿಷತ್ತಿನಲ್ಲಿ ಹೋರಾಡಿ ಸಾಧ್ಯವಾದಷ್ಟು ಸವಲತ್ತುಗಳನ್ನು ಸೆಳೆದು ಆ ಮೇಲೆ ತನ್ನ ರಾಷ್ಟ್ರಸಂಘವನ್ನು ಸ್ಥಾಪಿಸಬಹುದೆಂದೂ ಅದರಲ್ಲಿ ಸಾಧ್ಯವಾದಷ್ಟು ಯುರೋಪಿಯನ್ ರಾಷ್ಟ್ರಗಳನ್ನು ಆಕರ್ಷಿಸಲು ಹೆಣಗಬಹುದೆಂದೂ ತರ್ಕಿಸಲಾಗಿತ್ತು. ಅಂದಿನಿಂದೀಚೆಗೆ ರಶಿಯಾಕ್ಕೆ ಯುಕ್ತರಾಷ್ಟ್ರ ಸಂಘವನ್ನು ತೊರೆದುಹೋಗುವ ಇಚ್ಛೆಯಿಲ್ಲೆಂದು ಅರ್ಧ-ಅಧಿಕಾರಿ ವರ್ಗಗಳು ಸಾರಿದೆಯಾದರೂ ಸಂದೇಹ ತಪ್ಪಿಲ್ಲ.

ನಾಲ್ಕನೆ ಪ್ರಬಲ ರಾಷ್ಟ್ರ

ಪ್ರಬಲ ರಾಷ್ಟ್ರಗಳಲ್ಲಿ ಹೆಚ್ಚುತ್ತಿರುವ ಈ ವೈಷಮ್ಯದಿಂದ ಚಿಕ್ಕ ರಾಷ್ಟ್ರಗಳು ಸ್ವಲ್ಪ ಧೈರ್ಯದಿಂದ ಉಸಿರಾಡಿಸಲಾರಂಭಿಸಿವೆ. ಹಂಗೆರಿಯ ಪಾರ್ಲಮೆಂಟಿನ ವಿರುದ್ಧ ಪಕ್ಷದ ನಾಯಕನು ಯುರೋಪಿನಲ್ಲಿ ಇನ್ನೊಂದು ಪ್ರಬಲ ರಾಷ್ಟ್ರವನ್ನು ಉಂಟು ಮಾಡಬೇಕೆಂದು ಚಿಕ್ಕ ಚಿಕ್ಕ ರಾಷ್ಟ್ರಗಳೆಲ್ಲ ಒಗ್ಗೂಡಿ ಇದನ್ನು ಸಾಧಿಸಬೇಕೆಂದೂ ಸೂಚಿಸಿದ್ದಾನೆ. ಇಂಥದೊಂದು ಸ್ಥಾಪಿಸಲ್ಪಟ್ಟರೆ ಪೂರ್ವ ಪಶ್ಚಿಮಗಳ ಹೋರಾಟದಲ್ಲಿ ಅದು ಯಶಸ್ವಿಯಾಗಿ ಆಟವಾಡಬಲ್ಲದು.

ಪಾಲಿಸ್ತಾನ ಪರಿಷತ್ತು

ಲಂಡನ್ನಿನಲ್ಲಿ ಈ ವಾರ ಪ್ರಾರಂಭವಾದ ಪಾಲಿಸ್ತಾನ ಪರಿಷತ್ತಿನಲ್ಲಿ ಪಾಲಿಸ್ತಾನ ಅರಬರು ಹೊರತು ಇತರ ಅರಬ ರಾಷ್ಟ್ರಗಳೆಲ್ಲ ಭಾಗ ವಹಿಸಿವೆ. ಮುಖ್ಯ ಮಂತ್ರಿ ಅ್ಯಟ್ಲೀಯವರು ಪರಿಷತ್ತನ್ನು ಉದ್ಘಾಟಿಸುತ್ತ ಅರಬರಿಗೆ ಬ್ರಿಟಿಶರು ಹಿತಚಿಂತಕರೆಂದುಸುರಿದರು. ಅರಬ ರಾಷ್ಟ್ರಗಳ ಪುನರುಜ್ಜೀವನಕ್ಕೆ ಬ್ರಿಟಿಶರು ಮಾಡಿದ ಸಹಾಯಗಳನ್ನ ನೆನಪಿಗೆ ತಂದುಕೊಟ್ಟರು ಪಾಲಿಸ್ತಾನದ ಸಮಸ್ಯೆಗೆ ಪರಿಹಾರವೇ ಇಲ್ಲವೆಂಬ ಮಾತನ್ನು ಅವರು ಒಪ್ಪಲಿಲ್ಲ. ಅಂತರ್‌ರಾಷ್ಟ್ರೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಚರ್ಚಿಸಿ ಪ್ರಯತ್ನಿಸಿದರೆ ಪರಿಹಾರ ಸಿಕ್ಕೇ ಸಿಗುವದೆಂದು ಅವರಿಗೆ ನಂಬಿಕೆಯಾಗಿತ್ತು ಎಲ್ಲ ಸರಿ. ಆದರೆ ಈ ಪರಿಷತ್ತಿನಲ್ಲಿ ಪಾಲಿಸ್ತಾನ ಅರಬರು ಕೊನೆಗೂ ಭಾಗ ವಹಿಸಲೊಪ್ಪಲಿಲ್ಲ, ಯಹೂದ್ಯ ಸಂಸ್ಥೆಯೂ ಅದನ್ನು ಬಹಿಷ್ಕರಿಸಿದೆ. ಯಹೂದ್ಯ ಕ್ರಾಂತಿಕಾರರು ಪರಿಷತ್ತಿನ ಉದ್ಘಾಟನೆಯನ್ನು ಪಾಲಿಸ್ತಾನದಲ್ಲಿ ಭಯಂಕರ ಹಿಂಸಾಚಾರಗಳೊಂದಿಗೆ ಆಚರಿಸಿ ತೋರಿಸಿದರು. ಒಂದು ದೊಡ್ಡ ಎಣ್ಣೆ ನಳಿಕ್ಕೆ ಬೆಂಕಿ ಹಚ್ಚಿದರು. ಕ್ರಾಂತಿಕಾರಿಗಳನ್ನು ಪತ್ತೆ ಹಚ್ಚುವ ಕೆಲಸದಲ್ಲಿದ್ದ ಬ್ರಿಟಿಶ ಅಧಿಕಾರಿಯೊಬ್ಬನನ್ನು ಗುಂಡಿಕ್ಕಿದರು. ರೇಲ್ವೇಗಳ ಮೇಲೆ ದಾಳಿ ಪ್ರಚಂಡ ಹಾನಿಯನ್ನುಂಟು ಮಾಡಿದರು……ಇತ್ಯಾದಿ. ಬ್ರಿಟಿಶರಿಗಾದರೂ ಈ ಪರಿಷತ್ತು ಯಶಸ್ವಿಯಾಗಲಾರದೆಂದು ಗೊತ್ತೇ ಇದೆಯೆಂದೂ ತಾವು ಸಮಸ್ಯೆಯನ್ನು ವಿಚಾರ ವಿನಿಮಯದಿಂದ ಬಗೆಹರಿಸಲು ಪ್ರಯತ್ನಿಸಿದುದಾಗಿ ತೋರಿಸಿಕೊಳ್ಳುವ ಸಲುವಾಗಿಯೆ ಈ ಆಟ ಹೂಡಿರುವರೆಂದೂ ಹೇಳಲಾಗಿದೆ. ಆ ಮೇಲೆ ತಮಗೆ ಸರಿದೋರಿದಂತೆ ಮುಂದುವರಿಯಲು ಅನುಕೂಲವಾಗುವದೆಂದು ಅವರ ಭರವಸೆ.

ರಶಿಯನ್ ಆಕಾಶ ಬಾಣ

ರಶಿಯನ್ನರು ಹೊಸ ಮಾದರಿಯ ಯುದ್ಧ ಸಾಮುಗ್ರಿಗಳ ಸಂಶೋಧನೆಯಲ್ಲಿ ಬಹಳ ಆಸಕ್ತಿಯಿಂದ ತೊಡಗಿರುವರೆಂದು ಸುದ್ದಿ ಬಂದಿದೆ. ಪರಮಾಣು ಸ್ಫೋಟದ ಗೋಪ್ಯವನ್ನು ಕಂಡುಹಿಡಿಯಲು ರಶಿಯಾದಲ್ಲೆಲ್ಲ ವೈಜ್ಞಾನಿಕ ಸಂಸ್ಥೆಗಳು ಕೆಲಸ ಮಾಡುತ್ತಿವೆಯಂತೆ ಸ್ವೀಡನ್ ಮೇಲೆ ಹಾರುತ್ತಿರುವ ರಶಿಯನ್ನರವೆಂದು ನಂಬಲಾಗಿರುವ ಆಕಾಶಬಾಣಗಳ ಛಾಯಾಚಿತ್ರವನ್ನು ಯಾವನೋ ಒಬ್ಬನು ತೆಗೆದಿದ್ದು ಅವುಗಳನ್ನು ಭೂತಕನ್ನಡಿಯಿಂದ ನೋಡಿದಾಗ ಪ್ರಕಾಶ ಗೋಲದ ಮಧ್ಯದಲ್ಲಿ ಪ್ರೊಪೆಲ್ಲರ್ ಇರುವದು ಬ್ರಿಟಿಶ ಹುಲಿಟರಿ ತಜ್ಞರಿಗೆ ತಿಳಿದುಬಂದಿದೆಯೆಂದು ಹೇಳಲಾಗಿದೆ. ಇದರಿಂದ ರಶಿಯನ್ನರು ಹೊಸ ಮಾದರಿಯ ಪ್ರೊಪೆಲ್ಲರ ಯಂತ್ರವನ್ನು ನಿರ್ಮಿಸುವದರಲ್ಲಿ ಯಶಸ್ವಿಗಳಾಗಿರುವರೆಂದು ಊಹಿಸಲ್ಪಟ್ಟಿದೆ.

ಮರೆತುಹೋದ ಜನಸಾಮಾನ್ಯರಿಗಾಗಿ ದುಡಿವೆವು

[ಮೊದಲನೆ ಪುಟದಿಂದ]

ಅಪರಿಹಾರ್ಯವಾಗಿ ನಾವಿಬ್ಬರೂ ಉಭಯ ಸಾಮಾನ್ಯ ಕಾರ್ಯಗಳಲ್ಲಿ ಸೇರಬೇಕಾಗುವದು, ಪರಸ್ಪರ ನಿಕಟ ಸಹಕಾರವನ್ನು ಬೆಳಸಬೇಕಾಗುವದು.

ನಾವು ಏಶಿಯಾದವರು, ಎಂತಲೆ ಏಶಿಯಾದ ಜನರು ನಮಗೆ ಇತರರಿಗಿಂತ ಹತ್ತಿರದವರೂ ಸಂಬಂಧಿಕರೂ ಆಗಿದ್ದಾರೆ. ಪಶ್ಚಿಮ, ಮಧ್ಯ ಮತ್ತು ಆಗ್ನೇಯ ಏಶಿಯಾದ ಚಕ್ರದ ಅಚ್ಚಿನಂತಿದೆ ಹಿಂದುಸ್ತಾನ. ಅದರ ಸ್ಥಾನ ಮಹಿಮೆಯಿಂದಾಗಿದೆ. ಗತಕಾಲದಲ್ಲಿ ಭಾರತದ ಸಂಸ್ಕೃತಿ ಎಲ್ಲ ದೇಶಗಳಿಗೆ ಹರಿದುಹೋಯಿತು. ಹಲವು ಬಗೆಯಿಂದ ಆ ದೇಶಗಳ ಸಂಸ್ಕೃತಿಗಳು ಇಲ್ಲಿಗೆ ಬರುತಿದ್ದವು. ಆ ಸಂಪರ್ಕ ಈಗ ಪುನಃ ಚಿಗಿತಿದೆ ಮುಂದಿನ ದಿನಗಳಲ್ಲಿ ಒಂದು ಕಡೆ ಆಗ್ನೇಯ ಏಶಿಯಾದೊಡನೆಯೂ ಪಶ್ಚಿಮ ದಿಕ್ಕಿನಲ್ಲಿ ಇರಾಣ ಅಫಗಾಣಿಸ್ತಾನ, ಅರಬರಾಷ್ಟ್ರಗಳೊಡನೆಯೂ ಹಿಂದುಸ್ತಾನ ಹೆಚ್ಚು ನಿಕಟವಾದ ಕೂಡುಕಟ್ಟಿನಲ್ಲಿ ಸೇರುವದನ್ನು ನಾವು ನೋಡುವದು ಖಂಡಿತ. ಸ್ವತಂತ್ರ ದೇಶಗಳ ನಿಕಟತರ ಸಂಬಂಧವನ್ನು ಬೆಳಸುವದರಲ್ಲಿ ನಾವು ತತ್ಪರರಾಗಬೇಕು. ಇಂಡೋನೇಶಿಯನ್ನರು ನಡೆಸಿರುವ ಸ್ವಾತಂತ್ರ್ಯದ ಹೋರಾಟವನ್ನು ಬಹಳ ಕಾತರ ಆಸ್ಥೆಯಿಂದ ನಾವು ನೋಡುತ್ತ ಬಂದಿದ್ದೇವೆ. ಅವರಿಗಿದೋ ನಮ್ಮ ಶುಭಾಶಯಗಳು.

ಉದ್ದಾಮ ಗತವೈಭವದ ನಮ್ಮ ನೆರೆನಾಡಾದ ಆ ಉದ್ದಾಮ ದೇಶ- ಚೀನ-ಯುಗಯುಗಳ ನಮ್ಮ ಗೆಳೆಯನಾಗಿತ್ತು. ಆ ಗೆಳೆತನ ಬಾಳಿ ಬೆಳೆಯುವದು. ಆ ದೇಶದಲ್ಲಿರುವ ಈಗಿನ ಗೊಂದಲಗಳು ಬಗೆಹರಿದು ಬೇಗನೆ ಒಗ್ಗಟ್ಟಾದ ಪ್ರಜಾತಂತ್ರ ಚೀನವೊಂದು ತಲೆಯೆತ್ತಿ ಜಾಗತಿಕ ಶಾಂತಿ ಪ್ರಗತಿಗಳಿಗೆ ಸಹಾಯಕವಾಗಲೆಂದು ಮನಸಾರೆ ಹಾರೈಸುವೆವು.

ಸಾಮಾನ್ಯ ಪ್ರಜೆಗೆ ಪರಿಹಾರ

ನಮ್ಮ ಅಂತರಿಕ ರಾಜಕಾರಣವನ್ನು ಕುರಿತ ನಾನೇನೂ ಹೇಳಿಲ್ಲ. ಈ ಸಿಟ್ಟಿನಲ್ಲಿ ಹೇಳಬಯಸುವದೂ ಇಲ್ಲ. ಆದರೆ ಆ ಧೋರಣೆ ನಾವು ಇಷ್ಟೆಲ್ಲ ವರ್ಷಗಳಿಂದ ಉಪದೇಶಿಸುತ್ತ ಬಂದ ತತ್ವಗಳನ್ನೇ ಅವಲಂಬಿಸುವದು ನಿಶ್ಚಯ. ಮರೆವೆಗೆ ಗುರಿಯಾದ ಹಿಂದುಸ್ತಾನದ ಸಾಮಾನ್ಯ ಜನರ ಯೋಗಕ್ಷೇಮವನ್ನು ಚಿಂತಿಸುವೆವು ಅವರಿಗೆ ಪರಿಹಾರವನ್ನೊದಗಿಸಿ ಅವರ ಜೀವನದ ಮಟ್ಟವನ್ನು ಏರಿಸಲು ಪ್ರಯತ್ನಿಸುವೆವು. ಅಸ್ಪೃಶ್ಯತೆಯನ್ನೂ ಬೇರೆ ಬಗೆಯ ಬಲುಮೆಯ ಅಸಮಾನತೆಗಳನ್ನೂ ಎದುರಿಸಿ ಎಂದಿನಂತೆ ಹೋರುವೆವು. ಆರ್ಥಿಕ ಮತ್ತು ಇತರ ವಿಷಯಗಳಲ್ಲಿ ಹಿಂದುಳಿದವರಿಗೆ ಸಹಾಯ ಮಾಡಲು ವಿಶೇಷವಾಗಿ ಹೆಣಗುವೆವು. ಇಂದು ಕೋಟ್ಯಂತರ ಜನರು ಆಹಾರ ವಸ್ತ್ರ ವಸತಿಗಳ ಕೊರತೆಯಿಂದ ಬಳಲುತಿದ್ದಾರೆ. ಕೆಲವರಂತೂ ಉಪವಾಸದ ಸೀಮೆಯಲ್ಲಿಯೆ ಇದ್ದಾರೆ. ಈ ಸದ್ಯದ ಅವಶ್ಯಕತೆಯನ್ನು ಪೂರಯಿಸುವದು ತ್ವರಿತದ ಮತ್ತು ಕಠಿಣವಾದ ಕೆಲಸ. ಇತರ ದೇಶಗಳು ಆಹಾರಧಾನ್ಯಗಳನ್ನು ಕಳಿಸಿ ನಮಗೆ ಕೈಕೊಡುವವೆಂದು ನಂಬಿದ್ದೇವೆ.

ಒಡಕಿನ ಮನೋವೃತ್ತಿಯನ್ನು ಗೆಲ್ಲಬೇಕು

ಅಷ್ಟೇ ಮಹತ್ವದ ಮತ್ತು ತ್ವರ್ಯದ ಇನ್ನೊಂದು ಕಾರ್ಯವೆಂದರೆ ಹಿಂದುಸ್ತಾನದಲ್ಲಿ ತಾನೇ ತಾನಾಗಿರುವ ಒಡಕಿನ ಮನೋವೃತ್ತಿಯನ್ನು ಗೆಲ್ಲುವದು. ಪರಸ್ಪರ ಕಲಹದಿಂದ ನಾವು ಇಷ್ಟು ದಿನಗಳಿಂದ ಕನಸು ಕಂಡ ಹಿಂದುಸ್ತಾನದ ಸ್ವಾತಂತ್ರ್ಯ ಮಂದಿರವನ್ನು ಕಟ್ಟುವದು ಅಸಾಧ್ಯ. ಎಂಥ ರಾಜಕೀಯ ಸ್ಥಿತ್ಯಂತರಗಳೇ ಸಂಭವಿಸಲಿ, ಈ ಭೂಮಿಯಲ್ಲಿರುವ ನಾವೆಲ್ಲರೂ ಒಟ್ಟಾಗಿ ಬಾಳಬೇಕಾಗಿದೆ ಒಟ್ಟಾಗಿ ಕೆಲಸ ಮಾಡಬೇಕಾಗಿದೆ. ದ್ವೇಷವಾಗಲಿ ಹಿಂಸೆಯಾಗಲಿ ಈ ಮೂಲ ವಿದ್ಯಮಾನವನ್ನು ಬದಲಿಸಲಾರದು; ಹಿಂದುಸ್ತಾನದಲ್ಲಿ ಒದಗುತಿರುವ ಸ್ಥಿತ್ಯಂತರಗಳನ್ನು ನಿಲ್ಲಿಸಲೂ ಆರದು.

ಸಹಕಾರಕ್ಕೆ ಸಿದ್ಧರು

ಘಟನಾ ಸಮಿತಿಯಲ್ಲಿನ ವಿಭಾಗಗಳ ಮತ್ತು ಗುಂಪುಗಳ ಬಗೆಗೆ ಬಹಳ ಬಿಸಿ ಬಿಸಿ ಚರ್ಚೆಯಾಗಿದೆ ವಿಭಾಗಗಳಾಗಿ ಕುಳಿತು ಗುಂಪುಗಳ ರಚನೆಯ ಪ್ರಶ್ನೆಯನ್ನು ವಿಚಾರಿಸಲು ನಾವು ಸಂಪೂರ್ಣ ಸಿದ್ಧರಾಗಿದ್ದೇವೆ. ಆ ನಿಲುವೆಗೆ ಒಪ್ಪಿಗೆಯನ್ನೂ ಕೊಟ್ಟಿದ್ದೇವೆ. ನನ್ನ ಮತ್ತು ನನ್ನ ಸಹಯೋಗಿಗಳ ಪರವಾಗಿ, ಘಟನಾ ಸಮಿತಿಯನ್ನು ಪರಸ್ಪರ ಹೋರಾಟದ ಅಥವಾ ಒಂದು ದೃಷ್ಟಿಕೋನವನ್ನು ಇನ್ನೊಂದರ ಮೇಲೆ ಬಲುಮೆಯಿಂದ ಹೇರುವ ಮಲ್ಲಶಾಲೆಯೆಂದು ಬಗೆಯುವದಿಲ್ಲವೆಂಬದಾಗಿ ನಾನು ನಿಚ್ಚಳಗೊಳಿಸಬಯಸುತ್ತೇನೆ. ಅದು ಅಖಂಡ ಸಂತೃಪ್ತ ಹಿಂದುಸ್ತಾನವನ್ನು ಕಟ್ಟುವ ಹಾದಿಯಲ್ಲ. ಅದಷ್ಟು ಹೆಚ್ಚು ಸೌಹಾರ್ದದಿಂದೊಡಗೂಡಿದ ಸರ್ವಸಮ್ಮತವಾದ ಉಪಾಯಗಳನ್ನು ಹುಡುಕುವದೇ ನಮ್ಮ ಉದ್ದೇಶ.

ವಿವಾದಾತ್ಮಕ ಪ್ರಶ್ನೆಗಳಿಗೆ ಸರ್ವಸಮ್ಮತವಾದ ಒಪ್ಪಂದದ ತಳಹದಿಯನ್ನು ಕಂಡು ಹಿಡಿಯುವ ದೃಢ ನಿರ್ಧಾರದಿಂದಲೇ ನಾವು ಘಟನಾ ಸಮಿತಿಯನ್ನು ಪ್ರವೇಶಿಸುವೆವು ಆದರಿಂದ, ಈ ವರೆಗೆ ಆದದ್ದು ಆಂದದ್ದನ್ನೆಲ್ಲ ಒತ್ತಟ್ಟಿಗಿರಿಸಿ, ಸಹಕಾರದ ದ್ವಾರವನ್ನು ನಾವಿನ್ನೂ ತೆರೆದಿಟ್ಟಿದ್ದೇವೆ. ನಮ್ಮೊಡನೆ ಮತಭೇದವಿರುವವರು ಕೂಡ ಘಟನಾ ಸಮಿತಿಯಲ್ಲಿ ನಮಗೆ ಸಮಾನಿಕರಾಗಿ ನಮ್ಮೊಡನೆ ಪಾಲುಗಾರರಾಗಿ ಯಾವುದೇ ಪೂರ್ವ ಬಂಧನಗಳಿಲ್ಲದೆ ಪ್ರವೇಶಿಸಬೇಕೆಂದು ನಾವು ಆಮಂತ್ರಿಸುತ್ತೇವೆ. ನಾವೆಲ್ಲರೂ ಕೂಡಿ ಸರ್ವ ಸಮಾನವಾದ ಕಾರ್ಯಗಳನ್ನು ನಿರ್ವಹಿಸಬೇಕಾದಾಗ ನಮ್ಮ ಈಗಿನ ತೊಡಕುಗಳು ಮಾಯವಾದರೂ ಆಗಬಹುದು.


ಗೆಲುವಿನ ದಾರಿಯಲ್ಲಿ

ಹಿಂದುಸ್ತಾನ ಮುನ್ನಡೆದಿದೆ. ಹಳೆಯ ರೀತಿನೀತಿ ಕಣ್ಮರೆಯಾಗುತಿದೆ. ಹೆರವರ ಆಟದ ಗೊಂಬೆಗಳಾಗಿ ಘಟನೆಗಳನ್ನು ನಿಸ್ಸಹಾಯರಾಗಿ ನೋಡುತ್ತ ಎಷ್ಟೋ ದಿನ ಕುಳಿತಿದ್ದೆವು. ಇನ್ನು ಸಾಕು. ಈಗ ಚುಕ್ಕಾಣಿ ನಮ್ಮ ಜನರ ಕೈಗೆ ಬಂದಿದೆ. ನಮ್ಮ ಮನಸಿನಂತೆ ನಮ್ಮ ಇತಿಹಾಸವನ್ನು ಇನ್ನು ತಿದ್ದಬಹುದು. ಈ ಪ್ರಚಂಡ ಕಾರ್ಯದಲ್ಲಿ ನಾವೆಲ್ಲ ಒಂದಾಗಿ ಸೇರಿ ಭಾರತವನ್ನು ನಮ್ಮ ಹೃದಯದ ಹೆಮ್ಮೆಯನ್ನಾಗಿ, ರಾಷ್ಟ್ರಗಳಲ್ಲಿ ಹಿರಿಯದಾಗಿ, ಶಾಂತಿ ಉನ್ನತಿಗಳ ಕಲೆಯಲ್ಲಿ ಅಗ್ರಗಾಮಿಯಾಗಿ ಕಟ್ಟಲು ಮುಂದಾಗೋಣ.

ಬಾಗಿಲು ತೆರೆದಿದೆ. ಅದೃಷ್ಟ ಎಲ್ಲರನ್ನೂ ಕೈಮಾಡಿ ಕರೆಯುತಿದೆ. ಇಲ್ಲಿ ಯಾರು ಗೆಲ್ಲುವರು ಯಾರು ಸೋಲುವರೆಂಬ ಮಾತೇ ಇಲ್ಲ. ಏಕೆಂದರೆ ನಾವೆಲ್ಲರೂ ಬಂಧುಗಳಂತೆ ಒಂದಾಗಿ ಮುನ್ನುಗ್ಗಬೇಕಾಗಿದೆ. ಗೆದ್ದರೆ ನಾವೆಲ್ಲರೂ ಸೇರಿಯೆ ಗೆಲ್ಲುವೆವು. ಇಲ್ಲದಿದ್ದರೆ ಎಲ್ಲರೂ ಸೇರಿಯೆ ಅಧಃಪಾತಾಳಕ್ಕೆ ಬೀಳುವೆವು. ನಾವು ಹೋಗುತಿರುವದು ಗೆಲವಿನ ಕಡೆ, ಸ್ವರಾಜ್ಯದ ಕಡೆ, ಹಿಂದುಸ್ತಾನದ ನಾಲ್ವತ್ತು ಕೋಟಿಯ ಸ್ವಾತಂತ್ರ್ಯ ಉತ್ತರೋತ್ತರಗಳ ಕಡೆ— ಜಯ ಹಿಂದ!

ಕರ್ಮವೀರ

ಹರಿಜನ ಪುರವಣಿ



ಕಾಂಗ್ರೆಸ್ ಮಂತ್ರಿಗಳು ಮತ್ತು ಅಹಿಂಸೆ

ಶ್ರೀ ಶಂಕರರಾವ ದೇವ ಇವರು ಬರೆಯುತ್ತಾರೆ-

“ಸತ್ಯಾಗ್ರಹಿಗಳೆಂದು ಕರೆದುಕೊಳ್ಳುವವರೆ ಸರಕಾರದ ಮಂತ್ರಿಪದವನ್ನಲಂಕರಿಸಿದ ಕೂಡಲೆ ಸೈನಿಕರ ಮತ್ತು ಪೋಲೀಸರ ಉಪಯೋಗಕ್ಕೇಕೆ ಎಳಸುವರೆಂಬುದನ್ನು ಅನೇಕ ಜನರು ಅರಿಯರು ಹೀಗೆ ಮಾಡುವದೆಂದರೆ ಅಹಿಂಸೆಯ ಧ್ಯೇಯ ಮತ್ತು ಧೋರಣೆಯ ಭಂಗ ಮಾಡಿದಂತೆಯೆ ಎಂದು ಜನ ಭಾವಿಸುವರು. ಸಾರ್ವಜನಿಕರ ಈ ಅಭಿಪ್ರಾಯ ವಿವೇಕಕ್ಕನುಗುಣವಾಗಿದೆ. ಕಾಂಗ್ರೆಸ ಮಂತ್ರಿಗಳ ಧ್ಯೇಯ ಮತ್ತು ಕೃತಿಯಲ್ಲಿರುವ ವಿಸಂಗತತೆ ಮತ್ತು ಅದರ ದುರ್ಲಾಭವನ್ನು ಪಡೆಯಲು ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರ ವಿರೋಧಕರು ತಮ್ಮ ಬೇಳೆ ಬೆಯಿಸಿಕೊಳ್ಳುತಿರುವದು ನಮ್ಮ ಕಾರ್ಯಕರ್ತರನ್ನು ಬಾಧಿಸುತಿರುವದು.

“ಸಾಮಾನ್ಯವಾಗಿ ಹೇಳಬೇಕಾದರೆ ಕಾಂಗ್ರೆಸ್ಸಿನ ಅಹಿಂಸೆ ಅಶಕ್ತರ ಅಹಿಂಸೆಯಾಗಿದೆ. ದೇಶದ ಸದ್ಯದ ಬೆಳವಣಿಗೆಯನ್ನು ಲಕ್ಷಿಸಿದರೆ ಅದು ಹಾಗೆ ಆಗಲಿಕ್ಕೆ ಬೇಕಿತ್ತು. ಈ ಮಾತು ನಿಮಗೆ ಪೂರ್ಣ ಗೊತ್ತಿದೆ. ಸಶಕ್ತರ ಅಹಿಂಸೆಯಲ್ಲಿ ವಿಶಿಷ್ಟ ಕೆಚ್ಚು ಇದೆಂದು ನಿಮ್ಮ ಹೇಳಿಕೆ. ಅದೇ ಕಾಲಕ್ಕೆ ಅಹಿಂಸಾಚರಣೆಯಿಂದ ಅಶಕ್ತರನ್ನು ಸಶಕ್ತ ಮಾಡುವುದಕ್ಕಾಗಿ ನೀವು ಅಶಕ್ತರ ಧುರೀಣತ್ವವನ್ನು ವಹಿಸಿದಿರಿ. ಅವರು ಅಶಕ್ತರಾಗಿದ್ದರೂ ಸರಕಾರದ ಆಡಳಿತದ ಸೂತ್ರಗಳು ಇಂದು ಅವರ ಕೈಗೆ ಬಂದಿವೆ. ಪೋಲೀಸ ಮತ್ತು ಸೈನಿಕರ ಸಹಾಯವನ್ನಪೇಕ್ಷಿಸದೆ ದೊಂಬಿಗಳನ್ನು ಹತ್ತಿಕ್ಕುವದು ಅವರಿಗೆ ಅಶಕ್ಯವೆ ಆಗಿವೆ. ಅವರು ಹಾಗೆ ಪ್ರಯತ್ನ ಮಾಡಿದ್ದಾದರೆ ಅವರು ಅಯಶಸ್ವಿಯಾಗುವರಷ್ಟೇ ಅಲ್ಲ ಅದರೆ ಜನತೆಯ ಸಹಕಾರವೂ ಅವರಿಗೆ ತಪ್ಪುವದು.

“ಉಚ್ಚಾಧಿಕಾರ ಸ್ವೀಕರಿಸುವ ಪ್ರಸಂಗ ಬಂದರೆ ಸತ್ಯಾಗ್ರಹಿಯು ಅದನ್ನು ಸ್ವೀಕರಿಸಬೇಕೇ? ಒಂದುವೇಳೆ ಸ್ವೀಕರಿಸಿದರೆ ಅಹಿಂಸೆಯನ್ನು ಅವರೆಂತ ಆಚಾರ ಮಾಡಬೇಕು ಎಂಬ ಬಗ್ಗೆ ಒಮ್ಮೆ ನಾನು ನಿಮಗೆ ಕೇಳಿದ್ದೆನು. ಅಹಿಂಸೆಯು ತನ್ನ ಧ್ಯೇಯವೆಂದು ಇಟ್ಟುಕೊಂಡವನು ಅಧಿಕಾರವನ್ನು ಸ್ವೀಕರಿಸತಕ್ಕದಲ್ಲ. ಅಲ್ಲಿ ಅವನು ಎಂದಿಗೂ ಸುಖಿಯಾಗಲಾರ. ಅಹಿಂಸೆ ಕೇವಲ ಧೋರಣವೆಂದು ಇಟ್ಟುಕೊಂಡವನಿಗೆ ಬಹಳ ಅಡಚಣೆ ಬರಲಾರದು. ಅನೇಕ ಕಾಂಗ್ರೆಸ್ಸಿಗರು ಅಧಿಕಾರ ಸೂತ್ರಗಳನ್ನು ವಶಪಡಿಸಿಕೊಂಡಿರುವರು. ಮತ್ತು ಅವರಿಗೆ ಅಧಿಕಾರಸೂತ್ರಗಳನ್ನು ವಹಿಸಿಕೊಳ್ಳಲು ನೀವು ಅಪ್ಪಣೆ ಕೊಟ್ಟಿರುವಿರಿ. ಅಹಿಂಸೆಯಲ್ಲಿ ವಿಶ್ವಾಸವಿದ್ದವರು ದೊಂಬಿಯ ಸಮಯದಲ್ಲಿ ಕನಿಷ್ಠ ವೈಯಕ್ತಿಕವಾಗಿಯಾದರೂ ಅಹಿಂಸಾ ಧರ್ಮವನ್ನಾಚರಿಸಬೇಕೆಂದು ನೀವು ಅಪೇಕ್ಷಿಸುವಿರಾ ಎಂಬ ಪ್ರಶ್ನೆ ಉದ್ಭೂತವಾಗುತ್ತದೆ. ಅಲ್ಲದೆ ಅಹಿಂಸಾ ಮಾರ್ಗದಿಂದ ಶಕ್ತಿಯನ್ನು ಸಂಪಾದಿಸಿಕೊಂಡು ಅವಶ್ಯವಿದ್ದ ಸರಕಾರದಲ್ಲಿ ಅದರ ಉಪಯೋಗವನ್ನೆಂತು ಮಾಡಬೇಕು? ಉದ್ದಿಷ್ಟ ಧ್ಯೇಯದತ್ತ ನೀವು ನಮ್ಮ ಮಾರ್ಗವನ್ನು ಸ್ಪಷ್ಟಗೊಳಿಸದಿದ್ದರೆ ಸತ್ಯಾಗ್ರಹ ಬ್ರಹ್ಮಾಸ್ತ್ರವೆಂದು ತಿಳಿಯಲ್ಪಡಲಾರದು.”

ನನ್ನ ದೃಷ್ಟಿಯಿಂದ ಉತ್ತರ ಬಹಳ ಹಸುರಾಗಿದೆ. “ಸತ್ಯ ಮತ್ತು ಅಹಿಂಸೆ” ಎಂಬ ಶಬ್ದಗಳನ್ನು ಕಾಂಗ್ರೆಸ್ ಘಟನೆಯೊಳಗಿಂದ ತೆಗೆದುಹಾಕಬೇಕೆಂದು ಕೆಲದಿನಗಳಿಂದ ನಾನು ಹೇಳುತ್ತ ಬಂದಿರುವೆನು. ಪ್ರತ್ಯಕ್ಷವಾಗಿ ಆ ಶಬ್ದಗಳನ್ನು ತೆಗೆಯಲಿ ತೆಗೆಯದಿರಲಿ ಅವುಗಳನ್ನು ತೆಗೆದು ಹಾಕಿದೆಂದು ತಿಳಿದುಕೊಳ್ಳುವಾ. ಅಂದರೆ ಯಾವದೊಂದು ಕೃತಿಯು ನಿರ್ದುಷ್ಟವಾಗಿದೆಯೊ ಇಲ್ಲವೆ ಸದೋಷವಾಗಿದೆಯೊ ಎಂಬುದನ್ನು ಸ್ವತಂತ್ರವಾಗಿ ನಿರ್ಣಯಿಸಲಿಕ್ಕೆ ಬರುವದು. ಎಲ್ಲಿಯವರೆಗೆ ನಾವು ದೇಶದಲ್ಲಿ ಸುವ್ಯವಸ್ಥೆ ಶಾಂತಿಯನ್ನೀಡುವದಕ್ಕಾಗಿ ಸೈನಿಕರ ಇಷ್ಟೇ ಅಲ್ಲ ಪೋಲೀಸರ ಉಪಯೋಗವನ್ನು ಮಾಡುವೆವೋ ಅಲ್ಲಿಯವರೆಗೆ ನಾವು ಬ್ರಿಟಿಶರ ಇಲ್ಲವೆ ಬೇರೆ ಯಾವದೇ ಪರಕೀಯ ಸತ್ತೆಯ ಗುಲಾಮರಾಗಿಯೆ ಉಳಿಯುವೆವು. ಆಂದಬಳಿಕ ಸರಕಾರವು ಕಾಂಗ್ರೆಸ್ಸಿಗರ ಕೈಯಲ್ಲಿದ್ದರೂ ಅಷ್ಟೇ ಕಾಂಗ್ರೆಸ್ಸೇತರರ ಕೈಯಲ್ಲಿದ್ದರೂ ಅಷ್ಟೇ. ಕಾಂಗ್ರೆಸ ಮಂತ್ರಿಮಂಡಳಗಳು ಅಹಿಂಸಾಬದ್ಧವಾಗಿಲ್ಲವೆಂದು ತಿಳಿಯುವಾ. ಹಿಂದುಗಳು, ಮುಸಲ್ಮಾನರು ಮತ್ತು ಇತರರಿಗೆ ಸೈನಿಕರ ಮತ್ತು ಪೋಲೀಸರ ರಕ್ಷಣೆಬೇಕೆಂದೂ ತಿಳಿಯುವಾ. ಅವರಿಗೆ ಅದು ಬೇಕಾದರೆ ಸಿಕ್ಕುತ್ತ ಹೋಗುವದು. ಅಹಿಂಸಾಬದ್ಧ ಮಂತ್ರಿಗಳ ಸೈನಿಕರ ಮತ್ತು ಪೋಲೀಸರ ಉಪಯೋಗವನ್ನು ಆಕ್ಷೇಪಿಸುತಿರುವದರಿಂದ ರಾಜೀನಾಮೆ ಕೊಡಲಿಕ್ಕೆ ಬೇಕು. ಎಲ್ಲಿಯವರೆಗೆ ತಮ್ಮ ಜನರಲ್ಲಿ ಪರಸ್ಪರ ತಿಳಿವಳಿಕೆ ಮಾಡಿಕೊಂಡು ಸದ್ಭಾವನೆಯಿಂದಿರುವ ಜಾಣತನ ಬರುವದಿಲ್ಲವೊ ಅಲ್ಲಿಯವರೆಗೆ ಪುಂಡತನ ನಡೆಯತಕ್ಕದ್ದೇ. ಈ ಪರಿಸ್ಥಿತಿಯಲ್ಲಿ ನಾವು ನಮ್ಮಲ್ಲಿ ಅಹಿಂಸೆಯ ನಿಜವಾದ ಶಕ್ತಿಯನ್ನು ಸಂಚಯಿಸಿಕೊಳ್ಳಲು ಸಮರ್ಥರಾಗಲಾರೆವು.

ಇಂಥ ಅಹಿಂಸಾ ಶಕ್ತಿಯನ್ನು ಹೇಗೆ ಹುಟ್ಟಿಸಿಕೊಳ್ಳಬೇಕು? ಅಹಮದಾಬಾದದಿಂದ ಬಂದ ಪತ್ರಕ್ಕೆ ಉತ್ತರ ಕೊಡುವಾಗ ಅಗಸ್ಟ ೪ ನೆ ತಾರೀಕಿನ ‘ಹರಿಜನ’ದಲ್ಲಿ ಈ ಪ್ರಶ್ನೆಗೆ ನಾನು ಉತ್ತರ ಕೊಟ್ಟಿರುವೆನು. ಧೈರ್ಯದಿಂದ ಮರಣವನ್ನಪ್ಪಿಕೊಳ್ಳುವ ಶಕ್ತಿ ಮತ್ತು ನಮ್ಮ ಹೃದಯಾಂತರಾಳದಲ್ಲಿ ಪ್ರೇಮಭಾವನೆ ಎಲ್ಲಿಯವರೆಗೆ ಉಂಟಾಗಿರುವದಿಲ್ಲವೋ ಅಲ್ಲಿಯವರೆಗೆ ಸಶಕ್ತ ಅಹಿಂಸೆ ನಮ್ಮಲ್ಲಿ ಅಭಿವೃದ್ಧಿಹೊಂದು ಆಸೆಯನ್ನೆ ನಾವು ತಾಳಬಾರದು.

ಆದರ್ಶ ಸಮಾಜದಲ್ಲಿ ಯಾವದಾದರೊಂದು ಬಗೆಯ ಸರಕಾರವಿರಬೇಕೋ ಇರಲೇಬಾರದೋ ಎಂಬ ಪ್ರಶ್ನೆ ಉಳಿಯುತ್ತದೆ. ಸದ್ಯದಲ್ಲಿ ಈ ಪ್ರಶ್ನೆಗಾಗಿ ನಾವು ತಲೆಕೆಡಿಸಿಕೊಳ್ಳಬಾರದೆಂದು ನನಗನಿಸುತ್ತದೆ. ಇಂಥ ಸಮಾಜರಚನೆಗಾಗಿ ನಾವು ಕಾರ್ಯಮಾಡುತ್ತ ಸಾಗಿದರೆ ಜನತೆಗೆ ಕಲ್ಯಾಣದಾಯಕವಾದ ರೀತಿಯಲ್ಲಿ ಅದು ಸಾವಕಾಶದಲ್ಲಿ ಪರಿಣಮಿಸುತ್ತ ಹೋಗುವದು. ಯುಕ್ಲೀಡನ ರೇಖೆಗೆ ಅಡ್ಡಗಲ ಇಲ್ಲೆಂಬುದು ಸಿದ್ಧಾಂತ. ಆದರೆ ಈ ವರೆಗೆ ಅಂಥ ರೇಖೆಯನ್ನು ತೆಗೆಯಲು ಯಾರೂ ಸಮರ್ಥರಾಗಿಲ್ಲ. ಎಂದಿಗೂ ಆಗಲಾರರು. ಹೀಗಿದ್ದರೂ ಆ ಆದರ್ಶ ರೇಖೆಯನ್ನು ಮನಸಿನಲ್ಲಿಟ್ಟುಕೊಂಡು ನಾವು ಭೂಮಿತಿಯಲ್ಲಿ ಇಷ್ಟೊಂದು ಪ್ರಗತಿ ಹೊಂದಿರುವೆವು. ಈ ದೃಷ್ಟಾಂತವೆ ಎಲ್ಲ ಧ್ಯೇಯದಲ್ಲಿ ಸತ್ಯವಾಗಿ ಪರಿಣಮಿಸುವದು.

ಜಗತ್ತಿನಲ್ಲಿ ಎಲ್ಲಿಯೂ ಸರಕಾರವಿಲ್ಲದೆ ಇದ್ದ ದೇಶವಿಲ್ಲೆಂಬುದನ್ನು ನೆನೆಪಿನಲ್ಲಿಟ್ಟುಕೊಳ್ಳತಕ್ಕದ್ದು. ಜಗತ್ತಿನಲ್ಲಿ ಎಲ್ಲಿಯಾದರೂ ಅದು ಅಸ್ತಿತ್ವದಲ್ಲಿ ಬರುವದಾಗಿದ್ದರೆ ಹಿಂದುಸ್ತಾನದಲ್ಲಿಯೆ. ಏಕೆಂದರೆ ನಮ್ಮಲ್ಲಿಯೆ ಈ ದಿಶೆಯಲ್ಲಿ ಸ್ವಲ್ಪಾದರೂ ಪ್ರಯತ್ನ ಮಾಡಿದ್ದಾಗಿದೆ. ಅವಶ್ಯಕವಿಟ್ಟದ ವರೆಗೆ ಶೌರ್ಯವನ್ನು ಪ್ರದರ್ಶಿಸಲ ನಾವಿನ್ನೂ ಸಮರ್ಥರಾಗಿಲ್ಲ ಆ ಬಗೆಯ ಶೌರ್ಯ ಸಂಪಾದನೆಗೆ ಒಂದೇ ಒಂದು ಮಾರ್ಗವಿದೆ. ಅದರಲ್ಲಿ ವಿಶ್ವಾಸವಿದ್ದವರು ಅದನ್ನು ಪ್ರದರ್ಶಿಸಬೇಕು. ನಾವು ಖಡ್ಗಗಳ ಅಂಜಿಕೆಯನ್ನು ತೊರೆದಂತೆ ಸಾವಿನ ಅಂಜಿಕೆಯನ್ನೂ ಪೂರ್ಣವಾಗಿ ತೊಡೆದು ಹಾಕಲಿಕ್ಕೆ ಬೇಕು.

ಹೊಸದಿಲ್ಲಿ — ಮೋ. ಕ. ಗಾಂಧಿ

೬—೯—೧೯೪೬ (ಹರಿಜನ ಸೇವಕದಿಂದ)

ಟೀಕೆ ಟಿಪ್ಪಣಿಗಳು

ಹಿಂದುಸ್ತಾನೀ

“ಹಿಂದುಸ್ತಾನಿಯ ಪರವಾಗಿ ನಡೆದ ಒಳ್ಳೆ ಉತ್ತೇಜಿತ ಕಾರ್ಯ ನಿಜವಾಗಿ ದೇಶಕ್ಕೆ ಕಲ್ಯಾಣಕರವಾಗಿದೆಯಲ್ಲದೆ ಸ್ವಾತಂತ್ರ್ಯ ಸಂಪಾದನೆಯಲ್ಲಿ ಸಹಾಯಕವಾಗಿದೆ. ರಾಷ್ಟ್ರಭಾಷೆ ಯಾವ ದೇಶಕ್ಕೆ ಇಲ್ಲವೊ ಆ ದೇಶಕ್ಕೆ ಬಾಳಲಿಕ್ಕೆ ಕೂಡ ಅಧಿಕಾರವಿಲ್ಲ. ಆದ್ದರಿಂದ ನಮ್ಮ ಸ್ಥಿತಿ ಅತ್ಯಂತ ದುರ್ದೈವದ್ದಾಗಿದೆ. ಆದರೂ ನಮ್ಮ ಮುಖಂಡರು ಅತ್ತ ಸಾಕಷ್ಟು ಗಮನವನ್ನು ಕೊಡುತಿರುವದಿಲ್ಲ. ನೀವು ಎಷ್ಟೇ ಪ್ರಯತ್ನಿಸಿದರೂ ಕಾಂಗ್ರೆಸ ಕಾರ್ಯಕರ್ತರು ನಿಮ್ಮ ಸಲಹೆಯಂತೆ ನಡೆಯಲೊಲ್ಲರು. ನಮ್ಮ ಕಾಂಗ್ರೆಸ ಕಮೀಟಿ ಸಭೆಗಳಲ್ಲಿ ಮತ್ತು ಶಾಸನಸಭೆಗಳಲ್ಲಿ ಅನೇಕ ಜನರು, ಯಾರ ಮಾತೃಭಾಷೆ ಹಿಂದೀ ಇಲ್ಲವೆ ಉರ್ದು ಆಗಿರುವದೊ ಅಂಥವರು ಕೂಡ, ಇಂಗ್ಲಿಷಿನಲ್ಲಿಯೆ ಮಾತಾಡುತ್ತಾರೆ. ಖಾದಿ ಧರಿಸಲಿಕ್ಕೆ ಬೇಕೆಂಬ ಒತ್ತಾಯಪಡಿಸಿದಂತೆ ಪ್ರತಿಯೊಬ್ಬ ಕಾಂಗ್ರೆಸ್ಸಿಗನು ಸಭೆಗಳಲ್ಲಿ ಇಲ್ಲವೆ ಶಾಸದ ಸಭೆಗಳಲ್ಲಿ ಹಿಂದುಸ್ತಾನಿಯಲ್ಲಿಯೆ ಮಾತಾಡಬೇಕು, ಕಾರ್ಯಕಲಾಪಗಳನ್ನೆಲ್ಲ ಹಿಂದುಸ್ತಾನಿಯಲ್ಲಿಯೆ ನಡೆಸಬೇಕೆಂದು ಒತ್ತಾಯ ಪಡಿಸುವದು ಶಕ್ಯವಿಲ್ಲವೆ? ಹಿಂದುಸ್ತಾನಿಯ ಪರಿಚಯವೇನೂ ಇಲ್ಲದಿದ್ದವರಿಗೆ ಸ್ವಲ್ಪ ಸೌಕರ್ಯ ತೋರಿಸಬಹುದು. ಆದರೆ ಇಂತಿಷ್ಟು ಅವಧಿಯಲ್ಲಿ ರಾಷ್ಟ್ರೀಯ ಭಾಷೆಯನ್ನು ಕಲಿಯಲಿಕ್ಕೆ ಬೇಕೆಂದು ಅವರಿಗಾದರೂ ಅವಧಿಯನ್ನು ನಿರ್ದಿಷ್ಟಪಡಿಸಬೇಕು. ಹಿಂದುಸ್ತಾನೀ ಭಾಷೆಯನ್ನು ಬಲ್ಲ ಹೊಣೆಗಾರ ಕಾಂಗ್ರೆಸ್ಸಿಗರಿಗೆ ಕೂಡ ಇಂಗ್ಲಿಷಿನಲ್ಲಿ ಮಾತಾಡುವದೇ ಸೇರುತ್ತದೆಂದು ನನ್ನ ಅನುಭವ. ಸಂಪೂರ್ಣ ಬದಲಾವಣೆಯಾಗಬೇಕಾದರೆ ಇದನ್ನು ನಿಲ್ಲಿಸಲಿಕ್ಕೆ ಬೇಕು. ಇಂದು ಕಾಂಗ್ರೆಸ್ಸಿಗರು ಉಚ್ಚ ಸ್ಥಾನಗಳನ್ನು ವಹಿಸುತಿರುವರು. ಅಲ್ಲಿಯಾದರೂ ಅವರು ಕಾರ್ಯಕಲಾಪಗಳನ್ನೆಲ್ಲ ತಮ್ಮ ಮಾತೃಭಾಷೆಯಲ್ಲಿ ಸಾಗಿಸಲು ಪ್ರಯತ್ನಿಸಬೇಕು.”

ಈ ಪತ್ರ ಲೇಖಕನು ಸರಿಯಾದುದನ್ನು ಹೇಳಿರುವನು. ಇಂಗ್ಲೀಷಿನ ಮೋಹವಿನ್ನೂ ನಮ್ಮನ್ನು ಬಿಟ್ಟಿರುವದಿಲ್ಲ. ಆ ಮೋಹವನ್ನು ನಾವು ಬಿಡುವ ವರೆಗೆ ನಮ್ಮ ಮಾತೃಭಾಷೆ ಬಡವಾಗಿಯೆ ಉಳಿಯುವದು ಅಲ್ಲಲ್ಲಿನ ಜನತಾ ಸರಕಾರಗಳು ರಾಷ್ಟ್ರಭಾಷೆಯಲ್ಲಿ ಇಲ್ಲವೆ ಪ್ರಾಂತಿಕ ಭಾಷೆಯಲ್ಲಿ ತಮ್ಮ ಕಾರ್ಯಕಲಾಪಗಳನ್ನು ಸಾಗಿಸಬಯಸುವವೊ? ಇದನ್ನು ಸಾಧ್ಯಮಾಡಿಕೊಳ್ಳಬೇಕಾದರೆ ಅವರು ತಮ್ಮ ಕಚೇರಿಗಳಲ್ಲಿ ಭಾಷಾತಜ್ಞರನ್ನಿಟ್ಟುಕೊಳ್ಳಬೇಕಾಗುವದು. ರಾಷ್ಟ್ರಭಾಷೆಯಲ್ಲಿ ಇಲ್ಲವೆ ಪ್ರಾಂತ ಭಾಷೆಯಲ್ಲಿ ಅರ್ಜಿ ಮುಂತಾದವುಗಳನ್ನು ಬರೆಯಲು ಸಾರ್ವಜನಿಕರು ಪ್ರೋತ್ಸಾಹವನ್ನು ಕೊಡಬೇಕು. ನಮ್ಮ ಮಾತೃಭಾಷೆಯಲ್ಲಿ ಕಾರ್ಯಕಲಾಪಗಳನ್ನು ನಡೆಸುವದರಿಂದ ಬಹಳಷ್ಟು ಹಣವನ್ನು ನಾವು ಉಳಿಸುವೆವಲ್ಲದೆ ಸಾರ್ವಜನಿಕರಿಗಾದರೂ ಎಲ್ಲವನ್ನು ತಿಳಿದುಕೊಳ್ಳಲು ಬಹಳ ಸುಲಭವಾಗುವದು.

ಹೊಸದಿಲ್ಲಿ — ಮೋ. ಕ. ಗಾಂಧಿ

೭-೯-೧೯೪೬. (ಹರಿಜನ ಸೇವಕದಿಂದ)

ಕೃಷ್ಣಾ ಜಿಲ್ಲೆಯಲ್ಲಿ ಹರಿಜನ ಕಾರ್ಯ

ಶ್ರೀ ಜಿ. ರಾಮಚಂದ್ರ ರಾಯರು ತಮ್ಮ ಹರಿಜನ ಕಾರ್ಯದ ವಿವರಗಳನ್ನು ಕೊಡುವ ಒಂದು ಪತ್ರ ಬರೆದಿದ್ದಾರೆ. ಈ ಕೆಳಗೆ ಅದರ ಸಾರವನ್ನು ಸಂಗ್ರಹಿಸಲಾಗಿದೆ:—

“ಹರಿಜನರು ಸಾರ್ವಜನಿಕ ಬಾವಿಗಳನ್ನು ಉಪಯೋಗಿಸುವ ಸಮಸ್ಯೆಯನ್ನು ನಾವು ಎತ್ತಿಕೊಂಡಿದ್ದೇವೆ. ೧೯೩೦ರ ಮದ್ರಾಸ್ ಸ್ಥಾನಿಕ ಸಂಸ್ಥೆಗಳ ಕಾಯದೆಯ ೧೬೬ ಆ ಕಲಮು ಯಾವುದೇ ಪಂಚಾಯತ ಸಂಸ್ಥೆಯ ಬಾವಿ, ಕೆರೆ, ಜಲಾಶಯ, ಜನಮಾರ್ಗ ಮೊದಲಾದವುಗಳನ್ನು ಜಾತಿ ಮತ ಪಂಥ ಭೇದವಿಲ್ಲದೆ ಎಲ್ಲರೂ ಉಪಯೋಗಿಸಬಹುದೆಂದು ವಿಧಿಸುತ್ತದೆ. ಈ ವಿಧಿಯ ಆಚರಣೆಯಲ್ಲಿ ಅಡ್ಡಿಯೊಡ್ಡುವವನಿಗೆ ೨೦೦ ರೂಪಾಯಿ ದಂಡವನ್ನು ಕೂಡ ಅದು ತೋರಿಸುತ್ತದೆ. ಆದರೆ ಹರಿಜನರ ಮಟ್ಟಿಗೆ ಈ ಕಾಯದೆಯನ್ನು ಕಡೆಗಣಿಸುವದೇ ರೂಢಿಯಾಗಿಬಿಟ್ಟಿದೆ. ಸಾರ್ವಜನಿಕ ಬಾವಿಗಳ ಬಳಿ ಉದ್ದನ್ನ ಸಾಲು ಹಿಡಿದು ನಿಂತು, ಯಾವನಾದರೂ ಕರುಣಾಳು ಹರಿಜನೇತರನು ತಮ್ಮ ಕೊಡಗಳಿಗೆ ನೀರು ತುಂಬುವನೋ ಎಂದು ಬಾಯಿಬಿಡುತ್ತ ತಾಸುಗಟ್ಟಲೆ ಕಾಯುತಿರುವ ಹರಿಜನರನ್ನು ನೋಡಿದರೆ ಮನಃಕರಗುತ್ತದೆ. ನಾವು ನಮ್ಮ ಕೆಲಸಕ್ಕೆ ಕಂಠಿಪಾಡು ಹಳ್ಳಿಯನ್ನು ಆರಿಸಿಕೊಂಡೆವು. ಅಲ್ಲಿ ಸ್ಥಾನಿಕ ಪಂಚಾಯತ ಸಂಸ್ಥೆ ಒಂದು ಬಾವಿಯನ್ನು ನಡೆಸುತಿದೆ. ನಾವು ಮುಂದಾಳುಗಳಿಗೆ ಕಾಯದೆಯ ಅರ್ಥವನ್ನು ಮಾತ್ರವಲ್ಲ ಅದರ ನೈತಿಕ ಕರ್ತವ್ಯವನ್ನು ಕೂಡ ವಿವರಿಸಿ ಹೇಳಿದೆವು. ಸುಮಾರು ಮೂರು ವಾರಗಳ ಪ್ರಚಾರದಿಂದಾದ ಪರಿಣಾಮದಿಂದ ಧೈರ್ಯಗೊಂಡು ಒಂದು ಸಾರ್ವಜನಿಕ ಸಭೆಯನ್ನು ಕರೆದಾಗ ಅದರಲ್ಲಿ ನಮ್ಮ ಸೂಚನೆಗೆ ಪ್ರಚಂಡ ಬೆಂಬಲ ದೊರೆತುದರಿಂದ ಆ ಬಾವಿಯನ್ನು ಹರಿಜನರು ಇನ್ನು ಮುಂದೆ ಯಾವ ಉಪದ್ರವದ ಭೀತಿಯೂ ಇಲ್ಲದೆ ಉಪಯೋಗಿಸಬಹುದೆಂದು ಸಾರುವದಾಯಿತು.

“ಮರುದಿನ ಮುಂಜಾನೆ ನೋಡಲಾಗಿ! ಈ ನಿರ್ಣಯದ ಪ್ರಯೋಜನವನ್ನು ಪಡೆಯಲು ಹರಿಜನರೇ ಹಿಂದೆಗೆಯುತಿದ್ದುದು ಕಂಡು ಬಂತು. ಅವರ ಮನೋವೃತ್ತಿಯ ಈ ವಿಷಾದಕರ ಪ್ರದರ್ಶನವನ್ನು ಕಂಡು ನಾವು ಅವರನ್ನು ಬಾವಿಗೆ ಕರೆತರುವ ಕಠಿನತರ ಉದ್ಯೋಗವನ್ನು ಕೈಕೊಳ್ಳಬೇಕಾಯಿತು. ಅವರು ಬಾವಿಯಿಂದ ನೀರು ಸೇದತೊಡಗಿದೊಡನೆ ಅತ್ತ ಸವರ್ಣ ಹಿಂದುಗಳಲ್ಲಿ ಪ್ರತಿಕ್ರಿಯೆ ಮೊದಲಾಯಿತು. ಅವರಲ್ಲಿ ಹಲವರು ತಮಗೆ ಬಹಳ ತೊಂದರೆಯಾದರೂ ಬಾವಿಗೆ ಬರುವದನ್ನೇ ಬಿಟ್ಟುಬಿಟ್ಟರು. ಆದರೆ ಕೆಲವರು ಮಾತ್ರ ತಮ್ಮ ನಿರ್ಧಾರಕ್ಕೆ ಗಟ್ಟಿ ಮನಸಿನಿಂದ ಅಂಟಿಕೊಂಡುದರ ಫಲವಾಗಿ ವಿರೋಧ ಮೆಲ್ಲ ಮೆಲ್ಲನೆ ಅಳಿಯಿತು. ಅವರಿಗೆ ೧೬೬ ಆ ಕಲಮಿನ ಅರ್ಥವನ್ನು ವಿವರಿಸುವಂತೆ ಸ್ಥಾನಿಕ ಸಂಸ್ಥೆಗಳ ಡೆಪ್ಯೂಟಿ ಇನಸ್ಪೆಕ್ಟರಿಗೆ ಬಿನ್ನವಿಸಿಕೊಳ್ಳುವ ಅವಶ್ಯಕತೆಯೂ ಬಿತ್ತು.

“ಈ ಅನುಭವದಿಂದ ಉತ್ತೇಜನಗೊಂಡಿರುವ ನಾವು ಹರಿಜನರಿಗೆ ನೀರು ದೊರಕಿಸಿಕೊಳ್ಳಲು ಸೌಕರ್ಯಗಳಿಲ್ಲದ ಬೇರೆ ಹಳ್ಳಿಗಳಲ್ಲಿಯೂ ಕೆಲಸವನ್ನು ಕೈಕೊಳ್ಳಬೇಕೆಂದಿದ್ದೇವೆ. ಇಂಥ ತೊಂದರೆಗಳನ್ನು ನೀಗಿಸಬೇಕಾದರೆ ನೈತಿಕ ಉಪದೇಶವೂ ಕಾಯದೆಯ ವಿಧಿಯೂ ಸಂಗಡಲೆ ಬೇಕಾಗುವದೆಂದು ನನ್ನ ಅಭಿಪ್ರಾಯ. ಒಂದಿಲ್ಲದಿದ್ದರೆ ಇನ್ನೊಂದು ಅಸಮರ್ಥವಾಗುತ್ತದೆ. ಮತ್ತು ಸಾಮಾಜಿಕ ರೂಢಿಗಳ ಬಗೆಗೆ ಈಗಿರುವ ಕಾಯದೆಗಳು ಸಂದಿಗ್ಧವೂ ದುರ್ಬಲವೂ ಆಗಿವೆ. ಈ ದೋಷವನ್ನು ಸರಿಪಡಿಸಬೇಕಾಗಿದೆ. ಹರಿಜನ ಕಾರ್ಯಕ್ಕಾಗಿ ಒಂದು ಕೋಟಿ ರೂಪಾಯಿಯನ್ನು ತೆಗೆದಿಟ್ಟಿರುವ ಮದ್ರಾಸ್ ಸರಕಾರವು ಅದರಲ್ಲೊಂದು ಅಂಶವನ್ನು ಈಗಾಗಲೆ ಕಾಯದೆ ಪುಸ್ತಕದಲ್ಲಿರುವ ಸಂಬಂಧಪಟ್ಟ ನಿಯಮಗಳನ್ನು ಪ್ರಚಾರಪಡಿಸಲು ವಿನಿಯೋಗಿಸುವದೊಳಿತು. ಕಾಯದೆಗಳನ್ನು ಪಾಸು ಮಾಡುವದಷ್ಟೇ ಮಹತ್ವ ಅದನ್ನು ಅಮಲಿಗೆ ತರುವದಕ್ಕೂ ಇದೆ.”

ದಲಿತ ಹರಿಜನರ ಸಲುವಾಗಿ ಅವರು ನಡೆಸಿರುವ ಆಸ್ಥೆಯ ಪರಿಶ್ರಮಕ್ಕಾಗಿ ಶ್ರೀ. ರಾಯರು ಅಭಿನಂದನಾರ್ಹರು. ಅವರ ಪ್ರಯತ್ನಗಳಿಗೆ ಸಾರ್ವಜನಿಕರು ಬೆಂಬಲವೀಯುವದು ಅವಶ್ಯ.

ಹೊಸದಿಲ್ಲಿ —ಮೋ. ಕ. ಗಾಂಧಿ

೬—೯—೧೯೪೬

ಪಾನ ನಿರೋಧ

ರೆವರೆಂಡ್ ಈ ಗಾರ್ಡನ್ನರ ಬರೆದ ಈ ಕೆಳಗಿನ ಅಂಶಗಳ ಪ್ರಾಮುಖ್ಯ ಗೊಂಡಂತಿವೆ.

"ಬರಗಾಲ ದೇಶವನ್ನು ಬೆದರಿಸುತ್ತಿರುವ ಈ ಕಾಲದಲ್ಲಿ ಅದರ ಭಯವನ್ನು ನಿವಾರಿಸುವ ಕೆಲಸ ಕೆಲವು ಪ್ರಯತ್ನಗಳಿಗೆ ಹೆಸರಿಡುವುದು ಸಲ್ಲದು. ಅದರ ಹಲವಾರು ಅಯಸ್ಸಿನ ... ವೃದ್ಧ ಜನರು ಆಹಾರ ಪಸ್ತುವಿನ ಪದಾರ್ಥಗಳಿಗೆ ... ಮಾಡುವವರ ಸಕ್ಕರೆ ... ಭಾಗ ... ಕಾಲಕ್ಕೆ ಮಾಡಿದ ಪದಾರ್ಥಗಳ ಭಟ್ಟಿಗಳಿಗೆ ಹಾಕುವ ಧಾನ್ಯ, ಸಕ್ಕರೆಗಳ ಪೂರೈಕೆಯನ್ನು ಪೂರ್ಣ ಅಥವಾ ಬಹಳ ಭಾಗ ಕಡಿಮೆ ಮಾಡಿ ವಿಷಯದಲ್ಲಿ ಮಾತ್ರ ... ಭಾಗವಾಗಿ ... ಬಲಾತ್ಕಾರದ ... ಪಾನೀಯಗಳ ... ಹಾನಿಕರ ...

"ಬೀರಿನಲ್ಲಿ ಒಂದಿಷ್ಟು ಆಹಾರಸತ್ವವಿದೆ ... ಬಾರ್ಲಿಯಿಂದ ... ಸತ್ವವೆನಿಸಲಾಗದು?

ಅಮೇರಿಕೆಯ ಅಧ್ಯಕ್ಷರು ಮಾದಕ ಭಟ್ಟಿಗಳಿಗೆ ಒದಗಿಸುವ ಗೋದಿಯ ಪ್ರಮಾಣವನ್ನು ... ಧಾನ್ಯಗಳನ್ನು ಮಾದಕ ಪೇಯಗಳ ತಯಾರಿಕೆಗೆ ಉಪಯೋಗಿಸಲಾಗುವದಿಲ್ಲವೆಂದು ... ಹಿಂದೆಯೂ ... ಕೊಳ್ಳಲಾ?

"ಸಾಧ್ಯವಿದ್ದಷ್ಟು ಬೇಗ ಪಾನ ನಿರೋಧವನ್ನು ... ಮದ್ರಾಸಿನ ಕಾಂಗ್ರೆಸ್ ಮಂತ್ರಿಮಂಡಲದ ... ಪಾನ ನಿರೋಧ ... ವರ್ಷ ವರ್ಷಕ್ಕೆ ಮಾದಕ ಪಾನೀಯಗಳ ... ಹಿಂದುಸ್ಥಾನದ ...

ರೆವರೆಂಡ್ ಮಹಾಶಯರೆಂದ ಹಾಗೆ ... ಪಾನನಿರೋಧದ ವಿಷಯದಲ್ಲಿ ... ಶಕ್ತಿಯ ಫಲವಾಗಿ ಅಲ್ಲಿಯ ಹಿಂದೀಯರಿಗೆ

ಪಾನಸ್ವಾತಂತ್ರ್ಯ ದೊರೆತುದರ ಫಲವಾಗಿ ಅವರ ನೈತಿಕ ಶಕ್ತಿ ಕುಂದುತಿದೆ. ಈ ಭಯಾನಕ ಸ್ವಾತಂತ್ರ್ಯದ ಸ್ವರೂಪ ... ಮುಸಲ್ಮಾನರಿಗೂ ಇತರರಿಗೂ ... ಪಾನಮ್ಮಾಪಾಗಳಿಂದ ... ವಿರೋಧ.

... ಹಿಂದುಸ್ಥಾನದ ಮೇಲೆ ... ಸ್ವತಂತ್ರ ಹಿಂದುಸ್ಥಾನದಲ್ಲಿ ... ಸ್ವರಾಜ್ಯ ...

ಪಾನನಿರೋಧ ... ಅಂಗೀಕರಿಸಿದ ...

ಹೊಸದಿಲ್ಲಿ — ಮೋ. ಕ. ಗಾಂಧಿ

ಹರಿಜನರು ಮತ್ತು ಬಾವಿಗಳು

ಶ್ರೀ ಹರದೇವ ಸಹಾಯರು ಬರೆಯುತ್ತಾರೆ:—

"ಸಾರ್ವಜನಿಕ ಬಾವಿಗಳಿಂದ ಹರಿಜನರು ನೀರು ...

"ಇದೀಗ ಕಾಂಗ್ರೆಸ ಸರಕಾರಗಳು ಅಧಿಕಾರ ... ಹರಿಜನರ ಸಂಬಂಧದಲ್ಲಿ ... ಬಾವಿಗಳಿಂದ ನೀರು ...

"ಇದಲ್ಲದೆ ಸರಕಾರದವರು ಹರಿಜನರಿಗಾಗಿ ...

ಲೇಖಕರು ಹೇಳುವುದೆಲ್ಲ ಸಂಪೂರ್ಣವಾಗಿ ಸರಿಯಾಗಿದೆ. ಹರಿಜನರಿಗೆ ಬಾವಿಗಳನ್ನು ತೋಡಿಸಿ ... ಸರಕಾರದ ಹೊಣೆಯೇ ಆಗಿದೆ.

ಹೊಸದಿಲ್ಲಿ — ಮೋ. ಕ. ಗಾಂಧಿ [ಹರಿಜನ ಸೇವಕದಿಂದ]

ಖಾದಿ

ಸಣ್ಣದ ಹುಚ್ಚು ಉನ್ಮಾದ ಪರಿಸ್ಥಿತಿಯಲ್ಲಿ ಖಾದಿಯ ಬಗ್ಗೆ ಏನೇ ಹೇಳುವುದು ಅರ್ಥವಿಹೀನವಾಗಿದೆಂದು 'ಹರಿಜನ'ದ ವಾಚಕರು ಹೇಳಬಲ್ಲರು. ...

ಆದುದರಿಂದ ಚರಖಾ ಸಂಘದವರು ಈ ಬಗ್ಗೆ ...

೧) ಬರುವ ... ಖಾದಿ ಜಯಂತಿಗಾಗಿ ...
೨) ಸಾಮಾನ್ಯ ಸಹಕಾರಿಯ ...
೩) ಸ್ವತಃ ಹತ್ತಿ ಅರೆದುಕೊಂಡು, ಹಿಂಜಿಕೊಂಡು ...
೪) ಎಲ್ಲ ಖಾದಿ ಕೇಂದ್ರಗಳಲ್ಲಿ ...

ಹೊಸದಿಲ್ಲಿ — ಮೋ. ಕ. ಗಾಂಧಿ

ವಿನಮ್ರ ಗೋ

ಪಂಚಿಕ ಭಗಿನಿಯೊಬ್ಬಳು ಬರೆಯುತ್ತಾಳೆ:—

೧) ಗದ್ದೆಗೆ ಆಕಳುಗಳನ್ನು ಇಲ್ಲವೆ ಎಮ್ಮೆಗಳನ್ನು ...
೨) ...
೩) ನಮ್ಮ ದೇಶದಲ್ಲಿ ಹುಲ್ಲುಗಾವಲುಗಳ ಕೊರತೆ ವಿಶೇಷವಾಗಿದೆ. ...

ಪ್ರಶ್ನೆ—ಪೆಟ್ಟಿಗೆ

ನೈಸರ್ಗಿಕ ಚಿಕಿತ್ಸೆ ಸರ್ವ ರೋಗನಾಶಕ

ಪ್ರಶ್ನೆ—ಯಾವದೇ ಬೇನೆಗೆ 'ನೈಸರ್ಗಿಕ ಚಿಕಿತ್ಸೆ'ಯನ್ನು ಮಾಡಬಹುದೆಂದು ಹೇಳಲಾಗಿದೆ. ...

ಉತ್ತರ—ನೈಸರ್ಗಿಕ ಚಿಕಿತ್ಸೆಯ ಪೂರ್ತಿ ... ಎಲ್ಲ ಬೇನೆಗಳಿಗೂ ಅದು ಉಪಯುಕ್ತವೆಂದು ಹೇಳುವುದುಂಟು. ...

ಹೊಸದಿಲ್ಲಿ, ೬-೮-೪೬ — ಮೋ. ಕ. ಗಾಂಧಿ

ಒತ್ತಾಯದ ವಿವಾಹ

ಭಗಿನಿಯೊಬ್ಬಳು ಬರೆಯುತ್ತಾಳೆ—

"ವಿವಾಹವಾಗಲೇ ಬೇಕು, ಇಲ್ಲವೆ ಮನೆಯನ್ನು ಬಿಟ್ಟು ಹೋಗಬೇಕು ಎಂದು ಪಾಲಕರು ಒತ್ತಾಯಪಡಿಸಿದರೆ ...

ಈ ಪ್ರಶ್ನೆ ಹಿರಿ ವಿಷಾದವಾಗುತ್ತದೆ. ...

ಹೊಸದಿಲ್ಲಿ, ೬-೮-೪೬ — ಮೋ. ಕ. ಗಾಂಧಿ

ಹೋಗುತ್ತದೆ. ಉಪಯುಕ್ತವಲ್ಲದ ದನಗಳನ್ನೆಲ್ಲ ಕೊಂದುಬಿಡಬೇಕೆಂದು ನೀವು ಹೇಳುವಿರೋ? ಇಲ್ಲವೆ ಈ ಪದ್ಧತಿಯನ್ನೆ ಕಾಯಿದೆಯಿಂದ ನಿಲ್ಲಿಸಿ ಬಿಡಬೇಕೆಂದು ನಿಮ್ಮ ಅಭಿಪ್ರಾಯವೋ?

—ಎಂಓ ಪುಟಕ್ಕೆ

ನಾರದ ಪತ್ರ

ಭಯಾನಕ ಕಾಂಡ

"ಹುಟ್ಟಿನೊಡನೆ ಅಸ್ಪ್ರಶ್ಯನನ್ನು ಕೋಚಾಕ ಬಿಟ್ಟಲ್ಲಿ ಸ್ಥಾಪಿಸಿದಾಗ ನಾವು ನಮ್ಮ ಮುಂದೆ ಕೆಲ ಧ್ಯೇಯಗಳನ್ನು ಇಟ್ಟುಕೊಂಡಿದ್ದೆವು. ...

"ನಾವು ನಮ್ಮ ಧ್ಯೇಯದಿಂದ ಇನ್ನೂ ದೂರವಾಗಿಯೇ ಇದ್ದರೂ ...

"ಆರಿಸಿ ಮಾಡಿದ ಉಪಯುಕ್ತ ದೈಹಿಕ ಶ್ರಮವೆಂಬುದು ಬುದ್ಧಿಯ ಬೆಳವಣಿಗೆಗೆ ಅತ್ಯುತ್ತಮ ಸಾಧನವಾಗಬಲ್ಲದು. ..."

ನಾಳಿನ ಶಿಕ್ಷಕರು

ಹಿಂದಿನ ಒಂದು ಸಂಚಿಕೆಯಲ್ಲಿ ೧೯೪೬ ಆಗಸ್ಟ ದಲ್ಲಿ ಮುಂಬಯಿ ಅ. ಭಾ. ಕಾಂಗ್ರೆಸ್ ಸಭೆಗೆ ಹೋಗುವ ಮುಂಚಿನ ದಿನ ಸೇವಾಗ್ರಾಮದಲ್ಲಿ ... ಶಿಕ್ಷಕರ ತರಬೇತಿ ಶಿಬಿರದಲ್ಲಿ ಗಾಂಧೀಜಿ ... ಶ್ರೀ ಆರ್ಯನಾಯಕಂ ... ಶ್ರೀ ಆರ್ಯನಾಯಕರವರೇ ಜೀವಿತಪ್ರಾಯರೆನಿಸುವ ...

ಆ ದಿನ

ಸಪ್ಟೆಂಬರ ೩ ನೆ ದಿನ, ಪಂಡಿತ ಜವಾಹರಲಾಲರೂ ಅವರ ಸಹಯೋಗಿಗಳೂ ... ಗಾಂಧೀಜಿಯವರ ಪಾಲಿಗೆ ಅದು ಅಳವಾದ ಹೃದಯಪರೀಕ್ಷೆಯ ದಿನವಾಗಿತ್ತು. ...

ಅಂದಿನ ದಿನವನ್ನು ಹಿಂದುಸ್ಥಾನ ಬಲುಗಾಲದಿಂದ ಬಯಸಿದ ಹಿಂದೀ ಇತಿಹಾಸದ ಸರ್ವದಿನವೆಂದು ಗಾಂಧೀಜಿಯವರು ...

ಲಂಡನ್ನಿನಲ್ಲಿ ಎರಡನೆ ದುಂಡುಮೇಜಿನ ಪರಿಷತ್ತಿನಲ್ಲಿ ಬ್ರಿಟಿಶ ಮಂತ್ರಿಗಳ ಮತ್ತು ಹಿಂದೀ ...

ಉತ್ಸವಕ್ಕೆ ವೇಳೆಯಲ್ಲ

ಇದು ಉತ್ಸವ ಸಮಾರಂಭ ಸಂತೋಷ ಪ್ರದರ್ಶನಗಳಿಗೆ ಅವಸರವಲ್ಲವೆಂದು ಗಾಂಧೀಜಿ ಸಭಿಕರಿಗೆ ಎಚ್ಚರಿಸಿದ್ದರು. ... "ಈ ದೇಶದಲ್ಲಿ ಹುಟ್ಟಿ ಇವನ್ನು ಮಾತೃಭೂಮಿ

ಯೆಂದು ಪರಿಗಣಿಸುವವರೆಲ್ಲ, ಅವರು ಹಿಂದೂಗಳಿರಲಿ, ಮುಸ್ಲಿಮರಿರಲಿ, ಪಾರ್ಸಿ, ಕ್ರಿಶ್ಚನ್, ಜೈನ, ಸಿಖ್ಖರೇ ಇರಲಿ, ಸಮಾನವಾಗಿ ಅದರ ಮಕ್ಕಳು, ಮತ್ತು ಅದೇ ಕಾರಣದಿಂದ ಪರಸ್ಪರ ... ರಕ್ತಸಂಬಂಧಕ್ಕಿಂತಲೂ ಬಿಗಿಯಾದುದು."

ಮುಂದುವರಿಸುತ್ತ ಗಾಂಧೀಜಿ ಅಂತಹ: "ಇಂದು ಮುಸ್ಲಿಮರು ಹಿಂದೂಗಳನ್ನು ಸಂಶಯದೃಷ್ಟಿಯಿಂದ ನೋಡುತ್ತಾರೆ. ...

ಸಂಗತಲೇ ಗಾಂಧೀಜಿಯವರು ಗೌರವಪೂರ್ವಕವಾಗಿ ಮುಸ್ಲಿಂ ಲೀಗಿಗೆ ಹೀಗೆಂದರು: ಬ್ರಿಟಿಶರನ್ನು ಹಿಂದೂಗಳನ್ನೂ ಸೇರಿಯೆ ತಮ್ಮ ಶತ್ರುಗಳೆಂದು ...

ಹೊಸದಿಲ್ಲಿ ೩-೯-೪೬

—ನಾರಾಯಣ

ಖಾದೀ ಅರ್ಥಶಾಸ್ತ್ರ

ಪ್ರಸಿದ್ಧ ಅರ್ಥಶಾಸ್ತ್ರ ತಿಳಿದವರಾದ ಡಾ. ಪಿ. ಎಸ್. ಲೋಕನಾಥನ್ ಇವರ ಸಂಪಾದಕತ್ವದಲ್ಲಿ ಹೊರಡುವ 'ಈಸ್ಟರ್ನ ಎಕಾನಾಮಿಸ್ಟ' ಎಂಬ ಪತ್ರಿಕೆಯ ಜೂನ ೨೭ನೇ ತಾರೀಕಿನ ಸಂಚಿಕೆಯಲ್ಲಿ 'ಖಾದೀ ಅರ್ಥಶಾಸ್ತ್ರ' ಎಂಬ ಶಿರೋಲೇಖದಲ್ಲಿ ಒಂದು ಬರೆಹ ಪ್ರಸಿದ್ಧವಾಗಿದೆ. ಬೇರೆ ಬೇರೆ ಅಂಕಿ ಸಂಖ್ಯೆಗಳನ್ನು ಕೊಟ್ಟು, ಹಿಂದುಸ್ಥಾನದಲ್ಲಿಯ ಎಲ್ಲ ಜನರಿಗೆ ಸಾಕಾಗುವಷ್ಟು ಬಟ್ಟೆಯ ಉತ್ಪಾದನೆಯಲ್ಲಿ ಅವಶ್ಯಕ ಜನರನ್ನು ತೊಡಗಿಸಿದ್ದಾದರೆ ಸೇನೆ, ಪೋಲೀಸ, ಶಿಕ್ಷಣ ವೈದ್ಯಕೀಯ ಮೊದಲಾದ ಅವಶ್ಯಕ ಕೆಲಸಗಳಿಗಾಗಿ ಸಾಕಷ್ಟು ಜನರೇ ಉಳಿಯುವದಿಲ್ಲೆಂದು ಸಿದ್ಧಮಾಡಲು ಪ್ರಯತ್ನಿಸಲಾಗಿದೆ. ಒಕ್ಕಲತನದಂಥ ಕೆಲಕಾಲದ ಉದ್ಯೋಗಕ್ಕೆ ಪೂರಕ ಧಂದೆಯೆಂದು ರಾಟೆಗೆ ನಿಜವಾಗಿ ಕೈಗಾರಿಕೆಯ ಉದ್ಯೋಗಗಳಲ್ಲಿ ಸ್ಥಾನವಿದೆಂಬುದು ಖಚಿತ. ಆದರೆ ದೇಶದ ಆರ್ಥಿಕ ಧೋರಣೆಯ ದೃಷ್ಟಿಯಿಂದ ನೋಡಿದರೆ ಅದು ಬಹಳ ಬಡವೆನಿಸುವದು."

ತಮ್ಮ ಪ್ರತಿಪಾದನೆಯ ಬೆಂಬಲಕ್ಕೆಂದು ಕೆಳಗಿನ ಮುದ್ದೆಗಳನ್ನು ಕೊಡಲಾಗಿದೆ–

ಅ) ಪ್ರತಿಯೊಬ್ಬ ಮನುಷ್ಯನಿಗೆ ೨೦ ಚಚ್ಚೌಕ ವಾರ ಅರಿವೆ ಬೇಕೆಂದು ಲೆಕ್ಕ ಹಿಡಿದರೆ ಹಿಂದುಸ್ಥಾನಕ್ಕೆ ಒಟ್ಟಾರೆ ೮೦೦ ಕೋಟಿ ಚಚ್ಚೌಕ ವಾರ ಬಟ್ಟೆ ಬೇಕಾಗುವದು.

ಬ) ಇಷ್ಟು ನೂಲನ್ನು ನೂಲಬೇಕಾದರೆ ೩.೩೦ ಕೋಟಿ ಕೆಲಸಗಾರರು ಬೇಕಾಗುವರು.

ಕ) ದಿನಾಲು ೮ ಗಂಟೆ ಕೆಲಸ ಮಾಡಿ ಪ್ರತಿಯೊಬ್ಬ ನೇಕಾರ ಖಂಡಿಕೆ ಸುತ್ತಿಕೊಂಡು, ನೂಲು ಕಟ್ಟಿಕೊಂಡು ೨½ ವಾರ ಬಟ್ಟೆ ನೆಯ್ಯಬಲ್ಲನು ಈ ಲೆಕ್ಕದಂತೆ ೧.೦೬ ಕೋಟಿ ನೇಕಾರರು ಬೇಕಾಗುವರು.

ಡ) ಹತ್ತಿ ಅರೆಯುವದಕ್ಕಾಗಿ .೧೬ ಕೋಟಿ ಹಂಜಿ ಹಾಕುವದು ಮುಂತಾದ್ದಕ್ಕಾಗಿ .೮೨ ಕೋಟಿ ಜನ ಬೇಕಾಗುವರು. ಇದೆಲ್ಲವನ್ನು ಕೂಡಿಸಿದರೆ ಕೇವಲ ಖಾದಿ ತಯಾರಿಸುವ ವಿಧಾನಗಳಿಗೇ ಸುಮಾರು ೫ ಕೋಟಿ ಜನ ಹತ್ತುವರು. ಅಲ್ಲದೆ ಪ್ರತಿ ವರ್ಷ ೩೩೦ ಲಕ್ಷ ರಾಟೆಗಳನ್ನು ಹೊಸದಾಗಿ ತಯಾರ ಮಾಡಬೇಕಾಗುತ್ತದೆ. ಇದಕ್ಕಾಗಿ ಲಕ್ಷಗಟ್ಟಲೆ ಬಡಿಗರು ಬೇಕಾಗುತ್ತಾರೆ. ೬ ಲಕ್ಷ ಮಗ್ಗಗಳನ್ನು ಸಿದ್ಧಪಡಿಸಲು ೩೦ ಲಕ್ಷ ಕಾರ್ಯಕರ್ತರು ಬೇಕಾಗುವರು. ೪೦೦ ಪೌಂಡಿನ ೫೫ ಲಕ್ಷ ಅರಳೆ ಗಂಟುಗಳು ಹತ್ತುವವು ಇಷ್ಟೊಂದು ಅರಳೆಯನ್ನು ಉತ್ಪಾದಿಸಿ ಕಲೆಹಾಕಿ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಒಯ್ಯಲು ಹಾಗು ಮೇಲೆ ಹೇಳಿದ ಎಲ್ಲ ವಿಧಾನಗಳಿಗೆ ಕನಿಷ್ಠ ೬ ಕೋಟಿ ಜನ ಬೇಕಾಗಬಹುದು ಅಂದರೆ ಇಡೀ ದೇಶದ ಜನತೆಯಲ್ಲಿ ನೂರಕ್ಕೆ ೧೮ರಷ್ಟು ಜನ ಇದರಲ್ಲಿ ತೊಡಗಿದಂತಾಗುವದು ಮೂರರಲ್ಲಿ ೪೦ ರಷ್ಟು ಜನ ಕೆಲಸಗಾರ ವರ್ಗದವರೆಂದು ಹಿಡಿದರೆ ಹಿಂದುಸ್ಥಾನದಲ್ಲಿ ೧೬ ಕೋಟಿ ಕೆಲಸಗಾರರಿರುವರೆಂದು ಸಾಮಾನ್ಯವಾಗಿ ಹೇಳಬಹುದು. ಈ ೧೬ ಕೋಟಿ ಜನರಲ್ಲಿ ೬ ಕೋಟಿ ಜನರು ಖಾದಿಯಲ್ಲಿಯೆ ತೊಡಗಿದರೆ, ಆಹಾರ ಬೆಳೆಯಲು, ಮನೆಗಳನ್ನು ಕಟ್ಟಲು ಗಣಿಗಳನ್ನು ಅಗಿಯಲು, ಆಡಳಿತ ಸಾಗಿಸಲು, ಪೋಲೀಸರ ಮತ್ತು ದೇಶ ರಕ್ಷಣೆಗಾಗಿ ಆರೋಗ್ಯ ಸಂರಕ್ಷಣೆಗಾಗಿ ಮತ್ತು ಶಿಕ್ಷಣ ಸೌಕರ್ಯವನ್ನೊದಗಿಸಲ ಕೇವಲ ೯ ಕೋಟಿ ಜನ ಉಳಿಯುವರು. ಒಕ್ಕಲತನಕ್ಕಾಗಿಯೆ ೧೧ ಕೋಟಿಗಿಂತ ಹೆಚ್ಚು ಜನ ಬೇಕಾಗುವರಾದ್ದರಿಂದ, ಬಟ್ಟೆಯ ಉತ್ಪಾದನೆ ಮತ್ತು ಆಹಾರ ಇಡೀ ಕೆಲಸಗಾರ ವರ್ಗವನ್ನೆ ತಿಂದುಬಿಟ್ಟರೆ ಉಳಿದ ಕೆಲಸಗಳ ಪಾಡೇನು?

ಈ ಮುದ್ದೆಗಳಿಗೆ ಒಂದೊಂದಾಗಿ ಉತ್ತರ ಕೊಡಲು ಪ್ರಯತ್ನಿಸುತ್ತೇವೆ. ಮೊದಲು ನೆಯ್ಗೆಯದನ್ನು ತೆಗೆದುಕೊಳ್ಳುವಾ. ೧ ಕೋಟಿ ೬ ಲಕ್ಷ ಜನ ನೇಕಾರರು ಬೇಕಾಗುವರೆಂದು ಈ ಲೇಖಕರು ಹೇಳಿದ್ದಾರೆ. ನೇಕಾರರೆಂದರೆ ಅವರಿಗೆ ಸಹಾಯ ಮಾಡುವ ಎಲ್ಲ ಜನರನ್ನು ಹಿಡಿದರೆ ಈ ಅಂಕೆ ಸರಿಹೋಗುತ್ತದೆ. ಯುದ್ಧ ಪೂರ್ವದಲ್ಲಿಯೂ ಹಿಂದುಸ್ಥಾನದಲ್ಲಿ ಒಂದು ಕೋಟಿ ಜನ ನೇಕಾರರಿದ್ದರು. ಆದುದರಿಂದ ಈ ವಿಭಾಗದಲ್ಲಿ ಬೇಕಾದ ಕೆಲಸಗಾರರ ಸಂಖ್ಯೆಯಲ್ಲಿ ಬಹಳ ಹೆಚ್ಚಳವಾದಂತಾಗಲಿಲ್ಲ. ತಮ್ಮ ಅವಶ್ಯಕತೆಗಳನ್ನು ಪೂರೈಸಲು ನೇಕಾರರಿಗೆ ಇಂದು ಸಾಕಷ್ಟು ನೂಲು ಸಿಕ್ಕುವದಿಲ್ಲ. ಈ ನಿರುದ್ಯೋಗಿಗಳಿಗೆಲ್ಲ ಉದ್ಯೋಗ ಸಿಕ್ಕಂತಾಗುವದು.

ರಾಟೆ, ಮಗ್ಗ ಮತ್ತು ಉಳಿದ ಉಪಕರಣಗಳನ್ನು ತಯಾರ ಮಾಡುವದರ ಸಂಬಂಧದಲ್ಲಿ ಮುಂದೆ ಮಾಡಲ್ಪಟ್ಟ ವಿವಾದಕ್ಕೂ ಇದೇ ಅನ್ವಯಿಸುತ್ತದೆ ಹಿಂದುಸ್ಥಾನದಲ್ಲಿ ಇಂದು ನಮಗೆ ಬೇಕಾದುದಕ್ಕಿಂತ ಹೆಚ್ಚು ಮಗ್ಗಗಳು ಮತ್ತು ರಾಟೆಗಳು ಇರುವವು. ಕೂಡಲೆ ಹೊಸ ರಾಟೆಗಳನ್ನಾಗಲಿ ಮಗ್ಗಗಳನ್ನಾಗಲಿ ತಯಾರ ಮಾಡಬೇಕಿಲ್ಲ. ಅಲ್ಲದೆ ಒಂದು ರಾಟೆಯು ಒಬ್ಬನ ಆಯುಷ್ಯ ಮುಗಿವವರೆಗೆ ಬಾಳುವದು. ಹೊಸ ರಾಟೆಗಳನ್ನು ತಯಾರ ಮಾಡಬೇಕಾದರೂ ಪ್ರಾರಂಭದಲ್ಲಿ ವರ್ಷಕ್ಕೆ ಒಂದು ಲಕ್ಷದಂತೆ ಅವನ್ನು ಸಿದ್ಧಮಾಡುವ ಅವಶ್ಯಕತೆಯಿಲ್ಲ. ಕೆಲಮಟ್ಟಿಗೆ ದುರಸ್ತಿ ಮಾತ್ರ ಬೇಕಾಗಬಹುದು.

ರಾಟೆಗಳನ್ನು ಮಗ್ಗಗಳನ್ನು ಮಾಡುವುದಕ್ಕಾಗಿ ವಿಶಿಷ್ಟ ಹೊಸ ಕಲಾಕುಶಲರೇನು ಬೇಕಾಗಿಲ್ಲೆಂಬುದು ನಿರ್ವಿವಾದವಾಗಿದೆ. ಎಲ್ಲೆಲ್ಲಿ ಖಾದಿ ಉತ್ಪಾದನೆ ನಡೆದಿದೆಯೋ ಮತ್ತು ಎಲ್ಲಿ ಅದು ದಿನದಿನಕ್ಕೆ ಹೆಚ್ಚುತ್ತಿರುವದೋ ಅಲ್ಲಿ ಒಕ್ಕಲತನ ಉಪಕರಣಗಳನ್ನು ಸಿದ್ಧ ಮಾಡುವವರೆ ಈ ಖಾದೀ ಉಪಕರಣಗಳನ್ನು ಸಿದ್ಧ ಮಾಡಬಹುದು ದುರಸ್ತಿ ಮಾಡಬಹುದು. ಈ ಕಲಾಕುಶಲರಿಗೆ ಈಗ ಸಾಕಷ್ಟು ಕೆಲಸ ಸಿಕ್ಕುವುದಿಲ್ಲ. ಪ್ರತಿಯೊಂದು ಹಳ್ಳಿಯಲ್ಲಿ ರಾಟೆಗಳು ತಿರುಗಹತ್ತಿದರೆ ಮಗ್ಗಗಳು ನಡೆಯಹತ್ತಿದರೆ ಅವರಿಗೆ ಇಡೀ ದಿವಸ ಕೆಲಸ ಸಿಕ್ಕುವದು ಖಂಡಿತ.

೮೦೦ ಕೋಟಿ ವಾರ ಖಾದಿಯನ್ನು ಉತ್ಪಾದಿಸಲು ನಾವೇನು ಹತ್ತಿಯನ್ನು ಹೊಸದಾಗಿ ಬೆಳೆಸಬೇಕಾಗಿಲ್ಲ. ಆದುದರಿಂದ ೫೫ ಲಕ್ಷ ಅರಳೆ ಗಂಟುಗಳನ್ನು ಬೆಳೆದು ಕಲೆಹಾಕಿ ಬೇರೆ ಬೇರೆ ಕಡೆ ಕಳಿಸಲು ಹೆಚ್ಚು ಕೂಲಿಕಾರರು ಬೇಕಾಗುವರೆಂಬ ಪ್ರಶ್ನೆಯೇ ಉದ್ಭವಿಸುವದಿಲ್ಲ. ತದ್ವಿರುದ್ಧವಾಗಿ ಪ್ರತಿಯೊಂದು ಹಳ್ಳಿಯೂ ತನಗೆ ಬೇಕಾದಷ್ಟು ಹತ್ತಿಯನ್ನು ಬೆಳೆಯಬೇಕೆಂಬದಾಗಿ ಇರುವದು. ಇದನ್ನು ಕಾರ್ಯರೂಪದಲ್ಲಿ ತಂದದ್ದಾದರೆ ದೊಡ್ಡ ದೊಡ್ಡ ಜವಳಿ ಗಿರಣಿಗಾರರು, ವ್ಯಾಪಾರಸ್ಥರು, ದಲಾಲರು ಮೊದಲಾದವರ ವೆಚ್ಚ, ಅರಳೆಯನ್ನು ರವಾನಿಸುವ, ಅರೆಯುವ ಮತ್ತು ಗಂಟು ಕಟ್ಟುವ ಕಾರಖಾನೆಗಳ ವೆಚ್ಚ ಮೊದಲಾದ್ದೆಲ್ಲ ತಾನಾಗಿಯೆ ಇಲ್ಲದಂತಾಗುವದು.

ನೂಲಲಿಕ್ಕೆ, ಹಂಜಿ ಹಾಕಲಿಕ್ಕೆ, ಹತ್ತಿ ಅರೆಯಲಿಕ್ಕೆ ಮೊದಲಾದ ಕೆಲಸಕ್ಕಾಗಿ ೪ ಕೋಟಿ ಜನ ಬೇಕಾಗುವರೆಂಬ ಪ್ರಶ್ನೆಯೊಂದುಳಿಯಿತು. ಇದಕ್ಕಾಗಿ ದಿನಾಲು ೮ ಗಂಟೆಗಳಂತೆ ಕೆಲಸ ಮಾಡುವ ಕೆಲಸಗಾರರನ್ನು ನೇಮಿಸಿಕೊಳ್ಳಬೇಕೆಂಬ ಪ್ರಶ್ನೆ ಖಾದಿ ಅರ್ಥಶಾಸ್ತ್ರದಲ್ಲಿ ಉದ್ಭವಿಸುವದಿಲ್ಲ. ಸ್ವಾವಲಂಬನ ಕ್ಷೇತ್ರದಲ್ಲಿಯ ಸಹಾಯದ ಧಂದೆಯೆಂದು ಇದರ ಸಮಾವೇಶವಾಗುವದು. ತನ್ನ ಬಿಡುವಿನ ವೇಳೆಯಲ್ಲಿ ಪ್ರತಿಯೊಬ್ಬ ಸ್ತ್ರೀ ಪುರುಷರು ಕನಿಷ್ಟ ಅರ್ಧಗಂಟೆಯ ವರೆಗಾದರೂ ನೂಲು ತೆಗೆಯಬೇಕೆಂದು ನಾವು ಹೇಳುತ್ತಿರುವದು. ೧೬ ಕೋಟಿ ಕೆಲಸಗಾರರಿರುವರೆಂದು ಲೆಕ್ಕ ಮಾಡಿದರೆ ಪ್ರತಿ ವರ್ಷ ಅವರಿಂದ ನಮಗೆ ೮೦೦ ಕೋಟಿ ಗಂಟೆ ಕೆಲಸ ಸಿಕ್ಕಂತಾಯಿತು. ಹೊರಗಿನ ಕೆಲಸ ಮಾಡದಿದ್ದವರ ಸಂಖ್ಯೆ ೨೪ ಕೋಟಿ ಇರುವದು. ಇದರಲ್ಲಿ ಚಿಕ್ಕ ಮಕ್ಕಳು, ವೃದ್ಧರು ಮತ್ತು ಹೆಣ್ಣುಮಕ್ಕಳು ಇರುವರು. ಇವರಲ್ಲಿ ತೀರ ವೃದ್ಧರಾದವರ, ಕಾಯಿಲೆ ಬಿದ್ದವರ ಸಂಖ್ಯೆಯನ್ನು ಮತ್ತು ೬ ವರ್ಷದೊಳಗಿನ ಮಕ್ಕಳ ಸಂಖ್ಯೆಯನ್ನು ಕಳೆದಿದ್ದಾದರೆ ಸುಮಾರು ೧೨ ಕೋಟಿ ಜನರು ಉಳಿಯುವರೆಂದು ಲೆಕ್ಕಹಿಡಿದರೂ ಇವರು ದಿನಾಲು ಒಂದು ಗಂಟೆ ನೂಲಲು ಹಂಜಿ ಹಿಂಜಲು ದೊರೆಯುವರು. ಅಲ್ಲದೆ ಆ ೧೬ ಕೋಟಿ ಜನರಲ್ಲಿ ೧೧ ಕೋಟಿ ಜನ ಒಕ್ಕಲಿಗರುವರು. ಇವರು ವರ್ಷದಲ್ಲಿ ಮೂರು ತಿಂಗಳು ನಿರುದ್ಯೋಗಿಗಳಾಗಿರುವರು. (ಇವರು ದಿನಾಲು ೨ ಗಂಟೆಗಳಂತೆ ಹೆಚ್ಚಿಗೆ ನಮಗೆ ಕೆಲಸ ಕೊಟ್ಟಂತಾಗುವದು) ಇವರೂ ನೂಲುವದರಲ್ಲಿ ಮತ್ತು ಹಂಜಿ ಹಾಕುವದರಲ್ಲಿ ಹೆಚ್ಚಿನ ಸಹಾಯಕರಾಗಬಲ್ಲರು.

ಈ ರೀತಿಯಾಗಿ ಇವರೆಲ್ಲರಿಂದ ನಾವು ೮೨ ಕೋಟಿ ಗಂಟೆ ಕೆಲಸ ಸಹಜವಾಗಿ ತೆಗೆದುಕೊಳ್ಳಬಲ್ಲೆವು. ಆದರೆ ನಮಗೆ ಬೇಕಾದುದು ಕೇವಲ ೩೨ ಕೋಟಿ ಗಂಟೆ ಮಾತ್ರ. ಮೇಲೆ ಉಲ್ಲೇಖಿಸಿದ ೧೨ ಕೋಟಿ ಜನ, ಅವಶ್ಯವೆನಿಸಿದರೆ, ತಮ್ಮ ಬಿಡುವಿನ ವೇಳೆಯಲ್ಲಿ ದಿನಾಲು ಒಂದು ಗಂಟೆಗಿಂತ ಹೆಚ್ಚು ವೇಳೆಯನ್ನು ನಮಗೆ ಕೊಡಬಲ್ಲರು. ಇದರಿಂದ ಹೆಚ್ಚಿನ ಜನರನ್ನು ಕೆಲಸಕ್ಕೆ ತೆಗೆದುಕೊಳ್ಳದೆ ಬೇಕಾದುದಕ್ಕಿಂ ಹೆಚ್ಚು ಖಾದಿಯನ್ನು ನಾವು ಉತ್ಪಾದಿಸಬಲ್ಲೆವು.

ಇದನ್ನೆಲ್ಲ ನೋಡಿದರೆ ಹತ್ತಿ ಬೆಳೆಯುವದರಿಂದ ಖಾದಿ ಉತ್ಪಾದನೆಯ ವರೆಗಿನ ಎಲ್ಲ ಕೆಲಸಗಳಿಗೆ ಈಗ ತೊಡಗಿದ ಜನಕ್ಕಿಂತ ಹೆಚ್ಚು ಜನ ಬೇಕಾಗುವದಿಲ್ಲೆಂಬುದು ಗೊತ್ತಾಗುವದು. ಏಕೆಂದರೆ ಜನಸಾಮಾನ್ಯರ ಬಿಡುವಿನ ವೇಳೆಯಲ್ಲಿ ನೂಲುವದು, ಹಂಜಿ ಹಿಂಜುವದು ಮತ್ತು ಹತ್ತಿ ಅರೆಯುವ ನಡೆದುಹೋಗುವದು. ಆದುದರಿಂದ ಬೇರೆ ಕೆಲಸಗಳಲ್ಲಿ ತೊಡಗಿದ ಜನರನ್ನು ಇದಕ್ಕಾಗಿ ಹಚ್ಚಬೇಕಿಲ್ಲ. ವಸ್ತುತಃ ಹತ್ತಿ ಅರೆಯುವ ಮತ್ತು ಗಂಟು ಕಟ್ಟುವ ಮತ್ತು ಜವಳಿ ಗಿರಣಿಗಳಲ್ಲಿ ತೊಡಗಿದ ಸುಮಾರು ೧೦ ಲಕ್ಷಜನ ಇದರಿಂದ ಬೇರೆ ಕೆಲಸಕ್ಕೆ ಸಿಕ್ಕಂತಾಗುವದು.

ಕೊನೆಯಲ್ಲಿ ಹೇಳುವದೆಂದರೆ ಹಿಂದುಸ್ಥಾನದ ಆರ್ಥಿಕ ರಚನೆಯು ಖಾದಿಯ ತಳಹದಿಯಲ್ಲಿಯೆ ಕಟ್ಟಲ್ಪಡಬಲ್ಲುದು, ಪಡತಕ್ಕದ್ದು. ಕೇಂದ್ರೀಕೃತ ದೊಡ್ಡ ಪ್ರಮಾಣದ ಉದ್ಯೋಗದ ಮೇಲೆ ಅದು ರಚಿಸಲ್ಪಟ್ಟದ್ದಾದರೆ ಹಿಂದುಸ್ಥಾನದ ಹಳ್ಳಿಗಳಲ್ಲಿ ಶಾಂತಿಯುಳಿಯಲಾರದು, ಅವುಗಳ ಕಲ್ಯಾಣವಾಗಲಾರದು. ಅವು ಸಮೃದ್ಧವಾಗಲಾರವು.

ಖಾದಿಯು ಗಿರಣಿಬಟ್ಟೆಯಷ್ಟು ಸುಂದರ ಇಲ್ಲವೆ ಬಾಳಿಕೆಯದಿರುವದಿಲ್ಲ. ಮತ್ತು ಅದು ಹೆಚ್ಚು ವೆಚ್ಚದ್ದಾಗುವದು ಎಂಬ ಮುಂತಾದ ವಿಧಾನಗಳಿಗೆ ಅನೇಕ ಸಂದರ್ಭಗಳಲ್ಲಿ ಈ ಮೊದಲ ಉತ್ತರ ಕೊಡಲಾಗಿದೆ. ಆದುದರಿಂದ ಈಗ ಮತ್ತೆ ಅವುಗಳಿಗೆ ಉತ್ತರ ಕೊಡಲಾಗುವದಿಲ್ಲ.

ಕೃಷ್ಣದಾಸ ಗಾಂಧಿ
(ಹರಿಜನ ಸೇವಕದಿಂದ)

ವಿನಮ್ರಗೋ

(೮ನೇ ಪುಟದಿಂದ ಬಂದುದು)

ಉತ್ತರ– ೧) ೧೯೧೫ ನೇ ಇಸ್ವಿಯಷ್ಟು ಹಿಂದೆಯೆ ನನಗೆ ಈ ಮೊದಲಿನ ಪ್ರಶ್ನೆಯನ್ನು ಕೇಳಲಾಗಿತ್ತು. ಭೂಮಿಯನ್ನು ಊಳುವುದಕ್ಕಾಗಿ ಮೇಲೆ ಉಲ್ಲೇಖಿಸಿದಂಥ ದನಗಳನ್ನು ಉಪಯೋಗಿಸಿದರೆ ಅದರಿಂದ ಅವುಗಳಿಗೇನೂ ಹಾನಿಯಾಗುವುದಿಲ್ಲೆಂದು ಆಗ ನಾನು ಭಾವಿಸಿದ್ದೆ. ಈಗಲೂ ಹಾಗೆಯೆ ಅಭಿಪ್ರಾಯಪಡುತ್ತಿರುವೆ. ತದ್ವಿರುದ್ಧವಾಗಿ ಅವು ಹೆಚ್ಚು ಬಲಿಷ್ಠವಾಗುವವು, ಮತ್ತು ಹೆಚ್ಚು ಹಾಲೂ ಕರೆಯುವವು ಅವುಗಳು ಮಿತ್ರ ಎಂದು ಭಾವಿಸಿ ನಡೆಸಿಕೊಂಡಿದ್ದಾದರೆ ಮಾತ್ರ ಈ ಬಗೆಯ ಲಾಭ ದೊರೆಯುವುದು ನಮ್ಮ ದೇಶದಲ್ಲಿ ಅನೇಕ ಸಲ ದನಗಳನ್ನು ನಡೆಸಿಕೊಳ್ಳುತ್ತಿರುವ ನಿರ್ಘೃಣ ರೀತಿಯಲ್ಲಿ ಅವುಗಳನ್ನು ನಡೆಸಿಕೊಂಡದ್ದಾದರೆ ಆ ಲಾಭ ದೊರೆಯದು. ಯಾವ ಪ್ರಾಣಿಗಳಿಂದ ನಾವು ಸೇವೆ ಸ್ವೀಕರಿಸುವೆವೊ ಅವುಗಳನ್ನೆಲ್ಲ ಯೋಗ್ಯ ರೀತಿಯಿಂದ ಮಿತ್ರರಂತೆ ನಡಿಸಿಕೊಳ್ಳಲಿಕ್ಕೆ ಬೇಕೆಂದು ನಾವು ಒತ್ತಾಯಪಡಿಸಲಿಕ್ಕೆ ಬೇಕು. ಪ್ರತಿಯೊಂದು ಜೀವಂತ ಪ್ರಾಣಿ ತನ್ನ ಶಕ್ತಿಗನುಸಾರವಾಗಿ ಆ ಮರ್ಯಾದೆಯಲ್ಲಿಯೆ ಕೆಲಸ ಮಾಡಬಲ್ಲುದು. ಇಂಥ ಕಾರ್ಯದಿಂದ ಮನುಷ್ಯನ ಇಲ್ಲವೆ ಪಶುವಿನ ಉದ್ಧಾರವೆ ಆಗುವದಲ್ಲದೆ ಅವನತಿಯಾಗಲಾರದು.

ಉತ್ತರ ೨– ಎರಡನೇ ಪ್ರಶ್ನೆಗೂ ನಾನು ಬಹಳ ಹಿಂದೆಯೇ ಉತ್ತರ ಕೊಟ್ಟಿರುವೆನು. ಗೋವಧೆಯನ್ನು ಕಾಯಿದೆಯಿಂದ ಎಂದಿಗೂ ನಿಲ್ಲಿಸಲಾರೆವು. ತಿಳುವಳಿಕೆ, ಶಿಕ್ಷಣ ಮತ್ತು ದಯಾಭಾವನೆಗಳಿಂದ ಇದನ್ನು ನಿಲ್ಲಿಸಬಲ್ಲುದು. ಭೂಮಿಗೆ ಭಾರವಾದ ಪ್ರಾಣಿಗಳನ್ನುಳಿಸುವದು ಶಕ್ಯವಾಗದು. ಕದಾಚಿತ್ ಭೂಭಾರವಾದ ಮಾನವನನ್ನೂ ಉಳಿಸುವದು ಶಕ್ಯವಾಗದು.

ಹೊಸದಿಲ್ಲಿ ಮೋ. ಕ. ಗಾಂಧಿ
೪-೯-೪೬

ಒಂದು ಶುಭ್ರಕಿರಣ

ಅಶುಭ ಗಾಳಿ ಬೀಸಿತೆಂದರೆ ಯಾರಿಗೂ ಅದರಿಂದ ಲಾಭವಾಗುವದಿಲ್ಲ. ಕಲಕತ್ತೆಯಲ್ಲಿ ನೆತ್ತರು ಹೊರೆಯವರು ಪಾಶವಿಕ ನಿರ್ದಯೆಯ ಕೃತಿಗಳಿಂದ ಮತ್ತು ಕೆಲ ಸಮಯದ ವರೆಗೆ ಪಶುವೃತ್ತಿಯನ್ನು ತಾಳಿ ಅಲ್ಲಿನ ಜನರು ನಡೆಸಿದ ಹತ್ಯಾಕಾಂಡವು ತುಂಬಿ ಬರಬಹುದು. ಮಾನವನಲ್ಲಿ ದೇವಾಂಶವಿದ್ದರೆ ಅವನು ಸ್ವಾಭಾವಿಕವಾಗಿ ಸಜ್ಜನನಿ ಆಗುವನು. ಮುಸಲ್ಮಾನನೊಬ್ಬನು ಬರೆದ ಕೆಳಗಿನ ಪತ್ರ ಸತ್ಯವನ್ನು ಹೊರಪಡಿಸುತ್ತದೆ.

"ಬಾಲಿಯಾಗಂಜದ ಒಂದು ಮನೆಯಲ್ಲಿ ನಾನಿರುತ್ತೇನೆ. ಅಗಸ್ಟ ೧೬ನೇ ತಾರೀಖಿನ ದಿನ ನನ್ನ ಮನೆಗೆ ಗಂಡಾಂತರದ ಭೀತಿಯುಂಟಾಗಿತ್ತು. ಆದರೆ ನನ್ನ ಹಿಂದೂ ಬಾಂಧವರು ಪುಂಡರನ್ನು ತಡೆದರು. ಆದರೆ ಸಾಯಂಕಾಲದಷ್ಟೊತ್ತಿಗೆ ಪರಿಸ್ಥಿತಿ ಸ್ಥಳೀಕ ಸುಶಿಕ್ಷಿತ ಹಿಂದುಗಳ ಕೈ ಬಿಡಹತ್ತಿತು. ನನ್ನ ಕುಟುಂಬದಲ್ಲಿ ೩೫ ಜನರಿದ್ದು ಹೆಚ್ಚಾಗಿ ಹೆಣ್ಣುಮಕ್ಕಳು, ಮಕ್ಕಳೇ ಇರುವರು. ಉನ್ಮತ್ತ ಪುಂಡರು ಅತ್ತಿತ್ತ ಓಡಾಡುತ್ತಿರುವಾಗ ಅವರನ್ನು ಬೇರೆ ಕಡೆಗೆ ಸಾಗಿಸುವದು ಅಶಕ್ಯವಾಗಿತ್ತು. ಆದುದರಿಂದ ನನ್ನ ಕುಟುಂಬದ ಜನರು ಮತ್ತು ನಾನು ನೆರೆಯ ಹಿಂದೂ ಬಾಂಧವರ ಮನೆಯಲ್ಲಿ ಆಶ್ರಯ ಪಡೆದೆವು. ಇನ್ನೊಬ್ಬ ಹಿಂದೂ ಬಾಂಧವನು ನನ್ನ ಸಾಮಾನುಗಳನ್ನು ವಶದಲ್ಲಿ ತೆಗೆದುಕೊಂಡನು.

"ಪುಂಡರಲ್ಲಿಯ ಕಿಡಿಗೇಡಿಗಳಿಗೆ ಇದರ ಸುಳಿವು ಹತ್ತಿತು. ಅವರು ನನ್ನ ಗೆಳೆಯನಿಗೆ ಅಂಜಿಕೆ ಹಾಕಿದರು. 'ಅವರನ್ನು ಹೊರಗೆ ದೂಡಿರಿ, ಅವರನ್ನು ನೀವು ರಕ್ಷಿಸಲಾರಿರಿ' ಎಂದು ಅವರು ಹೇಳಹತ್ತಿದರು. 'ಅವರನ್ನು ನಾನು ರಕ್ಷಿಸಲಾರೆನೆಂಬುದು ನನಗೆ ಗೊತ್ತಿದೆ. ಆದರೆ ಅವರ ಕೂದಲೆಳೆಗೆ ಧಕ್ಕೆ ಹತ್ತುವ ಮೊದಲು ನಾನು ಪ್ರಾಣವನ್ನು ಸಮರ್ಪಿಸುವೆ' ಎಂದು ನನ್ನ ಗೆಳೆಯ ದೃಢವಾದ ಉತ್ತರಕೊಟ್ಟ. ನನ್ನ ಲೀಗ ಬಾಂಧವರಲ್ಲಿ ಹಲವರು ಈ ಸ್ಥಳದಿಂದ ನನ್ನನ್ನ ಮತ್ತು ನನ್ನ ಮನೆಯವರನ್ನು ಬೇರೆ ಕಡೆಗೆ ಒಯ್ಯಲು ಪ್ರಯತ್ನಿಸಿದರು. ಆದರೆ ಬಾಲಿಯಾಗಂಜದಲ್ಲಿಯ ಸುಸಂಸ್ಕೃತ ಹಿಂದುಗಳು ರಕ್ಷಿಸುತ್ತಿರುವ ಆಶ್ರಯಸ್ಥಾನವನ್ನು ಬಿಟ್ಟು ಹೋಗಲು ನಾನು ಒಪ್ಪಲಿಲ್ಲ.

ಈ ಭಾಗದಲ್ಲಿ ನನ್ನ ಬಂಧುವಿನ ಎರಡು ಅಂಗಡಿಗಳಿವೆ. ಹಿಂದುಗಳು ಈ ಅಂಗಡಿಗಳನ್ನುಳಿಸಿದರು. ನನ್ನ ಬಂಧು ಮತ್ತು ಅವನ ಮಕ್ಕಳು ಸ್ಥಳೀಕ ಸ್ವಯಂಸೇವಕ ದಳದಲ್ಲಿ ಸೇರಿ ಪುಂಡರನ್ನು ಹತ್ತಿಕ್ಕುವ ಕಾರ್ಯದಲ್ಲಿ ತೊಡಗಿದ್ದರು.

"ಬೇಕೆಂತಲೆ ಜಗಳವನ್ನು ಹುಟ್ಟಿಸದಿದ್ದರೆ ಹಿಂದೂ ಮುಸಲ್ಮಾನರು ಶಾಂತರೀತಿಯಿಂದ ಇರಬಲ್ಲರೆಂಬ ಬಗ್ಗೆ ನನಗೆ ಮನವರಿಕೆಯಾಗಿದೆ"

ಮುಸಲ್ಮಾನರು ಹಿಂದು ಬಾಂಧವರನ್ನು ರಕ್ಷಿಸಿದ ಉದಾಹರಣೆಗಳೂ ಹಲವು ಇರುವವು. ಮಾನವೀ ಬಂಧನವು ಜಾತಿ ಧರ್ಮ ಮತ್ತು ಜನಾಂಗ ಮೊದಲಾದ ಬಂಧನಗಳಿಗಿಂತ ಶ್ರೇಷ್ಠವಾದುದೆಂಬುದನ್ನು ಎಲ್ಲರೂ ತಿಳಿದುಕೊಂಡರೆ ಜೀವನವು ಸುಖಮಯವಾಗುವದು; ಅಲ್ಲದೆ ಇಂದು ವ್ಯಕ್ತಿಗಳಲ್ಲಿ, ಜಾತಿಗಳಲ್ಲಿ ಇಷ್ಟೇ ಅಲ್ಲ ರಾಷ್ಟ್ರಗಳಲ್ಲಿ ಕೂಡ ತಲೆಯೆತ್ತಿದ ಮತ್ತು ದ್ವೇಷದ ಮೂಲವಾದ ಭೀತಿಯ ಭೂತವು ಮಾಯವಾಗುವದು.

ಹೊಸದಿಲ್ಲಿ ಅಮೃತ ಕೌರ
೩೦-೮-೪೬

ಕರ್ನಾಟಕ

ಧಾರವಾಡ

ಬರುವ ದೀಪಾವಳಿಯ ಕಾಲಕ್ಕೆ ಧಾರವಾಡ ಜಿಲ್ಲಾ ಲೋಕಲ್‌ಬೋರ್ಡಿನವರು ಹುಬ್ಬಳ್ಳಿಯಲ್ಲಿ ಕರ್ನಾಟಕದ ೨ ನೇ ಗ್ರಾಮೋದ್ಯೋಗ ಪ್ರದರ್ಶನ ಜರುಗಿಸಲು ನಿರ್ಧರಿಸಿ ಇದರ ವ್ಯವಸ್ಥೆಯನ್ನೆಲ್ಲ ಮಾಡಬೇಕೆಂದು ಶ್ರೀ ಭಾಸ್ಕರ ಸದಾಶಿವ ಗೋರೆ ಶಿವನಿಕೇತನ ಹುಬ್ಬಳ್ಳಿ ಇವರನ್ನು ನೇಮಿಸಿದ್ದಾರೆ.

ಹುಬ್ಬಳ್ಳಿ ಸ್ಟೇಶನದಲ್ಲಿ ಅಬಕಾರಿ ಅಧಿಕಾರಿಗಳು ೯ ನೇ ತಾರೀಕು ೩೫೩॥ ತೊಲಿ ಅಫು ಪತ್ತೆಹಚ್ಚಿ ಜಪ್ತಮಾಡಿ ಮೂವರು ಸ್ತ್ರೀಯರನ್ನೊಳಗೊಂಡು ನಾಲ್ವರನ್ನು ಬಂಧಿಸಿದ್ದಾರೆ. ಈ ಅಫುವನ್ನು ಸ್ತ್ರೀಯರು ತಮ್ಮ ಸೀರೆಯಲ್ಲಿ ಹೊಟ್ಟೆಯ ಕೆಳಗೆ ಕಟ್ಟಿಕೊಂಡಿದ್ದರು. ಇದರ ಬೆಲೆ ಸುಮಾರು ೧೧೦೦ ರೂ. ಆಗುವದು.

ನವಲಗುಂದದಲ್ಲಿ ಕೀರ್ತಿಶೇಷ ಲಿಂಗೈಕ್ಯ ಲಿಂಗರಾಜರ ಮೂರನೆಯ ಸ್ಮಾರಕೋತ್ಸವ ಒಳ್ಳೇ ವಿಜೃಂಭಣೆಯಿಂದ ಜರುಗಿತು. ಗದೀಮಠದ ಶ್ರೀಗಳವರು ಲಿಂಗರಾಜರ ತ್ಯಾಗದ ಮಹಿಮೆಯನ್ನು ಉದಾಹರಣೆಗಳಿಂದ ಮಾರ್ಮಿಕವಾಗಿ ತಿಳಿಸಿ ಹೇಳಿದರು.

ರೋಣದಲ್ಲಿ ಶ್ರೀ ನಿಂಗಪ್ಪನವರು ನವಲಗುಂದ ಇವರ ಅಧ್ಯಕ್ಷತೆಯಲ್ಲಿ ರೈತ ಕೂಲಿಕಾರರ ಸಭೆ ೮ ನೇ ತಾರೀಕು ಕೂಡಿ ಕೂಲಿಕಾರರಿಗೆ ಒಡ್ಡಿನ ಕೆಲಸವೀಗ ಇಲ್ಲದಂತಾದ್ದರಿಂದ ಬಹಳ ತೊಂದರೆಯಾಗಿದೆ. ಆದುದರಿಂದ ಸರಕಾರದವರು ಬೇಗನೆ ಅವರಿಗೆ ಬೇರೆ ಕೆಲಸದ ಯೋಜನೆ ಮಾಡಬೇಕೆಂದು ಮುಂತಾದ ಗೊತ್ತುವಳಿಗಳು ಸ್ವೀಕೃತವಾದವು.

ಗಜೇಂದ್ರಗಡದಲ್ಲಿ ನಾಡಹಬ್ಬ ಮಾಡುವದನ್ನು ಗೊತ್ತುಪಡಿಸಿ ಉತ್ಸವ ಸಮಿತಿ ಶ್ರೀ ಭೂಮರಡ್ಡಿಯವರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಗಿದೆ.

ನವಲಗುಂದ ಭಾಗದಲ್ಲಿ ದೊಡ್ಡ ನೀರ್ಮಳೆಯಾಗಿ ಮೊರಬ ಹಾಗು ಯಮನೂರು ಗ್ರಾಮಗಳ ದೊಡ್ಡ ಕೆರೆಗಳು ತುಂಬಿ ಒಡೆದಿವೆ. ಇದರಿಂದ ಬಹಳ ಹಾನಿಯಾಗಿದೆ. ಈ ಹಾನಿಯನ್ನು ತುಂಬಿಕೊಡುವದಕ್ಕಾಗಿ ಜಿಲ್ಲಾಧಿಕಾರಿಗಳು ಗಮನಿಸುವದವಶ್ಯವಾಗಿದೆ. ಮಳೆಯಾದ್ದರಿಂದ ಗೋದಿ ಬೀಜಗಳನ್ನು ಕೂಡಲೆ ಪೂರಯಿಸುವದು ಅವಶ್ಯವಾಗಿದೆ.

ಧಾರವಾಡ ಬಾಸೆಲ್ ಮಿಶನ್ ಹಾಯಸ್ಕೂಲಿನಲ್ಲಿ ಶ್ರೀ ಮುದವೀಡು ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಡಾ. ನಾ. ಸು. ಹರ್ಡೀಕರರು ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ ಜರುಗಿಸಿದರು. ಆಗ ಡಾಕ್ಟರರು ವಿದ್ಯಾರ್ಥಿಗಳು ಮಹಾತ್ಮರಂಥ ಮಾರ್ಗದರ್ಶಿಗಳನ್ನನುಸರಿಸಿ ದೇಶಸೇವೆ ಮಾಡಬೇಕೆಂದೂ ಸಂಘಟಿತರಾಗಬೇಕೆಂದೂ ಮುಂತಾಗಿ ಒಳ್ಳೆ ಮಾರ್ಮಿಕ ರೀತಿಯಿಂದ ಹೇಳಿದರು.

ಅಖಿಲ ಕರ್ನಾಟಕ ಆಯುರ್ವೇದ ಮಹಾಮಂಡಲದ ವಾರ್ಷಿಕ ಸಮ್ಮೇಲನ ಬರುವ ಡಿಸೆಂಬರ ತಿಂಗಳಲ್ಲಿ ಗದುಗಿನಲ್ಲಿ ಜರುಗಿಸಬೇಕೆಂದು ಗೊತ್ತಾಗಿದ್ದು ನವಂಬರ ಮೊದಲನೇ ವಾರ ಅಧ್ಯಕ್ಷರ ಚುನಾವಣೆ ನಡೆಯುವದು.

ಧಾರವಾಡ ಜಿಲ್ಲಾ ೬ ನೆಯ ಸಾಹಿತ್ಯ ಸಮ್ಮೇಲನ ಬರುವ ದೀಪಾವಳಿ ಕಾಲದಲ್ಲಿ ಹುಬ್ಬಳ್ಳಿಯಲ್ಲಿ ಜರಗಿಸುವದನ್ನು ಗೊತ್ತುಪಡಿಸಿದ್ದು ಶ್ರೀ ಫಕೀರಪ್ಪ ಫೌಜದಾರ ಎಂ ಎಲ್ ಸಿಯವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿ ಸ್ಥಾಪಿತವಾಗಿದೆ. ಸಾಹಿತ್ಯ ಸಮ್ಮೇಲನದ ಕಾಲಕ್ಕೆ ಗದ್ಯಗೋಷ್ಠಿ, ಪದ್ಯಗೋಷ್ಠಿ, ನಾಟಕ ಗೋಷ್ಠಿ ಮಕ್ಕಳ ಸಾಹಿತ್ಯ ಸಭೆಯನ್ನು ಜರುಗಿಸಬೇಕೆಂಬ ವಿಚಾರ ನಡೆದಿದೆ ಅಧ್ಯಕ್ಷರನ್ನೂ ಉದ್ಘಾಟಕರನ್ನೂ ಆಮಂತ್ರಿಸಲಾಗಿದೆ.

ವಿಜಾಪುರ

ಕೆರೂರ ಭಾಗದಲ್ಲಿ ಈ ಸಲ ಸಾಕಷ್ಟು ಮಳೆಯಾಗಿದ್ದು ನೀರಿನ ಕೊರತೆ ದೂರಾದಂತಾಗಿದೆ. ಇತ್ತೀಚಿಗೆ ಊರಲ್ಲಿ ಕಳವುಗಳು ಹೆಚ್ಚುತ್ತಿರುವವು. ಪೋಲೀಸರು ಊರವರು ಕೂಡಿಯೇ ಕಳ್ಳರನ್ನು ಪತ್ತೆಹಚ್ಚಲು ಪ್ರಯತ್ನಿಸುತ್ತಿರುವರು.

ಇಲಕಲ್ ಮುನಿಸಿಪಾಲಿಟಿಯವರು ತಮ್ಮ ನವಕರರಿಗೆ ತುಟ್ಟಿಭತ್ತೆ ಕೊಡಬೇಕೆಂದು ಗೊತ್ತುವಳಿ ಮಾಡಿ ೩-೪ ತಿಂಗಳುಗಳಾಗಿದ್ದರೂ ಈ ವರೆಗೆ ಅದನ್ನು ಜಾರಿಯಲ್ಲಿ ತಂದಿಲ್ಲ. ಇದರಿಂದ ನವಕರರಿಗೆ ಬಹಳ ಕಷ್ಟವಾಗಿದೆ. ಇನ್ನಾದರು ಕೂಡಲೆ ಆ ಹಣವನ್ನು ಕೊಡಬೇಕೆಂದು ಓರ್ವ ನವಕರರು ಬಿನ್ನವಿಸುತ್ತಾರೆ.

ಬಬಲೇಶ್ವರದಲ್ಲಿಯ ಸುಭಾಸ ಸೇವಾದಲ ಶಾಖೆಯ ಕೆಲಸ ಅಚ್ಚುಕಟ್ಟಾಗಿ ಸಾಗಿದೆ. ಹೆಣ್ಣುಮಕ್ಕಳ ಸೇವಾದಲ ಶಾಖೆ ಸ್ಥಾಪಿತವಾಗಿದ್ದು, ಸ್ತ್ರೀ ಶಿಕ್ಷಣ ಕಾರ್ಯ ನಡೆದಿದೆ.

ಶ್ರೀ ಬಂಥನಾಳ ಶಿವಯೋಗಿಗಳು ವಿಜಾಪುರದಲ್ಲಿ ಶ್ರೀ ಸಿದ್ಧರಾಮೇಶ್ವರ ಪುರಾಣ ಪ್ರವಚನ ಮಾಡಿದರು. ಜನರು ವಿಜಾಪುರದ ವಿಜಯ ಕಾಲೇಜಿನ ಸಹಾಯಕ್ಕಾಗಿ ೩೧ ಸಾವಿರ ರೂಪಾಯಿಗಳನ್ನು ಶ್ರೀಗಳವರಿಗೆ ಸಮರ್ಪಿಸಿದರು.

ಬೆಳಗಾವಿ

ಯಮಕನಮರಡಿಯಲ್ಲಿಯ ಮುಸಲ್ಮಾನ ಸಮಾಜ ಸ್ಥಳವನ್ನು ಯಾರೋ ಕೆಡಿಸಿರುವರೆಂದು ಸುದ್ದಿ ಬಂದದ್ದರಿಂದ ಪೋಲೀಸ ಇನಸ್ಪೆಕ್ಟರರು ೨೫ ನೇ ತಾರೀಕು ಕೆಲ ಪೋಲೀಸರೊಂದಿಗೆ ಅಲ್ಲಿಗೆ ಹೋಗಿದ್ದರು. ೩-೪ ವಾರಗಳ ಹಿಂದೆ ಬಸವೇಶ್ವರ ಮೂರ್ತಿಯನ್ನು ಯಾರೋ ಭಂಗ ಮಾಡಿದ್ದಕ್ಕೆ ಇದು ಮುಯ್ಯಿಯೆಂದು ತಿಳಿಯುತ್ತದೆ. ಆದರೆ ಯಾವದೇ ಬಗೆಯ ದುರ್ಘಟನೆಯಾಗಿಲ್ಲ.

ಬೆಳಗಾವ ಜಿಲ್ಲಾ ಕಾಂಗ್ರೆಸ ಕಮೀಟಿಯ ಸಭೆ ಸೇರಿ ಶ್ರೀ ಜಮೀರಸಾಹೇಬ ಶೇಖರು ಬಹುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಇವರ ವಿರುದ್ಧ ಶ್ರೀ ಚನ್ನಪ್ಪಾ ವಾಲಿಯವರು ಹುರಿಯಾಳಾಗಿದ್ದರು.

ಬೆಳಗಾವಿ ಜಿಲ್ಲಾ ಕಲೆಕ್ಟರರು ಪತ್ರಿಕಾ ಪ್ರತಿನಿಧಿ ಸಭೆಯಲ್ಲಿ ಮಾತಾಡುತ್ತ ಜಿಲ್ಹೆಯಲ್ಲಿ ಆಹಾರ ಪರಿಸ್ಥಿತಿ ನಿಜವಾಗಿ ಬಿಕ್ಕಟ್ಟಿನದಿದೆ. ಆದುದರಿಂದ ಧಾನ್ಯವಿದ್ದವರು ಮುಂದೆ ಬಂದು ಸರಕಾರಕ್ಕೆ ಧಾನ್ಯ ಕೊಡಬೇಕೆಂದು ಹೇಳಿದರು.

ಎಂ. ಎಸ್. ಎಂ. ರೇಲ್ವೆ ಸಲಹೆ ಸಮಿತಿಗೆ ಮುಂಬಯಿ ಶಾಸನ ಸಭೆಯಿಂದ ನಡೆದ ಚುನಾವಣೆಯಲ್ಲಿ ಶ್ರೀ ಎನ್. ಬಿ. ದಳವಾಯಿಯವರು ಕಾರವಾರದ ಶ್ರೀ ಶಮಸುದ್ದೀನ ಇವರನ್ನು ಪ್ರಚಂಡ ಬಹುಮತದಿಂದ ಸೋಲಿಸಿ ಆರಿಸಿಬಂದರು.

ಶೌಜಲಗಿಯಲ್ಲಿ ಶ್ರೀ ಮುತಾಲಿಕ ದೇಸಾಯರ ಅಧ್ಯಕ್ಷತೆಯಲ್ಲಿ ಶ್ರೀ ಅಣ್ಣಾ ಗುರುಜೀಯವರು ಉದ್ಬೋಧಕ ಭಾಷಣ ಮಾಡಿ ಸಧ್ಯದ ಪರಿಸ್ಥಿತಿಯನ್ನು ವಿವರಿಸಿದರು. ಮರುದಿನ ೦ ಪ್ರಮುಖರ ಭಾವಚಿತ್ರದ ಪ್ರಚಂಡ ಮೆರವಣಿಗೆಯಾಯಿತು.

ಗೋಕಾಕ ತಾಲೂಕ ದೇವಲಪಮೆಂಟಿನಲ್ಲಿ ರಾ. ಸಾ. ದೇಶಪಾಂಡೆ ಅವರ ಹಿರಿತನದಲ್ಲಿ ಪ್ರಮುಖರ ಸಭೆ ಸೇರಿತ್ತು. ಲೋಕಾಪೂರ, ಅಡಬಟ್ಟಿ, ಘುಲಗಟ್ಟಿ ಮೊದಲಾದ ಗ್ರಾಮಗಳಲ್ಲಿ ಹಣ ಕೂಡಿಸಿ ಕಂಪನಿಗಳಿಂದ ಹೊಲಗಳಿಗೆ ನೀರು ಪೂರಯಿಸುವ ಗೋಕಾಕ ಬಣ್ಣದ ಸಾಮಾನಗಳ ಕೈಗಾರಿಕೆಗಾಗಿ ಉತ್ತೇಜನ ಕೊಡಲು ಒಂದು ಶಿಕ್ಷಣ ವರ್ಗ ತೆರೆಯುವ ಮತ್ತು ಸರಕಾರದಿಂದ ಅದಕ್ಕೆ ಸಹಾಯ ಒದಗಿಸುವ ಬಿದಿರು ಮತ್ತು ಬೆತ್ತದ ಕೈಗಾರಿಕೆಗಳಿಗೆ ಸಹಾಯ ಮಾಡುವ ಮೊದಲಾದ ಗೊತ್ತುವಳಿಗಳು ಸ್ವೀಕೃತವಾದುವು.

ಬೆಳಗಾವಿಯ ಹಿಂದೂ ಮುಸಲ್ಮಾನ ಪ್ರಮುಖರು ಪ್ರಕಟನೆಯೊಂದನ್ನು ಹೊರಡಿಸಿ ಅಲ್ಲಲ್ಲಿ ಎದ್ದ ಜಾತೀಯ ಗಲಭೆಗಳನ್ನು ನಿಷೇಧಿಸಿ ಬೆಳಗಾವಿ ಜಿಲ್ಹೆಯಲ್ಲಿ ಹಿಂದೂ ಮುಸಲ್ಮಾನರು ಅನೇಕ ವರ್ಷಗಳಿಂದ ಸೌಹಾರ್ದದಿಂದಿದ್ದುದನ್ನು ವಿವರಿಸಿದ್ದಾರೆ ಸುಳ್ಳು ಸುದ್ದಿ ನಂಬಬಾರದು ಎಂದಿನಂತೆ ಸೌಹಾರ್ದ ಭಾವನೆ ಬೆಳೆಸಿಕೊಂಡು ಬರಬೇಕೆಂದು ಮುಂತಾಗಿ ಈ ಪ್ರಕಟನೆಯಲ್ಲಿ ಹೇಳಲಾಗಿದೆ.

ಬಳ್ಳಾರಿ

ಆಜದ ಹಿಂದ ಸೈನಿಕರಲ್ಲಿ ೧೧೮ ಜನರಿಗೆ ತುಂಗಭದ್ರಾ ಅಣೆಕಟ್ಟಿನಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವ ಏರ್ಪಾಡಾಗಿದೆ. ಮೇಜರ ಜನರಲ್ ಅಲಗಪ್ಪನವರ ಪ್ರಯತ್ನದ ಫಲವಿದು. ಈ ೧೧೮ ಜನ ಸೈನಿಕರು ಮೊನ್ನೆ ದಿನ ಹೊಸಪೇಟೆಗೆ ಬಂದು ಕಾಂಗ್ರೆಸ ಕಮೀಟಿಯ ಆತಿಥ್ಯ ಸ್ವೀಕರಿಸಿ ಮ್ಯಾಳಾಪುರ ಒಡ್ಡಿನ ಸ್ಥಳಕ್ಕೆ ಹೋದರು.

ಹೊಸಪೇಟೆ ಸುತ್ತುಮುತ್ತಲಿನ ಕಬ್ಬು ಬೆಳೆಯುವವರ ವರ್ತಕರ ಮತ್ತು ಸಕ್ಕರೆ ಗಿರಣಿಯವರ ಸಭೆ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಕಳೆದ ಗುರುವಾರ ಸೇರಿತ್ತು. ಕಬ್ಬನ್ನು ವಶಪಡಿಸಿಕೊಳ್ಳುವ ಧೋರಣ ಬಿಟ್ಟುಕೊಡಬೇಕೆಂದು ಕಲೆಕ್ಟರರನ್ನು ಬಿನ್ನವಿಸಲಾಯಿತು. ಸಕ್ಕರೆ ಆಹಾರ ಪದಾರ್ಥಗಳಲ್ಲಿ ಮುಖ್ಯವಾದ್ದರಿಂದ ಹಾಗೆ ಮಾಡುವದು ಶಕ್ಯವಿಲ್ಲೆಂದು ಕಲೆಕ್ಟರರು ತಿಳಿಸಿ ಕಬ್ಬಿನ ಕನಿಷ್ಠ ಬೆಲೆ ಗೊತ್ತುಪಡಿಸುವಾಗ ಕಬ್ಬಿನ ಸಾಗುವಳಿ ವೆಚ್ಚ ಸಕ್ಕರೆ ಗಿರಣಿಯವರು ಸಕ್ಕರೆ ತಯಾರಿಸುವ ವೆಚ್ಚ ಮೊದಲಾದ್ದನ್ನು ಲಕ್ಷದಲ್ಲಿ ತೆಗೆದುಕೊಳ್ಳಬೇಕೆಂದು ಗೊತ್ತಾಯಿತು.

ಉತ್ತರ ಕನ್ನಡ

ಹನೇಹಳ್ಳಿ, ಬಂಕಿಕೊಡ್ಲ, ಭಾವಿಕೊಡ್ಲ, ಗಾಡುಮಾಸ್ಕೇರಿ, ಹಾರುಮಾಸ್ಕೇರಿ ಹೊಸಕಂಬಿ ಮೊದಲಾದ ಹಳ್ಳಿಗಳ ರೈತರು ಸಭೆ ಸೇರಿ ಹನೇಹಳ್ಳಿ ರೈತ ಸಂಘವೆಂಬ ಸಂಸ್ಥೆಯನ್ನು ಸ್ಥಾಪಿಸಿಕೊಂಡು ರೈತರ ಹಿತದ ಬಗ್ಗೆ ಹೋಲ ಸಾಗುವಳಿ ಮಸೂದೆಗೆ ಬೆಂಬಲಕೊಟ್ಟರು. ಲಕ್ಷ್ಮಣ ದೊಡ್ಡಪ್ಪ ನಾಯಕರು ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಉತ್ತರ ಕನ್ನಡ ಜಿಲ್ಹೆ ಎಲ್ಲ ದೃಷ್ಟಿಯಿಂದ ಹಿಂದುಳಿದದ್ದಿರುವದರಿಂದ ಸರಕಾರದವರು [illegible] ಮುಖಂಡರು ಆ ಜಿಲ್ಹೆಯ ಅಭಿವೃದ್ಧಿಗಾಗಿ ಹೆಚ್ಚು ಲಕ್ಷ್ಯ ಪೂರೈಸಬೇಕು. ವಿಶೇಷತಃ ರಾಷ್ಟ್ರೀಯ ಸರಕಾರ ಸ್ಥಾಪಿತವಾದ ಸಧ್ಯದ ಪ್ರಸಂಗದಲ್ಲಿ ರಾಷ್ಟ್ರಸೇವೆಯಲ್ಲಿ ಅಪರಿಮಿತ ತ್ಯಾಗಮಾಡಿದ ಉತ್ತರಕನ್ನಡ ಜಿಲ್ಹೆಯನ್ನು ಮರೆಯಬಾರದು. ಅಲ್ಲಿ ಒಕ್ಕಲತನ ಮೊದಲಾದ ಕಾಲೇಜುಗಳನ್ನು ಸ್ಥಾಪಿಸಬೇಕು. ಜಿಲ್ಹೆಯ ಸರ್ವಾಂಗೀಕ ಉನ್ನತಿಗೆ ಸಹಾಯ ಮಾಡಬೇಕೆಂದು ಮುಂತಾಗಿ ಶ್ರೀ ಎಂ. ಎಚ್ ನಾಯ್ಕ ಕಾರ್ಯದರ್ಶಿ ಕರ್ನಾಟಕ ಸಂಘ ಕಾರವಾರ ಇವರು ಬರೆಯುತ್ತಾರೆ.

ಕಳೆದವಾರ ಕಾಂಗ್ರೆಸ ರೈತ ಸಂಘದ ಗ್ರಾಂ ಪರಿಷತ್ತು ಶ್ರೀ ಮಾವಿನಕುರ್ವೆಯವರ ಅಧ್ಯಕ್ಷತೆಯಲ್ಲಿ ಅಂಕೋಲೆಯಲ್ಲಿ ಸೇರಿತ್ತು. ೨-೩ ಸಾವಿರ ರೈತರು ನೆರೆದಿದ್ದರು. ಶ್ರೀ ಟಿ ಎಸ್ ನಾಯಕ, ಹರಿ ಪೈ ಮೊದಲಾದವರ ಭಾಷಣಗಳಾದವು. ಪಡ ಭೂಮಿ ಸಾಗುವಳಿಯನ್ನು ವ್ಯಕ್ತಿಗಳಿಗೆ ಕೊಡದೆ ಸಹಕಾರಿ ಸಂಘಗಳ ಮೂಲಕ ಮಧ್ಯಮ ವರ್ಗದ ಬಡ ರೈತರಿಗೆ ಕೊಡಬೇಕು. ಯುದ್ಧೋತ್ತರ ಯೋಜನೆಯಲ್ಲಿ ಹಳ್ಳಿಗರ ಮಾರ್ಗ ಸೌಕರ್ಯ, ಔಷಧೋಪಚಾರ ವ್ಯವಸ್ಥೆ ಮೊದಲಾದ್ದನ್ನು ಮಾಡಬೇಕು ಗೊಬ್ಬರ ಸೌಕರ್ಯ ಒದಗಿಸಬೇಕು ಮೊದಲಾದ ಗೊತ್ತುವಳಿ ಸ್ವೀಕೃತವಾದವು.

ಕನ್ನಡ ಸಂಸ್ಥಾನ

ಕಾಂಗ್ರೆಸ್ಸು ಅಧಿಕಾರ ಸ್ವೀಕರಿಸಿದರ ಬಗ್ಗೆ ಸಂತೋಷ ಪ್ರದರ್ಶಿಸಲು ಕೊಲ್ಹಾಪುರ ನಗರಸಭೆ ೨ ನೇ ತಾರೀಕು ತನ್ನ ಕಚೇರಿಗಳಿಗೆ ಹಾಗ ಪ್ರಾಥಮಿಕ ಶಾಲೆಗಳಿಗೆ ಬಿಡುವು ಕೊಟ್ಟಿತ್ತು.

ರಾಮದುರ್ಗ ಸಂಸ್ಥಾನದವರು ಕೊಳಚಿ ಗ್ರಾಮದ ಹತ್ತರ ಮಲಪ್ರಭಾ ನದಿಗೆ ಕಟ್ಟಿದ ಅಣೆಕಟ್ಟು ಈ ಸಲ ನದಿಗೆ ಮಹಾಪೂರು ಬಂದದ್ದರ ಪರಿಣಾಮವಾಗಿ ಒಡೆದುಹೋಗಿದೆ. ಈ ಒಡ್ಡಿನ ಲಾಭ ಬರಿ ರಾಮದುರ್ಗ ಸಂಸ್ಥಾನಕ್ಕಷ್ಟೆ ಅಲ್ಲ ಮುಂಬಯಿ ಸರಕಾರಕ್ಕೂ ಸಿಕ್ಕುವದರಿಂ ಮುಂಬಯಿ ಸರಕಾರದವರು ರಾಮದುರ್ಗ ಸಂಸ್ಥಾನ ಸರಕಾರಕ್ಕೆ ಸಹಾಯ ಮಾಡಿ ಬೇಗನೆ ಈ ಒಡ್ಡಿನ ದುರಸ್ತಿಯಾಗುವಂತೆ ಯೋಜಿಸಬೇಕೆಂದು ಶ್ರೀ ಗುರುರಾವ ವಾಳವೇಕರರು ಅಭಿಪ್ರಾಯಪಡುತ್ತಾರೆ.

ತುಮಕೂರು ಹತ್ತರ ಮೈಸೂರು ಸ್ಟೇಟ ರೇಲ್ವೆಯ ಪಾಸಿಂಜರಗಾಡಿಯೊಂದು ಹಳಿ ತಪ್ಪಿ ಬಿದ್ದದ್ದರಿಂದ ೮ ನೇ ತಾರೀಖಿನ ಬೆಂಗಳೂರು ಪೂನೆ ಎಕ್ಸಪ್ರೆಸ್ ಗಾಡಿ ೧೧ ಗಂಟೆ ತಡಮಾಡಿ ಹುಬ್ಬಳ್ಳಿ ಮುಟ್ಟಿತು. ಅದನ್ನೇ ಮೇಲಗಾಡಿ ಮಾಡಿ ಪೂನೆಗೆ ಬಿಡಲಾಯಿತು. ಹಿಂದಿನ ರಾತ್ರಿ ಬೇರೆ ಎಕ್ಸಪ್ರೆಸ್ ಗಾಡಿಯನ್ನು ಬಿಡಲಾಯಿತು.

ಶ್ರೀ ರಾಘವೇಂದ್ರ ಸ್ವಾಮಿಗಳ ಭಾವಚಿತ್ರಗಳು

ಶ್ರೀ ಮಂತ್ರಾಲಯ ಯಾತ್ರಿಕರ ಗುಂಪು ಗದಗ ಈ ಸಂಸ್ಥೆಯವರು ವಿಜಾಪುರದ ಪ್ರಸಿದ್ಧ ಫೋಟೋಗ್ರಾಫರ ಶ್ರೀ ನಾರಾಯಣರಾವ ಕುಲಕರ್ಣಿ ಇವರ ಕಡೆಯಿಂದ ಶ್ರೀ ಮಂತ್ರಾಲಯದಲ್ಲಿರುವ ಮೂಲ ವೃಂದಾವನದ ಭಾವ ಚಿತ್ರವನ್ನು ತೆಗೆಯಿಸಿದ್ದಾರೆ. ಮಧ್ಯದಲ್ಲಿ ಶ್ರೀ ರಾಯರು ಪ್ರತ್ಯಕ್ಷ ಕುಳಿತುಕೊಂಡು ಭಕ್ತರ ಅಭೀಷ್ಟಗಳನ್ನು ಪೂರ್ತಿಗೊಳಿಸುತ್ತಿರುವರೆಂಬ ಭಾವನೆಯನ್ನು ವ್ಯಕ್ತ ಪಡಿಸುತ್ತಿರುವದನ್ನು ಇದರಲ್ಲಿ ಚನ್ನಾಗಿ ಚಿತ್ರಿಸಲಾಗಿದೆ. ಈ ವರೆಗೆ ಶ್ರೀ ರಾಯರ ವೃಂದಾವನದ ಕಾಲ್ಪನಿಕ ಚಿತ್ರಗಳೇ ಇದ್ದುವಲ್ಲದೆ ಹೀಗೆ ಫೋಟೋ ತೆಗೆದ ಚಿತ್ರಗಳಿರಲಿಲ್ಲ. ಈ ಕೊರತೆಯನ್ನು ನೀಗಿಸಲಾಗಿದ್ದು ಅಭಿನಂದನಾರ್ಹವಾಗಿದೆ. ಬೇರೆ ಬೇರೆ ಐದು ಆಕಾರಗಳಲ್ಲಿ ಈ ಚಿತ್ರಗಳನ್ನು ತೆಗೆದಿದ್ದು ಬೆಲೆ ನಾಲ್ಕು ಆಣೆಯಿಂದ ೫ ರೂಪಾಯಿಗಳ ವರೆಗಿಡಲಾಗಿದೆ. ಈ ಚಿತ್ರಗಳ ಮಾರಾಟದಿಂದ ಬರುವ ಹಣದಲ್ಲಿ ಒಂದು ಕಾಲು ಭಾಗವು ಯಾತ್ರಿಕರ ಗುಂಪಿಗೆ ಹೋಗುವದು. ಭಕ್ತ ಜನರು ಇವುಗಳನ್ನು ಕೊಂಡು ಅಭೀಷ್ಟವನ್ನೂ ಪೂರ್ತಿಗೊಳಿಸಿಕೊಳ್ಳುವದಲ್ಲದೆ ಸಂಘಕ್ಕೆ ಅಪ್ರತ್ಯಕ್ಷ ರೀತಿಯಿಂದ ಸಹಾಯ ಮಾಡಿದ ಶ್ರೇಯಸ್ಸನ್ನೂ ಪಡೆಯಬೇಕು. ಈ ಚಿತ್ರಗಳ ಪ್ರತಿಗಳು ಮಂತ್ರಾಲಯ ಯಾತ್ರಿಕರ ಗುಂಪು ಗದಗ ಮತ್ತು ಶ್ರೀ ನಾರಾಯಣರಾವ ಕುಲಕರ್ಣಿ ಫೋಟೋಗ್ರಾಫರ ವಿಜಾಪೂರ ಇವರ ಕಡೆಗೆ ಸಿಕ್ಕುವವು. ವ್ಯಾಪಾರಿಗಳಿಗೆ ತುಂಬ ರಿಯಾಯತಿ ಕೊಡಲಾಗುವದು.

ರತ್ನಾಗಿರಿ ಕನ್ನಡಿಗರ ಸಂಘ

ರತ್ನಾಗಿರಿಯಲ್ಲಿ ಕನ್ನಡಿಗರ ಸಂಘದ ಪರವಾಗಿ ಮೂರು ದಿನಗಳ ವರೆಗೆ ಗಣೇಶ ಉತ್ಸವ ಪಾಲಿಸಲಾಯಿತು. ಪ್ರೊ. ರಾಯರೀಕರ ಮತ್ತು ಶ್ರೀ ನಾವಲಕರ ಇವರ ಭಾಷಣ, ಬಾಲಿಕೆಯರ ಮೇಳಾ, ವಿ ಕೆ ಜೋಶಿಯವರ ಗಾಯನ ಕನ್ನಡಿಗರ ವಿವಿಧ ವಿನೋದಾವಳಿಗಳು ಮೊದಲಾದವು ನಡೆದವು.

ಇಲ್ಲಿ ಕನ್ನಡಿಗರ ಸಂಘ ಸ್ಥಾಪನೆಯಾಗಿ ಮೂರು ವರುಷಗಳಾದವು. ಈ ಅವಧಿಯಲ್ಲಿ ಕನ್ನಡಿಗರಲ್ಲಿ ಅಪೂರ್ವ ಜಾಗೃತಿಯಾಗಿದೆ. ಕನ್ನಡಿಗರಲ್ಲಿ ಕನ್ನಡ ಭಾಷೆಯ ಪ್ರಚಾರಕ್ಕಾಗಿ ಇಲ್ಲಿ ಒಂದು ವಾಚನಾಲಯ ಸ್ಥಾಪಿಸಬೇಕೆಂದು ಏರ್ಪಡಿಸಲಾಗಿದೆ. ಇದಕ್ಕೆ ಕನ್ನಡ ಲೇಖಕರು ಪತ್ರಿಕಾಕರ್ತರು ಮತ್ತು ಇತರರು ತನುಮನ ಧನಗಳಿಂದ ಸಹಾಯ ಮಾಡಬೇಕೆಂದು ಕಾರ್ಯದರ್ಶಿಗಳು ಬಿನ್ನವಿಸುತ್ತಾರೆ.

ಭದ್ರಾವತಿಯ ಮೈಸೂರ ಅಯರ್ನ ಮತ್ತು ಸ್ಟೀಲ ವರ್ಕ್ಸದ ಕೂಲಿಕಾರ ಸಂಘದ ಸಭೆ ೮ ನೇ ತಾರೀಕು ಸೇರಿ ತುಟ್ಟಿಭತ್ತೆಯನ್ನು ೩೦ ರೂ. ಏರಿಸಬೇಕೆಂದು ಮೊದಲಾದ ಹಲವು ಬೇಡಿಕೆಗಳನ್ನು ಕೇಳುವ ಗೊತ್ತುವಳಿ ಸ್ವೀಕೃತವಾದವು.

ಮೈಸೂರು ಕಾಂಗ್ರೆಸ್ಸಿನ ನಿಯೋಜಿತ ಅಧ್ಯಕ್ಷರು ಶ್ರೀ ಕೆ ಚೆಂಗಲರಾಯರೆಡ್ಡಿಯವರು ಭದ್ರಾವತಿ ನಾಗರಿಕರನ್ನುದ್ದೇಶಿಸಿ ಮಾತಾಡುತ್ತ ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪಿತವಾದುದಕ್ಕೆ ಸಂತೋಷ ಪ್ರದರ್ಶಿಸಬೇಕೆಂದೂ ರಾಮಸ್ವಾಮಿ ಮುದಲಿಯಾರರನ್ನು ದಿವಾಣರನ್ನಾಗಿ ಮಾಡಿದ್ದಕ್ಕೆ ನಿಷೇಧಿಸಬೇಕೆಂದೂ ಹೇಳಿದರು. ಬ್ರಿಟಿಶ್ ಹಿಂದುಸ್ಥಾನದಲ್ಲಿ ಯಾರು ಏನೇ ಧೋರಣ ವಹಿಸಿದರೂ ಮೈಸೂರು ಸಂಸ್ಥಾನದಲ್ಲಿ ಎಲ್ಲ ಜಾತಿಯ ಜನರಲ್ಲಿ ಸ್ನೇಹ ಸೌಹಾರ್ದವನ್ನು ಇಡಬು ಪ್ರಯತ್ನಿಸುವ ಬಗ್ಗೆ ಮುಸ್ಲಿಂ ಲೀಗ ಅಧ್ಯಕ್ಷ ಮಹಮುದ ಶರೀಫರು ಆಶ್ವಾಸನ ಕೊಟ್ಟದ್ದಕ್ಕೆ ಸಂತೋಷ ಪ್ರದರ್ಶಿಸಿದರು.

ಶಿವಮೊಗ್ಗಿಯಲ್ಲಿ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯೊಂದನ್ನು ಕಟ್ಟಲು ಹತ್ತುವ ೧೦ ಸಾವಿರ ರೂಪಾಯಿಗಳಲ್ಲಿ ಒಂದು ಮೂರಾಂಶ ಹಣ ಕೊಡಬೇಕೆಂದು ಶ್ರೀ ಎಂ. ಎಸ್. ಕಾಮತರ ಅಧ್ಯಕ್ಷತೆಯಲ್ಲಿ ಸೇರಿದ ನಗರಸಭೆಯವರು ನಿರ್ಣಯಿಸಿದರು.

ಹಿಂದುಸ್ತಾನ

ಮುಂಬಯಿ

ಸುರತದ ಪ್ರಾಥಮಿಕ ಶಿಕ್ಷಕರ ಬೇಡಿಕೆಗಳನ್ನು ಸ್ಕೂಲ ಬೋರ್ಡಿನವರು ಮಾನ್ಯ ಮಾಡಿದ್ದರಿಂದ ೬ ದಿವಗಳಿಂದ ನಡೆದ ಅವರ ಸಂಪು ಮುಕ್ತಾಯವಾಗಿರುವದು.

ಅಹಮ್ಮದಾಬಾದದಲ್ಲಿ ಜಾರಿಯಲ್ಲಿದ್ದ ಕರ್ಫ್ಯೂ ಕಟ್ಟಳೆಯ ಅವಧಿಯನ್ನು ಮತ್ತೆ ೧ ವಾರ ಬೆಳಸಲಾಗಿದೆ.

ಅಂಕಲೇಶ್ವರದಲ್ಲಿ ಪ್ರಾಣಘಾತಕ ಆಯುಧಗಳಿಗೆ ಪ್ರತಿಬಂಧ ಮಾಡಲಾಗಿರುವದು.

ಮುಂಬಯಿ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಪುರುಷೋತ್ತಮ ಠಕ್ಕರರು ಇರಿಯಲ್ಪಡುತ್ತಿರುವ ಒಬ್ಬನನ್ನು ಪುಂಡರಿಂದ ಸಂರಕ್ಷಿಸಲು ಹೋದಾಗ ಪುಂಡರು ಅವರ ಮೇಲೆಯೆ ಹಲ್ಲೆ ಮಾಡಿ ಅವರನ್ನು ಗಾಯಗೊಳಿಸಿದ್ದಾರೆ.

ಜಳಗಾವದಲ್ಲಿ ಸಿಡಿಲು ಬಡೆದು ಮೂವರು ಮರಣ ಹೊಂದಿದ್ದು ಇನ್ನೊಬ್ಬನಿಗೆ ಗಾಯವಾಗಿರುವದು.

ಮುಂಬಯಿಯಲ್ಲಿ ಕಳೆದ ವಾರ ಒಂದೇ ದಿವಸ ೬ ಇಂಚು ಮಳೆಯಾಗಿ ಬೀದಿಗಳಲ್ಲಿ ೪ ಫೂಟು ನೀರು ಹರಿಯಿತು. ಟ್ರಾಮು, ಬಸ್ ಉಗೆಬಂಡಿ ಮೊದಲಾದವುಗಳೆಲ್ಲ ಕಟ್ಟಾಗಿದ್ದವು ಗಲಭೆಯ ಪರಿಸ್ಥಿತಿಯೂ ಸುಧಾರಿಸಹತ್ತಿದ್ದು ಹಲ್ಲೆ ಇರಿತ ಮೊದಲಾದವುಗಳು ಕಡಿಮೆಯಾಗಿವೆ.

ಜಿ ಆಯ ಪಿ ರೇಲ್ವೆ ಕೂಲಿಕಾರ ಸಂಘದ ಅಧ್ಯಕ್ಷರಾದ ಬೇಡಗಿಕರರು ಅ. ಭಾ. ರೇಲ್ವೆ ಜನರ ಮಹಾಮಂಡಳದ ಸೆಕ್ರೆಟರಿಗಳಾದ ಎಸ್ ಗುರುಸ್ವಾಮಿಯವರಿಗೆ ತಂತಿ ಕಳಿಸಿ ಎಸ್ ಆಯ ರೇಲ್ವೆ ನೌಕರರ ಸಂಪಿನ ಬಗ್ಗೆ ವಿಚಾರ ಮಾಡಲು ಅ ಭಾ ರೇಲ್ವೆ ಜನರ ಮಹಾಮಂಡಳದ ಸಾಧಾರಣ ಸಭೆ ಕರೆಯಲು ಸೂಚಿಸಿದ್ದಾರೆ.

ಎಂ ಎಸ್ ಎಂ ರೇಲ್ವೆ ಸಲಹೆ ಸಮಿತಿಗೆ ಮುಂಬಯಿ ಶಾಸನಸಭೆಯಿಂದ ನಡೆದ ಚುನಾವಣೆಯಲ್ಲಿ ಶ್ರೀ ದಳವಾಯಿ ಎಂ ಎಲ್ ಎ. ಬೆಳಗಾವ ಅವರು ಪ್ರಚಂಡ ಬಹುಮತದಿಂದ ಆರಿಸಿ ಬಂದರು. ಕಾರವಾರದ ಶ್ರೀ ಶಮಸುದ್ದೀನರ. ಎಂ ಎಲ್ ಎ ಅವರು ಸೋತರು.

ಮುಂಬಯಿ ಸಿನೇಟಗೆ ಪದವೀಧರ-ಮತದಾರ ಸಂಘದಿಂದ ನಡೆದ ಚುನಾವಣೆಯಲ್ಲಿ ಪ್ರಾಧ್ಯಾಪಕ ಹುಲ್ಯಾಳಕರರು ಯಶಸ್ವಿಯಾಗಿರುವರು.

ಮದ್ರಾಸ

ಮದ್ರಾಸ ಇಲಾಖೆಯ ೮ ಜಿಲ್ಲೆಗಳಲ್ಲಿ ಮದ್ಯಪ್ರತಿಬಂಧವು ಇದೇ ಅಕ್ಟೋಬರ ೧ ರಿಂದ ಜಾರಿಯಲ್ಲಿ ಬರುವದು.

ಮದ್ರಾಸ ಸರಕಾರದವರು ಖಾದಿ ಬೆಳವಣಿಗೆಗಾಗಿ ಕೈಕೊಂಡ ಖಾದಿ ಯೋಜನೆಯಲ್ಲಿ ಮಹಾತ್ಮರ ಸಲಹೆ ಪ್ರಕಾರ ಈಗ ಆಮೂಲ ಬದಲಾವಣೆಯಾಗಿದ್ದು ಮಹಾತ್ಮರ ಹುಟ್ಟುದಿನವಾದ ೨ ನೇ ಅಕ್ಟೋಬರದಿಂದ ಅದು ಪ್ರಾರಂಭಿಸಲ್ಪಡುವದು.

ಸರಕಾರಿ ನೌಕರರಿಗೆ ಮಂತ್ರಿಮಂಡಳ ಉಪಸಮಿತಿಯ ನಿರ್ಣಯ ಹೊರಬೀಳುವ ವರೆಗೆ ೮ ರಿಂದ ೪ ರೂಪಾಯಿ ತಾತ್ಪೂರ್ತಿಕ ಪರಿಹಾರ ಮಂಜೂರಾಗಿದೆ. ಇದರಂತೆ ಗ್ರಾಮಾಧಿಕಾರಿಗಳ ಹಾಗು ತಳವಾರರ ಸಂಬಳವನ್ನೂ ೩ ರೂಪಾಯಿ ಹೆಚ್ಚಿಸಲಾಗಿರುವದು.

ತಮ್ಮ ಬೇಡಿಕೆ ಮಾನ್ಯ ಮಾಡದಿದ್ದರೆ ಅಕ್ಟೋಬರ ೫ ರಿಂದ ಸಂಪು ಹೂಡುವದಾಗಿ ನಾನ್ ಗ್ಯಾಜೆಟೆಡ್ ಅಧಿಕಾರಿಗಳ ಸಂಘದವರು ಸರಕಾರಕ್ಕೆ ನೋಟೀಸು ಕೊಟ್ಟಿದ್ದಾರೆ.

ಕಾಲಿಕತ್ತ ಮ್ಯುನಿಸಿಪಲ್ ಹದ್ದಿನಲ್ಲಿ ಸಭೆ ಮೆರವಣಿಗೆಗಳಿಗೆ ಪ್ರತಿಬಂಧ ಮಾಡಲಾಗಿದೆ

ಎಸ್ ಆಯ ರೇಲ್ವೆ ಕೂಲಿಕಾರ ಸಂಘದ ಅಧ್ಯಕ್ಷರಾದ ಕಲ್ಯಾಣ ಸುಂದರಂ ಅವರು ಸಂಪಿನ ಗಂಟೆಯಲ್ಲಿ ಮಧ್ಯಸ್ಥಿಕೆಮಾಡಿ ಸಂಪು ಬಗೆಹರಿಸಲು ನಡುಗಾಲ ಸರಕಾರಕ್ಕೆ ಬಿನ್ನವಿಸಿರುವರು.

ಹೊಸದಿಲ್ಲಿ

ಸಂಯುಕ್ತರಾಷ್ಟ್ರ ಸಂಘದ ಸಭೆಗೆ ಶ್ರೀಮತಿ ವಿಜಯಲಕ್ಷ್ಮಿ, ಫ್ರಾಂಕ ಅಂಥೋನಿ ಹಾಗು ಕೆ ಸಿ ನಿಯೋಗಿ ಅವರು ಪ್ರತಿನಿಧಿಗಳಾಗಿ ಹೋಗಲಿರುವರು. ಪಂ. ಕುಂಝರು ಹಾಗು ರೇಝಾ ಅಲ್ಲಿಯವರು ಆಮಂತ್ರಣ ನಿರಾಕರಿಸಿದ್ದಾರೆ.

ಬಂಗಾಲದ ಮುಖ್ಯ ಪ್ರಧಾನರಾದ ಸುಹ್ರವರ್ದಿಯವರು ವ್ಹಾಯಿಸರಾಯರನ್ನು ಕಂಡು ಮಾತುಕತೆ ನಡೆಸಿದ್ದಕ್ಕೆ ಜಿನ್ನಾರವರ ಪ್ರೇರಣೆಯೆ ಕಾರಣವಾಗಿದೆಂದೂ ಪುನಃ ಮಾತುಕತೆ ನಡೆಯುವಂತೆ ಜಿನ್ನಾರವರು ಯತ್ನ ನಡೆಸಿರುವರೆಂದೂ ತಿಳಿಯುತ್ತದೆ.

ಕವಾಯಿತ ನಿರ್ಬಂಧದ ಹುಕುಮು ಮುರಿದ ಬಗ್ಗೆ ದಿಲ್ಲಿಯಲ್ಲಿ ೧೧ ಕಾಂಗ್ರೆಸ ಸ್ವಯಂಸೇವಕರ ಬಂಧನವಾಗಿದೆ.

ಮಹಾತ್ಮಾ ಗಾಂಧಿಯವರು ದಿಲ್ಲಿಯಲ್ಲಿ ತಾ. ೨೫ ರ ವರೆಗೆ ಇರಲಿರುವರೆಂದು ತಿಳಿಯುತ್ತದೆ.

ನಡುಗಾಲ ಸರಕಾರದವರ ಸಹಾಯಕ್ಕೆ ಚಿಕ್ಕದೊಂದು ಪ್ರತ್ಯೇಕ ಕಚೇರಿ ಸ್ಥಾಪಿತವಾಗಿರುವದು. ಸೆಕ್ರೆಟರಿಯೇಟಕ್ಕೆ ಸಂಬಂಧಿಸದ ಆದರೆ ಮಂತ್ರಿಗಳಿಗೆ ಸಂಬಂಧಿಸಿದ ಕೆಲಸಗಳನ್ನು ಈ ಕಚೇರಿ ನೋಡಿಕೊಳ್ಳುವದು.

ಹೊಸ ಸರಕಾರದ ಅರ್ಥಸಚಿವರಾದ ಡಾ. ಜಾನ ಮಥಾಯಿಯವರು ಉಪ್ಪಿನ ಕರ ರದ್ದು ಮಾಡುವ ವಿಚಾರ ನಡೆಸಿದ್ದಾರೆ. ಈ ಕರ ರದ್ದು ಮಾಡುವದರಿಂದ ೯ ಕೋಟಿ ರೂಪಾಯಿ ಆದಾಯ ಕಡಿಮೆಯಾಗುವದು.

ಸಂಯುಕ್ತಪ್ರಾಂತ

ಮಿರತದಲ್ಲಿ ಈ ಸಲ ಜರುಗುವ ಕಾಂಗ್ರೆಸ ಬಹಿರಂಗ ಅಧಿವೇಶನದ ಸ್ವಾಗತ ಸಮಿತಿಯು ತಾ. ೨೬ ನೇ ದಿವಸ ಕೂಡುವ ಪ್ರಾಂತಿಕ ಕಮೀಟಿ ಸಭೆಯಲ್ಲಿ ಆರಿಸಲ್ಪಡುವದು.

ಅಲಹಾಬಾದ ಕಾಯಸ್ಥ ಪಾಠಶಾಲೆ ಕಾಲೇಜಿನ ವಿದ್ಯಾರ್ಥಿಗಳು ಪ್ರಿನ್ಸಿಪಾಲ ಗೋಕುಲಚಂದರನ್ನು ಕೆಲಸದಿಂದ ತೆಗೆದೊಗೆದ ನಿಷೇಧಾರ್ಥ ಸಂಪು ಹೂಡಿದ್ದಾರೆ.

ಸರಕಾರದವರು ಮದ್ಯಪ್ರತಿಬಂಧದಲ್ಲಿ ಮೊದಲನೆ ಹೆಜ್ಜೆಯೆಂದು ಕಾನಪುರದಲ್ಲಿಯ ದೊಡ್ಡದೊಂದು ಸಿಂದಿ ಅಂಗಡಿಯನ್ನು ಮುಚ್ಚಲು ಹಾಗು ಪ್ರಾಂತದಲ್ಲಿಯ ಸಿಂದಿ ಅಂಗಡಿಗಳನ್ನು ೧೦೦ಕ್ಕೆ ೧೦ರಷ್ಟು ಕಡಿಮೆ ಮಾಡಲು ಅಪ್ಪಣೆ ವಿಧಿಸಿದ್ದಾರೆ.

ಆಚಾರ್ಯ ಕೃಪಲಾಣಿಯವರು ಬನಾರಸದಲ್ಲಿ ಭಾಷಣ ಮಾಡುತ್ತ ಕಾಂಗ್ರೆಸ್ಸು ಅಧಿಕಾರ ಸ್ವೀಕಾರ ಮಾಡಿದರೂ ಇನ್ನೂ ನಿಜವಾದ ಸ್ವರಾಜ್ಯ ಸಿಕ್ಕಿಲ್ಲೆಂದೂ ಬ್ರಿಟಿಶರ ಬೇಡಿ ಕಡಿದೊಗೆದಿದ್ದರೂ ಮುಸ್ಲಿಂಲೀಗಿನ ಇನ್ನೊಂದು ಬೇಡಿ ಕಾಲಿಗಿದ್ದುದರಿಂದ ಇನ್ನೂ ನಾವು ನಡೆಯಲು ಶಕ್ತರಾಗಿಲ್ಲೆಂದೂ ಹೇಳಿದರು.

ಪಂಜಾಬ

ಸುಭಾಸಚಂದ್ರರು ಈ ತಿಂಗಳ ಕೊನೆಯೊಳಗಾಗಿ ಪ್ರಕಟರಾಗುವದು ಎಂದು ಪಂಜಾಬ ಮುರೋಗಾಮಿ ಪಕ್ಷದ ಅಧ್ಯಕ್ಷರಾದ ಮೋಟಾ ಸಿಂಗರು ಒಂದು ಸಭೆಯಲ್ಲಿ ತಿಳಿಸಿದರು. ಈ ಸಲ ಅವರನ್ನೆ ಕಾಂಗ್ರೆಸ ಅಧ್ಯಕ್ಷರನ್ನಾಗಿ ಆರಿಸುವ ಸೂಚನೆಗಳೂ ಮುಂದೆ ಬಂದಿವೆ.

ಕರನಿರಾಕರಣ ಚಳವಳಿ ಪ್ರಾರಂಭವಾದರೆ ಜಪ್ತಿ ಮೊದಲಾದವುಗಳನ್ನು ಎದುರಿಸಲು ಲೀಗಿನ ಅನೇಕ ಆಸ್ತಿವಂತ ಜನರು ಈಗಾಗಲೆ ತಮ್ಮ ಆಸ್ತಿಗಳನ್ನು ತಮ್ಮ ಹೆಂಡದಿರು ಇಲ್ಲವೆ ಆಪ್ತರ ಹೆಸರಿಗೆ ವರ್ಗಾಯಿಸಿರುವರೆಂದು ತಿಳಿಯುತ್ತದೆ.

ಸರ್ ಶಫತ ಅಹಮ್ಮದರ ಮೇಲಿನ ಹಲ್ಲೆ ಸಂಬಂಧದಲ್ಲಿ ಹಿಡಿಯಲಾದ ಆರೋಪಿಗಳ ಗುರುತಿನ ಕವಾಯಿತಿನಲ್ಲಿ ಸರ್ ಶಾಫತರು ಒಬ್ಬನನ್ನು ಇವನೇ ಅತ್ಯಾಚಾರಿಯೆಂದು ಗುರುತಿಸಿದರು. ಆಗ ಅಲ್ಲಿದ್ದ ಆ ಆರೋಪಿಯ ತಂದೆಯು ಚಟ್ಟನೇ ಚೀರಿ ಪ್ರಜ್ಞೆ ತಪ್ಪಿಬಿದ್ದನು.

ಸಿಂಧ

ಸಿಂಧ ಶಾಸನಸಭೆಯ ಅಧ್ಯಕ್ಷ ಹಾಗು ಉಪಾಧ್ಯಕ್ಷರು ರಾಜೀನಾಮೆ ಕೊಟ್ಟಿದ್ದರಿಂದ ಗವ್ಹರ್ನರರು ಶಾಸನ ಸಭೆ ಮುಂದರಿಸಿರುವರು. ತಾ. ೧೧ ನೇ ದಿನ ಈ ಸಭೆಯಲ್ಲಿ ಮಂತ್ರಿಮಂಡಳ ವಿರುದ್ಧ ಅವಿಶ್ವಾಸ ಸೂಚನೆ ಬರಲಿತ್ತು. ಗವ್ಹರ್ನರರ ಈ ಕೃತಿಯನ್ನು ವಿರುದ್ಧ ಪಕ್ಷದ ಧುರೀಣರಾದ ಸಯ್ಯದರು ಬಲವಾಗಿ ನಿಷೇಧಿಸಿ ವ್ಹಾಯಿಸರಾಯರಿಗೆ ಕೈಹಾಕಲು ಬಿನ್ನಹ ಮಾಡಿಕೊಂಡಿದ್ದಾರೆ.

ರಸಿಯಾದ ಬೆಂಬಲ ದೊರಕಿಸಲು ವರ್ಗಸ್ಥಜನರ ಶಿಷ್ಟಮಂಡಳವನ್ನು ರಶಿಯಾಕ್ಕೆ ಕಳಿಸಬೇಕು. ಅಂದರೆ ಬ್ರಿಟಿಶರು ಹಾದಿಗೆ ಬರುವರು ಎಂದು ಸಿಂಧ ಮುಸ್ಲಿಂಲೀಗ ಕೌನ್ಸಿಲದವರು ಗೊತ್ತುವಳಿ ಮಾಡಿ ಅ. ಭಾ. ಮುಸ್ಲಿಂಲೀಗಿಗೆ ಕಳಿಸಿದ್ದಾರೆ.

ಸಿಂಧ ಮಂತ್ರಿಮಂಡಳದ ಗುಲಾಮು ಅಲ್ಲಿಖಾನ ತಾಲಪುರಿ, ಪೀರ ಇಲಾಹಿಬಕ್ಷ್, ಪೀರಜಾದಾ ಸತ್ತಾರ ಹಾಗು ಮೀರ ಬಂದೇಅಲ್ಲಿಖಾನ ಅವರು ಮಂತ್ರಿಪದಕ್ಕೆ ರಾಜೀನಾಮೆ ಕೊಟ್ಟಿದ್ದು ಮುಖ್ಯ ಪ್ರಧಾನರು ಮಂತ್ರಿ ಮಂಡಳ ಪುನಃ ಘಟಿಸತಕ್ಕವರಿದ್ದಾರೆ. ವಿರುದ್ಧ ಪಕ್ಷದವರಲ್ಲಿ ಕೆಲವರನ್ನು ತಮ್ಮ ಕಡೆಗೆ ಎಳೆದುಕೊಳ್ಳಲು ಈ ಆಟ ಹೂಡಿರುವರೆಂದು ಊಹಿಸಲಾಗಿದೆ.

ಬಂಗಾಲ

ಕಲಕತ್ತೆಯಲ್ಲಿ ಈಗ ಸಂಪೂರ್ಣ ಶಾಂತತೆಯುಂಟಾಗಿರುವದು.

ಬಂಗಾಲ ಪ್ರಾಂತಿಕ ಹಿಂದು ಮಹಾಸಭೆಯ ಕಾರ್ಯದರ್ಶಿಗಳಾದ ಮಖನಲಾಲ ವಿಶ್ವಾಸರು ಗಲಭೆ ಸಂಬಂಧದಲ್ಲಿ ಬಂಧಿಸಲ್ಪಟ್ಟಿದ್ದು ಗುಂಡರ ನೇತೃತ್ವ ವಹಿಸಿ ಒಂದು ಬಸ್ತಿಗೆ ಬೆಂಕಿಯಿಟ್ಟ ಆರೋಪ ಅವರ ಮೇಲಿದೆ.

ಪ್ರಾಂ. ಕಾಂ. ಕಮೀಟಿ ಅಧ್ಯಕ್ಷರಾದ ಸುರೇಂದ್ರ ಮೋಹನ ಘೋಷರು ಮಹಾತ್ಮರನ್ನೂ ಉಳಿದ ಧುರೀಣರನ್ನೂ ದಿಲ್ಲಿಯಲ್ಲಿ ಭೆಟ್ಟಿಯಾಗಿ ಬಂಗಾಲದ ಪರಿಸ್ಥಿತಿ ತಿಳಿಸಿ ಬಂದಿರುವರು.

ಇತ್ತೀಚೆಗೆ ಬಂಧಮುಕ್ತರಾದ ಸುಧಾರಣೆ ಪೂರ್ವದ ಗಣೇಶ ಘೋಷ, ಅಂಬಿಕಾ ಚಕ್ರವರ್ತಿ ಮೊದಲಾದ ೨೫ ಜನ ಕ್ರಾಂತಿಕಾರರು ಕಮ್ಯುನಿಸ್ಟ ಪಕ್ಷಕ್ಕೆ ಕೂಡಲು ನಿಶ್ಚಯಿಸಿದ್ದಾರೆ.

ಸಿಮರ್ಲಾ ಮೇಲಗಾಡಿಗೆ ಬ್ರಾಹ್ಮಣಬಾಡಿಯಾ ಹತ್ತರ ಅಪಘಾತ ಸಂಭವಿಸಿ ೭ ಜನರು ಸತ್ತಿದ್ದು ೩೨ ಜನರಿಗೆ ಗಾಯಗಳಾಗಿವೆ.

ಡಾ. ಶ್ಯಾಮಪ್ರಸಾದ ಮುಖರ್ಜಿಯವರು ವಾಯಿಸರಾಯರ ಭೆಟ್ಟಿ ತೆಗೆದುಕೊಂಡು ಬಂಗಾಲ ಪರಿಸ್ಥಿತಿ ಸಂಬಂಧದಲ್ಲಿ ಮಾತಾಡಿ ಬಂದಿರುವರು.

ಕಲಕತ್ತೆಯ ಇತ್ತೀಚಿನ ಗಲಭೆಯಲ್ಲಿ ೧೭೦೦ ಮನೆಗಳು ಧಕ್ಕೆಗೊಂಡಿರುವವು.

ಆಸಾಮ

ಮಹಾತ್ಮಾ ಗಾಂಧಿಯವರು ಆಸಾಮಕ್ಕೆ ಭೆಟ್ಟಿ ಕೊಟ್ಟಾಗ ಕೂಡಿದ ಹರಿಜನ ನಿಧಿಯೊಳಗಿಂದ ಆಸಾಮದ ೫೧ ಹರಿಜನ ವಿದ್ಯಾರ್ಥಿಗಳಿಗೆ ದ್ರವ್ಯ ಸಹಾಯ ಮಾಡಲಾಗಿದೆ.

ಮುಖ್ಯ ಮಂತ್ರಿಗಳು ಪ್ರತಿ ತಿಂಗಳದ ತಮ್ಮ ೨೦೦೦ ರೂ. ಸಂಬಳದಲ್ಲಿ ೧೦೦೦ ರೂ. ಬಿಟ್ಟುಗೊಟ್ಟು ಒಂದೇ ಸಾವಿರ ರೂ. ಸಂಬಳ ತೆಗದುಕೊಳ್ಳುತ್ತಿರುವರು.

ಸಂಸ್ಥಾನಗಳು

ಕಾಶ್ಮೀರ ರಾಷ್ಟ್ರೀಯ ಪರಿಷತ್ತಿನ ಅಧ್ಯಕ್ಷರಾದ ಶೇಖ ಮಹಮ್ಮದ ಅಬ್ದುಲ್ಲಾರವರಿಗೆ ೩ ವರ್ಷ ಸಾದಾ ಶಿಕ್ಷೆ ೧೫೦೦ ರೂ. ದಂಡ ಇಲ್ಲವೆ ೩ ತಿಂಗಳ ಶಿಕ್ಷೆ ವಿಧಿಸಲಾಗಿರುವದು ರಾಜದ್ರೋಹ ಭಾಷಣ ಮಾಡಿದ ಬಗ್ಗೆ ಈ ಖಟ್ಲೆ ನಡೆದಿದ್ದು ಅಸಫಅಲ್ಲಿಯವರು ಆರೋಪಿಗಳ ಪಕ್ಷಪ್ರತಿಪಾದನೆ ಮಾಡಿದ್ದರು.

ನರೇಂದ್ರ ಮಂಡಳದ ಚಾನ್ಸಲರರು ಸಂಧಾನ ಸಮಿತಿಗೆ ಮೈಸೂರು ದಿವಾಣರಾದ ಸರ್ ಆರ್ಕಾಟ ರಾಮಸ್ವಾಮಿ ಮುದಲಿಯಾರರನ್ನು ಸಭಾಸದರನ್ನಾಗಿ ನೇಮಿಸಿದ್ದಾರೆ.

ಕೋಚೀನದಲ್ಲಿ ಪ್ರಜಾಮಂಡಳ, ಸೋಶಾಲಿಸ್ಟ ಪಕ್ಷ ಹಾಗು ಪ್ರಗತಿಪರ ಪಕ್ಷ ಇವುಗಳ ಪ್ರತಿನಿಧಿಗಳ ಸಮ್ಮಿಶ್ರ ಮಂತ್ರಿಮಂಡಳ ಸ್ಥಾಪಿತವಾಗಿದ್ದು ಹೊಸ ಸರಕಾರ ಸ್ಥಾಪನೆಯ ಸಂತೋಷ ಪ್ರೀತ್ಯರ್ಥ ಮಹಾರಾಜರು ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿರುವರು.

ಉಪೇಕ್ಷಿತ ವರ್ಗಗಳ ಸಭೆ

ಪುಣೆಯಲ್ಲಿ ಉಪೇಕ್ಷಿತ ವರ್ಗಗಳ ಪರಿಷತ್ತು ೧ ನೇ ತಾರೀಖು ಜಿ. ಎಂ. ಬಾಬರ ಬಿ. ಎ. ಜಿ. ಟಿ. ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ೧೩೦ ಜಾತಿಗಳನ್ನೊಳಗೊಂಡ ಸುಮಾರು ೫ ಕೋಟಿ ಉಪೇಕ್ಷಿತ ವರ್ಗಗಳ (ಹಿರ ಹಿಂದುಳಿದ ವರ್ಗಗಳು) ಜನರ ಸಂಕ್ಷಿಪ್ತ ಇತಿಹಾಸ, ಸಂಘಟನೆಯ ಅವಶ್ಯಕತೆ ಮುಂತಾದ್ದನ್ನು ಅಧ್ಯಕ್ಷರು ತಿಳಿಸಿದರು. ಇನ್ನು ಹಲವರು ಮಾತಾಡಿ ತಮ್ಮ ಮೇಲಾಗುತ್ತಿರುವ ಆಘಾತಗಳನ್ನು ತಿಳಿಸಿದರು. ೧೫ ನೇ ತಾರೀಕಿಗೆ ಪುಣೆ ನೂತನ ಮರಾಠಾ ವಿದ್ಯಾಲಯದಲ್ಲಿ ಮತ್ತೆ ಸಭೆ ಸೇರುವದು. ಇದಕ್ಕೆ ಹೆಚ್ಚು ಜನ ಉಪೇಕ್ಷಿತ ವರ್ಗದವರು ಬರಬೇಕೆಂದು ಅಧ್ಯಕ್ಷರು ಬಿನ್ನವಿಸುತ್ತಾರೆ.

ಮುಂಬಯಿ ಶಾಸನ ಸಭೆಯಲ್ಲಿ

ಕಮ್ಯುನಿಸ್ಟ-ಲೀಗ್-ಹಿಂದುಸಭಾ ಪಕ್ಷಗಳ "ಪವಿತ್ರ ಕೂಟ"

ಬಡ್ಡಿ ವ್ಯವಹಾರ ನಿಯಂತ್ರಣ, ಸಾಗುವಳಿ ಮಸೂದೆಗಳ ಚರ್ಚೆ

ಮುಂಬಯಿ ಶಾಸನ ಸಭೆಯ ಮುಂದುವರಿದ ಅಧಿವೇಶನ ತಾ. ೨ ಕ್ಕೆ ಪ್ರಾರಂಭವಾದುದು ಹಲವು ಮಹತ್ವದ ಕಾರ್ಯಭಾರವಿರುವದರಿಂದ ಇನ್ನೂ ಒಂದು ತಿಂಗಳ ವರೆಗೆ ನಡೆಯಬಹುದೆಂದು ನಂಬಲಾಗಿದೆ. ಇಷ್ಟು ದೀರ್ಘವಾಗಿ ಮುಂಬಯಿ ಶಾಸನ ಸಭೆಯ ಅಧಿವೇಶನ ನಡೆಯುವದು ಅಪೂರ್ವವೆಂದೇ ಹೇಳಬೇಕು. ಆದರೆ ೧೯೩೯ ರಲ್ಲಿ ಅನಿರೀಕ್ಷಿತವಾಗಿ ಕಾಂಗ್ರೆಸ ಮಂತ್ರಿಮಂಡಲ ಅಧಿಕಾರ ತ್ಯಾಗ ಮಾಡಿ ಹೊರಬಿದ್ದಾಗ ಅರ್ಧಕ್ಕೆ ಉಳಿದಿದ್ದ ಹಲವಾರು ಜನಹಿತದ ಮಸೂದೆಗಳು ಸಲಹೆಗಾರರ ರಾಜ್ಯದಲ್ಲಿ ಮುಂದರಿಯುವ ಬದಲು ಹಿಂದೇಟು ತಿಂದುದರಿಂದ ಅವುಗಳನ್ನೆಲ್ಲ ತ್ವರಿತವಾಗಿ ಚಾಲನೆ ಮಾಡಿ ಬಿಡಲು ಮಂತ್ರಿಮಂಡಲ ಅವಸರಪಡುತಿದೆ. ಇಂಥ ಹನ್ನೊಂದು ಮಸೂದೆಗಳನ್ನು ಅವರು ತರುವವರಿದ್ದಾರೆ. ಹೊಲ ಸಾಗುವಳಿ ಮಸೂದೆ, ತುಂಡು ಹೊಲಗಳನ್ನು ಜೋಡಿಸುವ ಮಸೂದೆ, ಬಹುಪತ್ನಿತ್ವ ಪ್ರತಿಬಂಧಕ ಮಸೂದೆ, ಕ್ರಿಮಿನಲ್ ಪ್ರೊಸೀಜರ ಕೋಡ ತಿದ್ದುಪಡಿ, ಮುಂಬಯಿ ಮತ್ತು ಜಿಲ್ಲಾ ಪೋಲೀಸ ಕಾಯದೆ ತಿದ್ದುಪಡಿ ಮೊದಲಾದವು ಅವುಗಳಲ್ಲಿ ಮುಖ್ಯವಾಗಿವೆ. ಇದಲ್ಲದೆ ಸಮಾಜ ಸುಧಾರಣೆಗೆ ಆತುರರಾಗಿರುವ ಕೆಲ ಸದಸ್ಯರು ಭೂರಿಭೋಜನ ಪ್ರತಿಬಂಧಕ, ವಿಧವಾವಿವಾಹ, ವರದಕ್ಷಿಣೆ ಪ್ರತಿಬಂಧಕ ಮಸೂದೆಗಳನ್ನು ತರುವವರಿದ್ದಾರೆ. ಇವಲ್ಲದೆ ಸುಮಾರು ೨೦ ಗೊತ್ತುವಳಿಗಳೂ ಸಭೆಯ ಮುಂದೆ ಬರುವವು ಇವೆ. ಮಾರಾಟಕರ ರದ್ದುಗೊಳಿಸಬೇಕು ಹುಬ್ಬಳ್ಳಿಯಲ್ಲಿ ಉರ್ದು ಟ್ರೇನಿಂಗ್ ಕಾಲೇಜು ತೆರೆಯಬೇಕು, ಆಂಗ್ಲೋ-ಉರ್ದು ಹೆಣ್ಣುಮಕ್ಕಳ ಹಾಯಸ್ಕೂಲ ಮತ್ತು ಹಾಸ್ಟೆಲ್ ತೆರೆಯಬೇಕು, ಮುಲ್ಕೀ ಖಾತೆಯಿಂದ ನ್ಯಾಯಖಾತೆಯನ್ನು ಬೇರ್ಪಡಿಸಬೇಕು ಎಂಬ ಗೊತ್ತುವಳಿಗಳನ್ನು ಕಾರವಾರದ ಜ. ಶಮಸುದ್ದೀನರು ಮಂಡಿಸುವರು. ಶ್ರೀ ಇಳಕಲ್ಲರು ವಿಜಾಪುರ ಜಿಲ್ಹೆಯಲ್ಲಿ ನೀರಾವರಿ ಯೋಜನೆಯನ್ನು ಕೈಕೊಳ್ಳಬೇಕೆಂದು ಗೊತ್ತುವಳಿ ಕಳಿಸಿದ್ದಾರೆ.

ಮಸೂದೆಗಳು

ಹೊಲ ಸಾಗುವಳಿ, ಬಡ್ಡಿ ವ್ಯವಹಾರ ನಿಯಂತ್ರಣ, ಲಂಚಗುಳಿತನವನ್ನು ಕ್ರಿಮಿನಲ್ ಪ್ರೊಸೀಜರ ಕೋಡಿನಲ್ಲಿ ಸೇರುವ ಕಾಗ್ನಿಜಬಲ್ [ಅಂದರೆ ವಾರಂಟಿಲ್ಲದೆ ಬಂಧಿಸಬರುವ] ಅಪರಾಧವನ್ನಾಗಿ ಮಾಡುವ ಮಸೂದೆ ಮೊದಲಾದವುಗಳ ಚರ್ಚೆಗಳ ವರದಿಯನ್ನು ಕಳೆದವಾರ ಸಂಕ್ಷೇಪವಾಗಿ ಕೊಡಲಾಗಿದೆ. ಗೃಹ ಮತ್ತು ಕಂದಾಯ ಮಂತ್ರಿಗಳಾದ ಮುರಾರಜಿಯವರು ತಮ್ಮ ತೀಕ್ಷ್ಣವಾಗ್ಬಾಣಗಳಿಂದ ವಿರೋಧಿಗಳ ಟೀಕೆಗಳನ್ನು ಹಾರಿಸಿಬಿಡುತಿರುವದರಿಂದ ಮಸೂದೆಗಳ ಚರ್ಚೆ ಊಹಿಸಿದಷ್ಟು ಸಮಯವನ್ನು ತೆಗೆದುಕೊಳ್ಳುತ್ತ ಇಲ್ಲ ಲಂಚಗುಳಿತನವನ್ನು ಕಾಗ್ನಿಜಬಲ್ ಅಪರಾಧವಾಗಿ ಮಾಡುವ ಮಸೂದೆಯ ಚರ್ಚೆಯಲ್ಲಿ ಇದರಿಂದ ಪೋಲೀಸರ ಅಧಿಕಾರವನ್ನು ಬೆಳಸಿದಂತಾಗುವದೆಂದು ಮುಸ್ಲಿಂಲೀಗಿನವರು ಎಚ್ಚರಿಸಿದಾಗ ವಾರಂಟಿನ ಸಲುವಾಗಿ ಮ್ಯಾಜಿಸ್ಟ್ರೇಟರ ಕಡೆ ಪೋಲೀಸರು ಹೋದಾಗಲೆ ಕೆಲ ವೇಳೆ ಮ್ಯಾಜಿಸ್ಟ್ರೇಟರಿಂದಲೆ ಗುಟ್ಟು ಹೊರಬಿದ್ದ, ತೊಂದರೆಯಾದ ಸಂಗತಿಯನ್ನು ಮುರಾರಜಿಯವರು ಉಲ್ಲೇಖಿಸಿ ಪೋಲೀಸರ ಅಧಿಕಾರವನ್ನು ಹೆಚ್ಚಿಸದೆ ಲಂಚಗುಳಿತನವನ್ನು ಮುರಿಯುವದಸಾಧ್ಯವೆಂದು ವಿರೋಧಿಗಳನ್ನು ನಿರುತ್ತರರನ್ನಾಗಿ ಮಾಡಿದರು. ಬಡ್ಡಿ ವ್ಯವಹಾರ ನಿಯಂತ್ರಣದ ಮಸೂದೆಯ ಚರ್ಚೆ ನಡೆದಾಗ ಲೀಗ್ ಸಭಾಸದರು ಬಡ್ಡಿ ವ್ಯವಹಾರವನ್ನೆ ಪೂರ್ಣವಾಗಿ ರದ್ದು ಮಾಡಿ ಬಿಡಬೇಕೆಂದರು. ಈ ಮಸೂದೆಯ ಮೇಲಿನ ದೀರ್ಘ ಚರ್ಚೆಯಲ್ಲಿ ೨೦ ಜನ ಸದಸ್ಯರು ಭಾಗವಹಿಸಿದ್ದರು. ಕರ್ನಾಟಕ ಸದಸ್ಯರಾದ ಶ್ರೀ ಅಂದಾನೆಪ್ಪ ದೊಡ್ಡಮೇಟಿಯವರು ಕನ್ನಡದಲ್ಲಿ ಮನನೀಯ ಭಾಷಣ ಮಾಡಿ ತಾವೂ ಸಾವುಕಾರರಿರುವದರಿಂದ ಸಾವುಕಾರರು ರೈತರನ್ನು ಹೇಗೆ ಹೀರುತ್ತಿರುವರೆಂಬದು ತಮಗೆ ಚನ್ನಾಗಿ ಗೊತ್ತಿದೆಯೆಂದು ಹೇಳಿ ಹಳ್ಳಿಗಳಲ್ಲಿ ವೈಯಕ್ತಿಕ ಸಾವುಕಾರರು ಬಡ್ಡಿ ವ್ಯವಹಾರ ಮಾಡುವದನ್ನು ನಿಲ್ಲಿಸಿಬಿಡಬೇಕೆಂದು ಪ್ರತಿಪಾದಿಸಿದರು. ಮಂತ್ರಿ ಮುರಾರಜಿಯವರು ತಮ್ಮ ಉತ್ತರದಲ್ಲಿ ಬಡ್ಡಿ ವ್ಯವಹಾರವನ್ನು ಒಡನೆ ನಿಲ್ಲಿಸಿಬಿಡಬೇಕಾದರೆ ಸಾಮಾಜಿಕ ಹಾಗು ಸರಕಾರದ ಸ್ವರೂಪವೇ ಬದಲಾಗಬೇಕಾಗುವದೆಂದೂ ಕರಾಚಿ ಕಾಂಗ್ರೆಸ್ಸಿನಲ್ಲಿ ಬಡ್ಡಿವ್ಯವಹಾರವನ್ನು ನಿಲ್ಲಿಸಬೇಕೆಂದು ಆದ ಗೊತ್ತುವಳಿಯನ್ನು ಕಾರ್ಯರೂಪಕ್ಕೆ ತರುವ ಮೊದಲನೆ ಹೆಜ್ಜೆಯಿದೆಂದೂ ಸಾರಿದರು. ಸಹಕಾರಿ ಸಂಘಗಳ ಮುಖಾಂತರವೇ ಹಳ್ಳಿಗಳಲ್ಲಿ ಸಾಲ ಕೊಡಲಾಗುವದೆಂದು ಅವರು ತಿಳಿಸಿದರು. ಮಸೂದೆಯ ಪ್ರಥಮ ವಾಚನ ಮುಗಿದಿದೆ.

ಹೊಲ ಸಾಗುವಳಿ ತಿದ್ದುಪಡಿ ಮಸೂದೆಗೆ ಬಂದಿದ್ದ ತಿದ್ದುಪಡಿಗಳಲ್ಲಿ ನಾಲ್ಕು ಮಾತ್ರ ಅಂಗೀಕರಿಸಲ್ಪಟ್ಟವು. ಜಮೀನದಾರರಿಗೆ ಹಾನಿಯಾಗದಂತೆ ಒಕ್ಕಲಿನ ಹಿತ ಸಾಧಿಸಬೇಕೆಂಬ ಕೇರವಾಡದ ಠಾಕೂರ ಸಾಹೇಬರ ಒತ್ತಾಯಕ್ಕೆ ಉತ್ತರ ಕೊಡುತ್ತ ಮುರಾರಜಿಯವರು ಬಹು ಜನರ ಹಿತವಾಗಬೇಕಾದರೆ ಕೆಲವರ ಅಹಿತವಾಗಿಯೆ ತೀರುವದೆಂದರು. ಜಿರಾಯತ ಮತ್ತು ಬಾಗಾಯತ ಭೂಮಿಗಳಿಗೆ ಪರಮಾವಧಿಯೆಂದರೆ ಬೆಳೆಯ ಒಂದು ಮೂರಾಂಶ ಹಾಗು ಒಂದು ನಾಲ್ಕಾಂಶದಷ್ಟು ಲಾವಣಿ ಗೊತ್ತುಪಡಿಸಬೇಕೆಂಬ ಕಲಮಿನ ಚರ್ಚೆ ಈಗ ನಡೆದಿದ್ದು ಲೀಗ್ ಮತ್ತು ಹಿಂದು ಮಹಾಸಭಾ ಸದಸ್ಯರು ಈ ಪರಮಾವಧಿಯನ್ನು ಹೆಚ್ಚಿಸಬೇಕೆಂದು ಒತ್ತಾಯಪಡಿಸಿದ್ದಾರೆ. ಕರ್ನಾಟಕ ಸದಸ್ಯರಾದ ಶ್ರೀ ದಳವಾಯಿ, ಗಾಂವಕರ, ಕುಟ್ರಿಯವರು ಸರಕಾರದ ಸೂಚನೆಗೆ ಬೆಂಬಲವಿತ್ತಿರುವರು. ಇದರ ಚರ್ಚೆ ಇನ್ನೂ ಮುಗಿದಿಲ್ಲ

ಅಮಳನೇರ ಗೋಳಿಬಾರು

ಅಮಳನೇರ ಜವಳಿ ಕೂಲಿಕಾರರ ಮೇಲೆ ಗೋಳಿಬಾರು ಮಾಡಿದ್ದರ ಬಗ್ಗೆ ಕಮ್ಯುನಿಸ್ಟ ಸದಸ್ಯರಾದ ಶ್ರೀ ಎಸ್. ಎ. ಡಾಂಗೆಯವರು ತಂದ ನಿಲುವಳಿಯ ಬಗ್ಗೆ ನಡೆದ ಚರ್ಚೆ ಬಿಸಿಬಿಸಿಯಾಗಿತ್ತು. ಶ್ರೀ ಡಾಂಗೆಯವರು ತಮ್ಮ ಭಾಷಣದಲ್ಲಿ ಒಳ್ಳೆ ಮನಮರುಗುವ ರೀತಿಯಲ್ಲಿ ಅಮಳನೇರದಲ್ಲಿ ನಡೆದ ಗೋಳಿಬಾರು ಮತ್ತು ಅದರಿಂದಾದ ಪ್ರಾಣಹಾನಿಯ ಬಗ್ಗೆ ಭಾಷಣವಿತ್ತು ಪೋಲೀಸರ ವರ್ತನೆಯನ್ನು ಖಂಡಿಸಿದರು. ಕಮ್ಯುನಿಸ್ಟರ ಈ ನಿಲುವಳಿಗೆ ಹಿಂದೂ ಮಹಾಸಭಾ ಪಕ್ಷದವರೂ ಲೀಗ ಪಕ್ಷದವರೂ ಸೇರಿಯೇ ಬೆಂಬಲವಿತ್ತರು. ಆದರೆ ಮುರಾರಜಿಯವರು ಕಮ್ಯುನಿಸ್ಟ-ಹಿಂದೂ ಸಭಾ-ಮುಸ್ಲಿಂಲೀಗುಗಳು "ಪವಿತ್ರ ಒಗ್ಗಟ್ಟ"ವಾಗಿ ಸರಕಾರವನ್ನು ವಿರೋಧಿಸಲು ಮುಂದಾದುದಕ್ಕೆ ಆಶ್ಚರ್ಯಪಟ್ಟು ಈ ದುರಂತಕ್ಕೆ ಹೇಗೆ ಕಮ್ಯುನಿಸ್ಟರ ಉದ್ರೇಕಕರ ಮತ್ತು ಹಿಂಸಾತ್ಮಕ ಪ್ರಚೋದನೆಯೆ ಹೇಗೆ ಕಾರಣವಾಯಿತು, ಹೇಗೆ ಪೋಲೀಸರು ಕೂಲಿಕಾರರು ನಡಸಿದ ಹಿಂಸೆಯನ್ನು ತಡೆಯಲು ಗೋಳಿಬಾರು ಮಾಡಿದರೆಂಬುದಾಗಿ ವಿವರಿಸಿದಾಗ ಡಾಂಗೆಯವರ ಭಾಷಣದ ಪರಿಣಾಮವೆಲ್ಲ ಹಾರಿಹೋಯಿತು ಅವರ ನಿಲುವಳಿ ಸೂಚನೆ ಬಿದ್ದುಹೋಯಿತೆಂದು ಹೇಳುವ ಕಾರಣವೇ ಇಲ್ಲ.

೫ ವರ್ಷಗಳಲ್ಲಿ ಆಹಾರ ವಿಷಯದಲ್ಲಿ ಸ್ವಾವಲಂಬನೆ

ಮುಂಬಯಿ ಪ್ರಾಂತದ ಬಗ್ಗೆ ಮಿನೂ ಮಸಾನಿಯವರ ಅಭಿಪ್ರಾಯ

ಇನ್ನೈದು ವರ್ಷಗಳಲ್ಲಿ ಮುಂಬಯಿ ಪ್ರಾಂತ ಆಹಾರ ವಿಷಯದಲ್ಲಿ ಸ್ವಾವಲಂಬಿಯಾಗಬಲ್ಲದೆಂದು ತಮಗೆ ಖಚಿತವಾಗಿದೆಯೆಂಬ ಅಭಿಪ್ರಾಯವನ್ನು ಕೇಂದ್ರ ಶಾಸನಸಭಾ ಸದಸ್ಯರೂ ಮುಂಬಯಿ ಪ್ರಾಂತಿಕ ಜನತಾ ಆಹಾರ ಮಂಡಲದ ಅಧ್ಯಕ್ಷರೂ ಆದ ಶ್ರೀ ಮಿನೂ ಮಸಾನಿಯವರು ಮಂಡಲದ ವಾರ್ಷಿಕ ಸಭೆಯಲ್ಲಿ ಹೇಳಿದ್ದಾರೆ. ಸಾಮಾನ್ಯ ಪರಿಸ್ಥಿತಿಯಲ್ಲಿ ಈ ಪ್ರಾಂತದಲ್ಲಿ ನೂರಕ್ಕೆ ಹದಿನೈದರಷ್ಟು ಆಹಾರ ಕೊರತೆಯಿದೆ. ಆದರೆ ೧೫ ವರ್ಷಗಳಲ್ಲಿ ಪ್ರಾಂತದ ಆಹಾರೋತ್ಪಾದನೆಯನ್ನು ಇಮ್ಮಡಿ ಮಾಡಬಹುದೆಂದು ಹದಿನೈದು ವರ್ಷಗಳ ಮುಂಬಯಿ ಯೋಜನೆಯಲ್ಲಿಯೂ ಪರೀಘಾಟ ವರದಿಯಲ್ಲಿಯೂ ಅಭಿಪ್ರಾಯಪಡಲಾಗಿದೆ. ಆದ್ದರಿಂದ ನಮ್ಮ ಕೊರತೆಯನ್ನು ೫ ವರ್ಷಗಳಲ್ಲಿ ತುಂಬಿಕೊಳ್ಳಬಹುದೆಂಬ ವಿಶ್ವಾಸವನ್ನು ಅವರು ವ್ಯಕ್ತಗೊಳಿಸಿದರು.

ಮುಂಬಯಿ ಪ್ರಾಂತಕ್ಕೆ ಈ ವರ್ಷದ ಕೊನೆಯ ವರೆಗೆ ೨೩೪೦೦೦ ಟನ್ ಆಹಾರ ಕೊರತೆ ಬೀಳುತಿದೆ. ಕೇಂದ್ರ ಸರಕಾರದವರು ಹೊರಗಿನಿಂದ ಆಹಾರವನ್ನು ಆಯಾತ ಮಾಡಲು ತಪ್ಪಿರುವದರಿಂದ ಈಗಿರುವ ೧೨ ಔಂಸ್ ಸೀದಾ ಪ್ರಮಾಣಕ್ಕೆ ಕೂಡ ಧಕ್ಕೆಯೊದಗುವಂತಾಗಿದೆ. ಸದ್ಯದ ಸೀದಾ ಪ್ರಮಾಣವನ್ನು ಕಾಯ್ದುಕೊಳ್ಳುವಂತೆ ಮತ್ತು ಬರಗಾಲವನ್ನು ತಡೆಯುವಂತೆ ಕೇಂದ್ರ ಸರಕಾರದವರು ಒಡನೆ ತೀಕ್ಷ್ಣ ಉಪಾಯಗಳನ್ನು ಕೈಕೊಳ್ಳಬೇಕೆಂದು ಅವರು ಆಶಿಸಿದರು.

ಹೆಚ್ಚು ಬೆಲೆಯ ಆಹಾರವನ್ನು ಕೊಳ್ಳಬಲ್ಲ ಸಿರಿವಂತರು ತಮ್ಮ ಸೀದಾವನ್ನು ಪಡೆದುಕೊಳ್ಳದೆ ಬಡವರಿಗೆ ಬಿಟ್ಟುಕೊಡಬೇಕೆಂಬ ಪ್ರಚಾರವನ್ನು ಜನತಾ ಆಹಾರ ಮಂಡಲದವರು ಮಾಡಿದ್ದರೂ ಈ ವರೆಗೆ ಹೀಗೆ ಔದಾರ್ಯ ತೋರಲು ೧೦೦೦ ಜನರು ಮಾತ್ರ ಮುಂದೆ ಬಂದಿದ್ದಾರೆಂದು ಹೇಳಿ ಮಸಾನಿಯವರು ಸೀದಾ ಪ್ರಮಾಣವನ್ನು ಇನ್ನೂ ಕತ್ತರಿಸಬೇಕಾದ ಪರಿಸ್ಥಿತಿ ಬಂದರೆ ೫೦೦೦ ಕ್ಕಿಂತ ಹೆಚ್ಚಿನ ಉತ್ಪನ್ನವುಳ್ಳವರ ಸೀದಾವನ್ನೇ ಅರ್ಧದಷ್ಟು ಕಡಿಯಬೇಕೆಂದು ಅಭಿಪ್ರಾಯ ಪಟ್ಟರು.

ಮುಂಬಯಿ ಮುಖ್ಯ ಮಂತ್ರಿ ಶ್ರೀ ಖೇರರು ಸಭೆಯ ಪ್ರಾರಂಭ ಭಾಷಣವನ್ನು ಮಾಡಿದರು. ಇನ್ನು ಕೆಲ ತಿಂಗಳು ಪ್ರಾಂತದ ಆಹಾರ ಪರಿಸ್ಥಿತಿ ಕಠಿನವಾಗಿರುವದೆಂದು ತಿಳಿಸಿ ಧಾನ್ಯದ ಎತ್ತುವಳಿಯ ಕಾರ್ಯವನ್ನು ಸರಕಾರ ದಕ್ಷತೆಯಿಂದ ಮಾಡಬೇಕಾಗಿದೆ. ಹಾಗೆ ಮಾಡಿದರೆ ಮಾತ್ರ ಕೇಂದ್ರ ಸರಕಾರದಿಂದ ಧಾನ್ಯಸಹಾಯ ಕೇಳಲು ತಮಗೆ ಅಧಿಕಾರ ಬರುವದು. ಹೆಚ್ಚು ಆಹಾರ ಬೆಳೆಯಿಸುವದು ಕಠಿನವಾಗಿದ್ದರೂ ಎದೆಗುಂದದೆ ಸರಕಾರ ಪ್ರಯತ್ನಿಸುತಿದೆ. ಈ ಆಹಾರ ಮಂಡಲದವರು ಆಹಾರ ವಿಷಯವನ್ನಭ್ಯಸಿಸಿ ಸರಕಾರಕ್ಕೆ ಸಹಾಯ ಸಲಹೆ ನೀಡಬೇಕು ಮತ್ತು ಲಂಚಗುಳಿ ಕಳ್ಳಪೇಟೆಗಾರರನ್ನು ಬಯಲಿಗೆಳೆಯಲು ಜನರಿಗೆ ಕಲಿಸಿಕೊಡಬೇಕು ಎಂಬುದಾಗಿ ಅವರು ಕೇಳಿಕೊಂಡರು.

ಕೇಂದ್ರ ಸರಕಾರದವರು ಹೊರಗಿನಿಂದ ಆಹಾರ ತರಿಸುವ ಪ್ರಯತ್ನಮಾಡಿಲ್ಲ ಮಾತ್ರವಲ್ಲ ಹಿಂದುಸ್ತಾನದ ಉಳಿಕೆ ಪ್ರದೇಶಗಳಿಂದ ಕೊರತೆ ಪ್ರದೇಶಗಳಿಗೆ ಪೂರೈಸುವ ಕೆಲಸವನ್ನು ಮಾಡಿಲ್ಲವೆಂದು ಹೇಳಿ ಬೇರೆ ೨ ಸಿಂಧ ಪಂಜಾಬಗಳು ಮುಂಬಯಿಗೆ ಈಗ ಧಾನ್ಯವನ್ನು ಸಾಲ ಕೊಡಬಲ್ಲವೆಂದೂ ಪರಿಸ್ಥಿತಿ ಸುಧಾರಿಸಿದ ನಂತರ ಅದನ್ನು ತಿರುಗಿ ಕೊಡಬಹುದೆಂದೂ ಸೂಚಿಸಿದರು. ನಡುಗಾಲ ಸರಕಾರ ಸ್ಥಾಪಿಸಲ್ಪಟ್ಟಿರುವದರಿಂದ ಪರಿಸ್ಥಿತಿ ಸುಧಾರಿಸಬಹುದೆಂಬ ಆಶೆಯನ್ನು ಅವರು ವ್ಯಕ್ತಗೊಳಿಸಿದರು.

ಸಭೆಯಲ್ಲಿ ಪಾಸಾದ ಗೊತ್ತುವಳಿಯಲ್ಲಿ ಪ್ರಾಂತದ ಆಹಾರ ಪರಿಸ್ಥಿತಿಯ ಬಗ್ಗೆ ಚಿಂತೆ ವ್ಯಕ್ತಗೊಳಿಸಲ್ಪಟ್ಟು ಈಗಿರುವ ೧೧ ಔಂಸ ಸೀದಾ ಪ್ರಮಾಣವನ್ನು ಆದಷ್ಟು ಬೇಗ ೧೬ ಔಂಸಿಗೇರಿಸಬೇಕೆಂದು ಸೂಚಿಸಲಾಗಿದೆ. ಕೇಂದ್ರ ಸರಕಾರ ಆಹಾರ ಆಯಾತದ ಪ್ರಯತ್ನ ಮಾಡಬೇಕೆಂದೂ ಒತ್ತಾಯಗೊಳಿಸಲಾಗಿದೆ.

ಸಿಂಧ ಶಾಸನಸಭೆಯ ವಿಸರ್ಜನೆ

ಹೊಸ ಚುನಾವಣೆ

ಕರಾಚಿ ತಾ. ೧೨— ಸಿಂಧ ಶಾಸನ ಸಭೆಯ ಅಧ್ಯಕ್ಷರೂ ಉಪಾಧ್ಯಕ್ಷರೂ ರಾಜೀನಾಮೆ ಕೊಟ್ಟಿದ್ದರಿಂದಲೂ ಅಧ್ಯಕ್ಷರ ಕಾರ್ಯ ನಿರ್ವಹಿಸಲು ಯಾರೂ ಮುಂದೆ ಬಾರದ್ದರಿಂದಲೂ ಅಸ್ಥಿರ ಪರಿಸ್ಥಿತಿ ಉದ್ಭವವಾಗಿದ್ದರಿಂದ ಗವ್ಹರ್ನರರು ಶಾಸನ ಸಭೆ ವಿಸರ್ಜಿಸಲು ನಿಶ್ಚಯಿಸಿದ್ದಾರೆ. ಈ ಸಂಬಂಧದ ಅವಶ್ಯಕ ಪ್ರಕಟನೆ ಕೂಡಲೆ ಹೊರಡಿಸಲ್ಪಟ್ಟು ಸಾರ್ವತ್ರಿಕ ಚುನಾವಣೆ ಜರುಗಿಸಲಾಗುವದು ಎಂದು ಸರಕಾರಿ ಪ್ರಕಟನೆ ಹೊರಟಿದೆ.

ಈ ನಿರ್ಣಯಕ್ಕೆ ಗವ್ಹರ್ನರರು ಬರಲು ಸದ್ಯದ ಶಾಸನ ಸಭೆಯಿಂದರಲ್ಲಿ ಸ್ಥಿರವಾದ ಮಂತ್ರಿಮಂಡಳ ಸ್ಥಾಪಿಸುವದು ಶಕ್ಯವಿಲ್ಲದಿರುವದೂ ಒಂದು ಕಾರಣವಿದೆ. ಈ ಬಗ್ಗೆ ಅನೇಕ ಸಲ ಪ್ರಯತ್ನ ಮಾಡಲಾಯಿತು. ಸಮ್ಮಿಶ್ರ ಸರಕಾರ ಸ್ಥಾಪಿಸುವ ಪ್ರಯತ್ನವೂ ಯಶಸ್ವಿಯಾಗಲಿಲ್ಲ ಎಂದು ಅದರಲ್ಲಿ ಕಾಣಿಸಲಾಗಿದೆ.

ಮಹಾತ್ಮರಿಗೆ ೭ ಲಕ್ಷ ೮೦ ಸಾವಿರ ರೂ. ಹಮ್ಮಿಣಿ

ಸಂಯುಕ್ತಪ್ರಾಂತದ ನಿರ್ಧಾರ

ಸಂಯುಕ್ತಪ್ರಾಂತದ ಅ. ಭಾ. ಚರಖಾ ಸಂಘ ಶಾಖೆಯವರು ಮಹಾತ್ಮರ ೭೮ ನೇ ಜನ್ಮ ದಿವಸದ ದಿವಸ ಮಹಾತ್ಮಾ ಗಾಂಧಿಯವರಿಗೆ ೭ ಲಕ್ಷ ೮೦ ಸಾವಿರ ರೂಪಾಯಿ ಹಮ್ಮಿಣಿ ಹಾಗು ಅಷ್ಟೇ ನೂಲಿನ ಲಡಿಗಳನ್ನು ಅರ್ಪಿಸತಕ್ಕವರಿದ್ದಾರೆ; ಅವರು ಈ ಹಣದಲ್ಲಿ ೧೦೦ ಕ್ಕೆ ೭೫ ರಷ್ಟನ್ನು ಈ ಹಣವು ಕೂಡಿದ ಜಿಲ್ಹೆಗಳಲ್ಲಿ ವಿನಿಯೋಗಿಸಲು ಒಪ್ಪಿದ್ದಾರೆ.

ಗಾಂಧಿ ಜಯಂತಿಯು ತಾ ೨೨ ಸಪ್ಟೆಂಬರದಿಂದ ಸುರುವಾಗುವದು. ಈ ವರ್ಷ ಜಯಂತಿಗೆ ವಿಶೇಷ ಮಹತ್ವ ಪ್ರಾಪ್ತವಾಗಿದೆ. ಕೇವಲ ೨೫ ವರ್ಷದ ಅವಧಿಯಲ್ಲಿ ಮಹಾತ್ಮರು ದೇಶಕ್ಕೆ ಸ್ವಾತಂತ್ರ್ಯೋದಯ ತೋರಿಸಿರುವರು, ಈ ವರ್ಷವು ಇಡೀ ದೇಶಕ್ಕೆ ಆನಂದದ ವರ್ಷವಾಗಿದ್ದು ಅದರ ಶ್ರೇಯವು ಮಹಾತ್ಮರಿಗೇ ಸಲ್ಲುವದು ಆದ್ದರಿಂದ ಈ ಜಯಂತಿಯನ್ನು ಭೂಷಣಪ್ರದವಾಗಿ ಆಚರಿಸುವದು ಪ್ರತಿಯೊಬ್ಬನ ಕರ್ತವ್ಯವಿದೆ.

ನಡುಗಾಲ ಸರಕಾರದ ಸ್ಥಾಪನೆಯ ನಂತರ

೪ನೇ ಪುಟದಿಂದ ಮುಂದರಿದುದು

ಸಾಯಲು ಸಿದ್ಧರಿರುವೆವು. ಬ್ರಿಟಿಶರ ಕೈಯಿಂದ ಭಾರತವನ್ನು ಕಸಿದುಕೊಳ್ಳಲು ನೀವು ಒಪ್ಪಿದರೆ ಹಿಂದುಗಳೂ ಕಾಂಗ್ರೆಸ್ಸೂ ನಿಮಗೆ ಪಾಕಿಸ್ತಾನ ಕೊಡುವಂತೆ ನಾನು ಮಾಡುವೆನು. ಹೀಗಾದರೆ ನಾನು ನಿಮ್ಮೊಂದಿಗೆ ಸೇರಿ ಕೊನೆಯ ವರೆಗೂ ಹೋರಾಡಲು ಸಿದ್ಧನಿರುವೆ. ಎಂದು ಮುಖ್ಯವಾಗಿ ಬರೆದಿರುವರು. ಮುಸಲ್ಮಾನರೂ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತಿರುವರು, ಹಿಂದುಗಳಷ್ಟೇ ಸ್ವಾತಂತ್ರ್ಯ ಪ್ರೇಮ ಮುಸಲ್ಮಾನರಿಗಿದೆಯೆಂದು ಮುಂತಾಗಿ ಮುಸ್ಲಿಂಲೀಗಿನವರು ಜಂಭ ಕೊಚ್ಚಿಕೊಳ್ಳುವುದುಂಟು. ಅಂದಬಳಿಕ ಪಾಕ್ಸರ ಧುರೀಣರು ಹೇಳಿದಂತೆ ಜಿನ್ನಾರು ಮೊದಲು ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸಲಿ.

ನೈಲ ನದಿ ಮಹಾಪೂರಕ್ಕೂ ಅಟಂ ಬಾಂಬಿಗೂ ಸಂಬಂಧವಿಲ್ಲ

ಬಿಕಿನಿಯಲ್ಲಾದ ಅಟಂ ಬಾಂಬಿನ ಪ್ರಯೋಗದಿಂದ ನೈಲ ನದಿಗೆ ಮಹಾಪೂರ ಬಂದಿತೆಂಬ ಈಜಿಪ್ತದ ಓರ್ವ ಎಂಜಿನಿಯರರ ಅಭಿಪ್ರಾಯವನ್ನು ಖಂಡಿಸುತ್ತ ವಿಲಸನ್ ಕಾಲೇಜಿನ ಪ್ರಾಧ್ಯಾಪಕರೂ ವಿಜ್ಞಾನಿಗಳೂ ಆದ ಡಾ. ಎಚ್. ಜೆ. ಟೈಲರರು ಈ ರೀತಿ ಹೇಳಿದರು. ಅಬಿಸೀನಿಯಾದಲ್ಲಿ ಆದ ಅತಿವೃಷ್ಟಿಯಿಂದ ನೈಲಕ್ಕೆ ಮಹಾಪೂರ ಬಂದಿರಬೇಕು. ಅದಕ್ಕೂ ಅಟಂ ಬಾಂಬಿನ ಪ್ರಯೋಗಕ್ಕೂ ಯಾವ ಸಂಬಂಧವಿರಲಾರದು.

ಬೆಂಗಳೂರು-ಮೈಸೂರು

ಮೈಸೂರು ನಗರದ ವಿದ್ಯಾರ್ಥಿ ಕಾಂಗ್ರೆಸ್ಸಿನ ಮಹಾಸಭೆಯಲ್ಲಿ (ತಾ. ೬) ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ನೆಹರೂ ಸರಕಾರವನ್ನು ಅಭಿನಂದಿಸುವ ಮತ್ತು ಮೈಸೂರಿನಿಂದ ಘಟನಾ ಸಮಿತಿಗೆ ಪ್ರಜಾನಿಯುಕ್ತರನ್ನೇ ಕಳಿಸಬೇಕೆಂದು ಕೇಳಿಕೊಳ್ಳುವ ಗೊತ್ತುವಳಿಗಳಾದವು. ಕಮ್ಯುನಿಸ್ಟ ಪಕ್ಷದ ಆಶ್ರಯದಲ್ಲಿ ಟೌನ್‌ಹಾಲ ಮೈದಾನದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿಯೂ ಮೈಸೂರಿಂದ ಘಟನಾ ಸಮಿತಿಗೆ ಪ್ರಜಾಪ್ರತಿನಿಧಿಗಳನ್ನೇ ಕಳಿಸಬೇಕೆಂದು ಪ್ರತಿಪಾದಿಸಲಾಯಿತು.

ಮನೆಗಳ ದಲ್ಲಾಳಿಗಳೆಂದು ಸೋಗು ಹಾಕಿ ಹಲವರಿಗೆ ಒಟ್ಟು ೪೦ ಸಾವಿರ ರೂಪಾಯಿ ಮೋಸ ಮಾಡಿದರೆಂಬ ಆರೋಪದಿಂದ ಬೆಂಗಳೂರು ನಗರ ಪೋಲೀಸ ಇನಸ್ಪೆಕ್ಟರರು ಖಲಂದರ ಬೇಗ್ ಹಾಗು ಆರು ಮಂದಿ ಇತರರನ್ನು ಬಂಧಿಸಿದ್ದಾರೆ. ಆಸ್ತಿಗೆ ಸಂಬಂಧಿಸಿದ ಕೃತಕ ಕಾಗದ ಪತ್ರಗಳನ್ನು ಸೃಷ್ಟಿಸಿ ಅವುಗಳ ಬಲದಿಂದ ಮನೆ ಆಸ್ತಿಕೊಳ್ಳಬೇಕೆಂಬವರನ್ನು ಮೋಸಗೊಳಿಸಿ ದಸ್ತೈವಜುಗಳನ್ನು ಅವರು ನೋಂದು ಮಾಡುತಿದ್ದರೆಂದು ಆಪಾದಿಸಲಾಗಿದೆ.

ಶಿಕ್ಷಣ ಖಾತೆಯವರು ಮೈಸೂರು ಸಂಸ್ಥಾನದಲ್ಲಿ ೧೯೪೬—೪೭ ರಲ್ಲಿ ೪೦೦ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸುವರು.

ಬೆಂಗಳೂರು ದಂಡಿನ ವಿ. ಕೃಷ್ಣಮೂರ್ತಿ ಮತ್ತು ಬಿ. ಎಲ್. ಅಶ್ವತ್ಥನಾರಾಯಣ ಎಂಬವರು ಕುಂಬಾರ ಪೇಟೆಯ ಶಹಜಾದಬಿ ಎಂಬ ೧೩॥ ವರ್ಷದ ಹುಡುಗಿಯನ್ನು ಅಪಹರಿಸಿಕೊಂಡೊಯ್ದರೆಂದು ನಗರ ನ್ಯಾಯಸ್ಥಾನದಲ್ಲಿ ಕಟ್ಟಳೆ ಹೂಡಲ್ಪಟ್ಟಿದೆ.

ಅಕ್ಟೋಬರ ೧೯—೨೦ ಕ್ಕೆ ಬೆಂಗಳೂರು ನಗರದಲ್ಲಿ ಜರಗಲಿರುವ ಮೈಸೂರು ಕಾಂಗ್ರೆಸ್ ಮಹಾಧಿವೇಶನಕ್ಕೆ ಮೌ. ಅಬುಲ ಕಲಂ ಆಜಾದರನ್ನು ಉದ್ಘಾಟಕರಾಗಲು ಕರೆಸಬೇಕೆಂದು ಸ್ವಾಗತ ಸಮಿತಿ ತೀರ್ಮಾನಿಸಿದೆ.

ಬೆಂಗಳೂರುನಗರ ಮತ್ತು ದಂಡಿನಲ್ಲಿ ವಿದ್ಯುತ್ ಟ್ರಾಲಿಬಸ್‌ಗಳ ವ್ಯವಸ್ಥೆಗಾಗಿ ೪೮ ಲಕ್ಷ, ಬೆಂಗಳೂರಿನ ನಿಲ್ದಾಣದಿಂದ ಹೊರಡುವ ಅರ್ಬನ್ (ನಗರ ಭಾಗ) ರೇಲ್ವೆಗಳನ್ನೇರ್ಪಡಿಸಲು ೫೦ ಲಕ್ಷ, ವಿಸರ್ಜನೆ ಹೊಂದಿದ ಸೈನಿಕರಿಗೆ ಉದ್ಯೋಗವನ್ನು ಕಲ್ಪಿಸಲು ಒಂದು ಉದ್ಯೋಗ ವಿನಿಮಯ ಕೇಂದ್ರಕ್ಕಾಗಿ ೧೦೨೦೦೦ ರೂಪಾಯಿಗಳ ಯೋಜನೆಗಳನ್ನು ಅರ್ಥಿಕ ಸಮ್ಮೇಲನದ ಹಣಕಾಸಿನ ಸಮಿತಿ ಸರಕಾರಕ್ಕೆ ಶಿಫಾರಸು ಮಾಡಿದೆ.

ಶ್ರೀ ಜಿ. ಬಿ. ವಿಶ್ವನಾಥ ಮೊದಲಿಯಾರರನ್ನು ಮೈಸೂರು ದಿವಾಣರ ಆಪ್ತಸಹಾಯಕರಾಗಿ ನೇಮಿಸಲಾಗಿದೆ.

ಕಣ್ಣಾನೂರಿನಿಂದ ಮದ್ರಾಸಿಗೆ ತೆರಳುತಿದ ಶ್ರೀಮತಿ ಅರುಣಾ ಅಸಫ ಅಲ್ಲಿಯವರನ್ನು ಬೆಂಗಳೂರು ನಿಲ್ದಾಣದಲ್ಲಿ ಭೆಟ್ಟಿಯಾಗಲು ಹೋಗಿದ್ದ ಕಾರ್ಯಕರ್ತರಿಗೆ ಅವರು ತಾವು ಅಜ್ಞಾತವಾಸದಲ್ಲಿದ್ದಾಗ ಹಲವು ಬಾರಿ ಬೆಂಗಳೂರಿಗೆ ಬಂದುದುಂಟೆಂದೂ ಬೇಗನೆ ಇನ್ನೊಮ್ಮೆ ಇಲ್ಲಿಗೆ ಬಂದು ಕಾಂಗ್ರೆಸ್, ವಿದ್ಯಾರ್ಥಿ ಕಾಂಗ್ರೆಸ್, ಯುವಕ ಕಾಂಗ್ರೆಸ್ ಕಾರ್ಯಕರ್ತರೊಡನೆ ಮುಂದಿನ ಕಾರ್ಯಕ್ರಮವನ್ನು ಚರ್ಚಿಸಲಿರುವದಾಗಿಯೂ ತಿಳಿಸಿದರು.

ವಿಶ್ವಕರ್ನಾಟಕದ ಮೇಲಿನ ನಿರ್ಬಂಧವನ್ನು ಬೇಗನೆ ರದ್ದುಗೊಳಿಸಲಾಗುವದೆಂದು ನಂಬಲರ್ಹವಾದ ಸುದ್ದಿ ಬಂದಿದೆ.

ಬೆಂಗಳೂರು ನಗರದ ಜೈನರು ಶ್ರೀ ಮಹಾವೀರ ಸೇವಾಮಂಡಲದ ಆಶ್ರಯದಲ್ಲಿ ಸಭೆಸೇರಿ ಕಲಕತ್ತಾ ದುರ್ಘಟನೆಯನ್ನು ಖಂಡಿಸಿ ಬಂಗಾಲದ ಸ.ಹರ್ವರ್ದಿ ಮಂತ್ರಿಮಂಡಲವನ್ನು ಕಿತ್ತುಹಾಕಬೇಕೆಂಬ ಮತ್ತು ನೆಹರೂ ಮಂತ್ರಿಮಂಡಲವನ್ನು ಅಭಿನಂದಿಸುವ ಗೊತ್ತುವಳಿಗಳನ್ನು ಮಾಡಿದರು.

ಕೃಷ್ಣರಾಜ ಸಾಗರಕ್ಕೆ ಅನಿರೀಕ್ಷಿತವಾಗಿ ಭೆಟ್ಟಿಕೊಟ್ಟ ದಿವಾಣ್ ರಾಮಸ್ವಾಮಿ ಮುದಲಿಯಾರರು ಅಲ್ಲಿ ಹರಕು ಬಟ್ಟೆಯುಟ್ಟು ನಿಂತಿದ್ದ ದೀನ ಜವಾನನೊಬ್ಬನನ್ನು ಕಂಡು ದುಃಖವುಂಟಾಗಿ ಕೃಷ್ಣರಾಜಸಾಗರದಲ್ಲಿಯ ವೃಂದಾವನದಲ್ಲಿ ವಿದ್ಯುಚ್ಛಕ್ತಿ ಕೆಲಸಗಾರರಿಗೆಲ್ಲರಿಗೂ ಸಮವಸ್ತ್ರ ಪೂರೈಸಬೇಕೆಂದು ಅಜ್ಞೆ ಹೊರಡಿಸಿದ್ದಾರೆಂದು ತಿಳಿಯುತ್ತದೆ.

ಮೈಸೂರು ಸಂಸ್ಥಾನದಲ್ಲಿ ೧೪ ಲಕ್ಷ ಹರಿಜನರಿದ್ದು ೧೦ ಲಕ್ಷಕ್ಕೊಬ್ಬ ಪ್ರತಿನಿಧಿಯ ಲೆಕ್ಕದಲ್ಲಿ ಘಟನಾ ಸಮಿತಿಗೆ ಕಳಿಸುವ ಪ್ರತಿನಿಧಿಗಳಲ್ಲಿ ಒಬ್ಬನಾದರೂ ಹರಿಜನನನ್ನು ಕಳಿಸಬೇಕೆಂದೂ ಪ್ರಾರ್ಥಿಸುವ ಗೊತ್ತುವಳಿಯೊಂದನ್ನು ಸಂಸ್ಥಾನದ ಹರಿಜನ ಬೋಧಕ ಸಂಘದವರು ಪಾಸುಮಾಡಿದ್ದಾರೆ.

ತಮ್ಮ ತಾಯಿಯ ಉಪಚಾರಕ್ಕಾಗಿ ಬೆಂಗಳೂರಲ್ಲಿದ್ದ ಕಾಂಗ್ರೆಸ್ ಕಾರ್ಯಸಮಿತಿ ಸದಸ್ಯರಾದ ಶ್ರೀಮತಿ ಕಮಲಾದೇವಿಯವರು ಕಾಂಗ್ರೆಸ್ ಸಾಮ್ಯವಾದಿಗಳ ಅಸಹಕಾರ ತಪ್ಪಿಸುವದಕ್ಕಾಗಿ ಕಾರ್ಯಸಮಿತಿಯಲ್ಲಿ ಜಯಪ್ರಕಾಶ ನಾರಾಯಣರನ್ನು ತೆಗೆದುಕೊಳ್ಳಲಾಯಿತೆಂಬ ಸುದ್ದಿಯನ್ನು ಅಲ್ಲಗಳೆದು ಕಾಂಗ್ರೆಸ್ ಎಡಬಲ ಪಕ್ಷಗಳಲ್ಲಿ ಅಸಹಕಾರವೆಂದೂ ಇದ್ದಿಲ್ಲವೆಂದು ಸಾರಿರುವರು.

ವಿದೇಶಗಳಿಂದ ಬಂದ ಧಾನ್ಯಗಳಲ್ಲಿ ೨೩ ಸಾವಿರ ಟನ್ ಆಹಾರವನ್ನು ಮೈಸೂರು ಸಂಸ್ಥಾನಕ್ಕೆ ಸಪ್ಟೆಂಬರ ತಿಂಗಳಿಗಾಗಿ ಕೇಂದ್ರ ಸರಕಾರದವರು ಕೊಟ್ಟಿದ್ದಾರೆ.

ಸುಮಾತ್ರಾದ ಒಂದು ಸುಪ್ರಸಿದ್ಧ ಚೀನಿ ಮನೆತನಕ್ಕೆ ಸೇರಿದ ಮಿಲ್ ಟಿಲ್ಲಿ ಓಂಗ್ ಎಂಬವಳು ಹಿಂದೂ ಧರ್ಮವನ್ನು ಸ್ವೀಕರಿಸಿದ್ದು ಬೆಂಗಳೂರಿನ ಶ್ರದ್ಧಾನಂದ ಭವನದಲ್ಲಿ ಮೇಜರ್ ವಿ. ಆರ್. ಕಾಮತ್ ಎಂಬ ಗೌಡ ಸಾರಸ್ವತ ತರುಣನೊಡನೆ ವೈದಿಕ ವಿಧಿಗನುಸಾರವಾಗಿ ಆಕೆಯ ವಿವಾಹ ಜರಗಿತು.



ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ ೧೦

ಮುಂಬಯಿ ಶೇರ ಪೇಟೆ ಕಳೆದವಾರವೆಲ್ಲ ಬಹುಶಃ ಮುಚ್ಚಿಯೆ ಇತ್ತು. ತಾ. ೬ಕ್ಕೆ ಬರೆ ಅರ್ಧ ತಾಸು ತಾ. ೯ಕ್ಕೆ ಎರಡು ತಾಸು ವ್ಯಾಪಾರವಾಗಿತ್ತು. ಈ ಹಿಂದಿನ ದಿನಗಳಲ್ಲಿ ದಂಗೆ ಪರಿಸ್ಥಿತಿಯೆ ಮೊದಲಾದ ಕಾರಣಗಳಿಂದ ಬೆಲೆ ಇಳಿದು ಹೋಗಿತ್ತು. ಇಂದು ಅವು ಇನ್ನಷ್ಟು ಇಳಿದು ಮತ್ತೆ ಸ್ವಲ್ಪ ಸುಧಾರಿಸಿದ್ದರೂ ವ್ಯಾಪಾರ ಮುಗಿದ ನಂತರ ಮತ್ತೆ ಮಾರಾಟ ಮಾಡಲು ಜನರು ನುಗ್ಗಿದ್ದರಿಂದ ಬೆಲೆ ಪುನಃ ಇಳಿದಂತೆ ವರದಿಯಾಗಿದೆ ಟಾಟಾ ಡೆಫರ್ಡ ಪಾಲುಗಳು (ಲಾಭಾಂಶ ಬಿಟ್ಟು) ೩೦೮೫ ರ ವರೆಗೂ ಇಳಿದು ಹೋಗಿ ೩೧೪೪ರಲ್ಲಿ ನಿಂತರೂ ಎರಡೆ ವಾರ ಹಿಂದಿನ ದರಗಳೊಡನೆ ಹೋಲಿಸಿದರೆ ೫೦೦ ರೂಪಾಯಿ ವರೆಗೆ ಕಳೆದುಕೊಂಡಂತಾಗಿದೆ. ಬಾಂಬೆ ಡಾಯಿಂಗ್ ೩೦೦೦ದ ಗುರುತಿಗಿಂತ ಕೆಳಗಿಳಿದು ೨೯೮೦ಕ್ಕೆ ಮುಟ್ಟಿ ೩೦೫೦ ರಲ್ಲಿ ಮುಕ್ತಾಯವಾಯಿತು. ಕೋಹಿನೂರು ೯೯೫ ಕ್ಕೆ ಹೋದರೂ ೧೦೪೨ಕ್ಕೆ ಸುಧಾರಿಸಿತು. ಸ್ವದೇಶಿ ೭೮೦ಕ್ಕಿಳಿದು ೮೨೫ಕ್ಕೆ ಸುಧಾರಿಸಿತು. ಗೋಕಾಕ ೪೧೮ ರಿಂದ ೪೪೪ಕ್ಕೇರಿತು. ಒಟ್ಟಿನ ಮೇಲೆ ಜವಳಿ ಪಾಲುಗಳಿಗೆ ಕೆಲಮಟ್ಟಿಗೆ ಬೆಂಬಲ ದೊರೆತಿತ್ತೆನ್ನಬಹುದು. ಬೇಲಾಪುರ ೩೧೩ರ ವರೆಗಿಳಿದು ೩೨೧ಕ್ಕೆ ಸುಧಾರಿಸಿತು. ಸಿಂಧ್ಯಾ ೫೦-೮-೦ ರಿಂದ ೫೧-೬-೦ಕ್ಕೆ ಸುಧಾರಿಸಿತು. ಬ್ಯಾಂಕ ಪಾಲುಗಳು ಸ್ತಬ್ಧವಾಗಿದ್ದವು. ಸೆಂಟ್ರಲ ಬ್ಯಾಂಕ ೧೩೪ಕ್ಕು, ಇಂಪೀರಿಯಲ್ ಎಫ್. ಪಿ ೨೮೯೫ಕ್ಕೂ, ರಿಜರ್ವ ೧೫೮-೮-೦ಕ್ಕೂ ಇಳಿದು ಬಿಟ್ಟವು.

ಸರಕಾರಿ ಸಾಲ ಪತ್ರಗಳಲ್ಲಿ ವ್ಯಾಪಾರ ಬಹಳ ಕಡಿಮೆಯಾಗಿತ್ತು. ೩॥ ದರದ ಜಿ. ಪಿ. ನೋಟುಗಳು ೧೦೪—೯—೦ ಯಲ್ಲಿಯೂ ೧೯೪೭—೫೦ ರ ೩॥ ದರ ಸಾಲ ೧೦೨—೬—೦ ಯಲ್ಲಿಯೂ ಮುಗಿದವು.

ಚಿನ್ನ—ಬೆಳ್ಳಿ

ಚಿನಿವಾರ ಕಟ್ಟೆಯಲ್ಲಿ ಮಾತ್ರ ಚಿನ್ನದ ದರಗಳು ಪುನಃ ಮುಂದೋಡಿದವು. ತಯಾರಿ ಚಿನ್ನ ೯೭-೧೪-೦ ರಲ್ಲಿದ್ದುದು ಇಂದು ೧೦೦-೧೨-೦ ವರೆಗೂ ಹೋಯಿತು. ವಾಯಿದಾ ಚಿನ್ನ ೯೯-೪-೦ ಬೆಳ್ಳಿ ತಯಾರಿ ೧೬೫-೪-೦ ಮತ್ತು ವಾಯಿದಾ ೧೬೪-೪-೦. ಬೆಳ್ಳಿಗೆ ಅಷ್ಟು ಬೆಂಬಲ ವಿದ್ದಿಲ್ಲ. ಸಾವರೀನ ಬೆಲೆ ೭೦—೮—೦

ಅರಳೆಪೇಟೆ

ಅರಳೆ ಧಾರಣೆ ಸೆಪ್ಟೆಂಬರ ವಾಯಿದೆ ೪೩೦-೦-೦ ರ ವರೆಗಿದ್ದುದು ಇಂದು ೪೨೫ ರಲ್ಲಿ ಮಾರುತಿತ್ತು. ಜನವರಿ ವಾಯಿದೆ ರೂ. ೪೪೫-೦-೦ ರಿಂದ ೪೪೬-೮-೦ ಗೇರಿದೆ. ಮಾರ್ಚ ವಾಯಿದೆ ೪೫೪-೦-೦ ರಲ್ಲಿದೆ. ಸದ್ಯಕ್ಕೆ ಪೇಟೆಯಲ್ಲಿ ಹುರುಪಿಲ್ಲ.

ಸಾಂಗಲಿ ಪೇಟೆ

ಬೆಲ್ಲ ಬಂಗಾಲಿ ಮಣ ರೂ.	೧೪—೧೬
ಅರಿಷಣ ಹೇರು	೮೦-೮೮
ಶೇಂಗಾ ಖಂಡಿ ,,	೯೧-೯೨
ಮೆಣಸಿನಕಾಯಿ ಹೇರು ,,	೧೮೦—೨೦೫
ದೇಶಿ ತಂಬಾಕು ಹೇರು	೧೦೦-೨೦೦
ತಂಬಾಕ ಪಂಢರಪುರಿ ,,	೧೫೦—೨೫೦
ತಂಬಾಕು ಅಕೋಳ (ಹೇರು)	೨೫೦—೩೭೫

ಶಿವಮೊಗ್ಗೆ

ತಾ. ೧೩

ಅಡಿಕೆ ದೇಶಾವರ ನಂ ೧	ಮಣ ೧ಕ್ಕೆ	೩೦-೩೨
,, ,,	೨	೨೮—೩೦
ರಾಜಾ ಅಲವು		೨೮।—೩೦
ನುಲಿ		೩೧—೩೩
ವಂತಿ		೨೧—೨೧॥
ಬೆಟ್ಟೆ		೧೮-೧೯॥
ಮೆಣಸು		೨೧-೨೨

ಹುಬ್ಬಳ್ಳಿ ಪೇಟೆ

ಮುಂಬೈ ಪೇಟೆಯಲ್ಲಿ ಬಹಳೇ ಇಳಿಮುಖವಾಗಿದ್ದ ಮೂಲಕ ಇಲ್ಲಿ ಈ ಅಠವಡೆಯಲ್ಲಿ ಏನೂ ವ್ಯವಹಾರವಾಗಿಲ್ಲ. ಆಗಬಹುದಾದ ಅಜಮಾಸ ಧಾರಣೆ

ಜಯವಂತ ಹತ್ತಿ	ನಂ. ೧	೨೯೦-೨೯೫
,,	ನಂ. ೨	೨೮೦-೨೮೫
,,	ನಂ. ೩	೨೭೦-೨೭೫
ಅಪ್ಲಂಡ ಹತ್ತಿ		೨೬೦-೨೭೦
ಜಿನ		೨೧೦-೨೧೫
ಸಾಜಿನ		೨೦೦-೨೦೫
ಡಬಲರೋಲ		೧೯೫-೨೦೦

ಪೇಟೆಯಲ್ಲಿ ವಿಶೇಷ ಚಟುವಟಿಕೆಗಳೇನೂ ಇಲ್ಲ

ದಕ್ಷಿಣ ಕನ್ನಡ

ಉಡುಪಿಯ ಕೇಂದ್ರ ಕರ್ನಾಟಕ ಸಂಘದ ವರ್ಧಂತ್ಯುತ್ಸವ ಅಕ್ಟೋಬರ ೧ನೇ ದಿನ ಮತ್ತು ಸಾಹಿತ್ಯೋತ್ಸವ ತಾ. ೨ರಿಂದ ೫ರ ವರೆಗೆ ನಾಲ್ಕು ದಿನಗಳ ವರೆಗೆ ಭಾಷಣ, ಸ್ಪರ್ಧೆ ಮೊದಲಾದವುಗಳೊಂದಿಗೆ ನೆರವೇರುವದೆಂದು ಗೊತ್ತಾಗಿದೆ. ತಾ. ೧ಕ್ಕೆ ದಕ್ಷಿಣ ಕನ್ನಡದ ಲೇಖಕರ ಸಮ್ಮೇಲನವೂ ಜರಗುವದು. ಅಲ್ಲದೆ ತಾ. ೫ಕ್ಕೆ ಕರ್ನಾಟಕ ಏಕೀಕರಣ ಜಿಲ್ಲಾ ಸಮ್ಮೇಲನವನ್ನು ಜರಗಿಸುವ ನಿರ್ಣಯವಾಗಿದೆ.

ಮುಂಬಯಿ ಸರಕಾರದ ಪಂಚ ವಾರ್ಷಿಕ ಯೋಜನೆ

ಮುಂಬಯಿ ಸರಕಾರದ ಅಗತ್ಯದ ಯುದ್ಧೋತ್ತರ ಯೋಜನೆಗಳಲ್ಲಿ ತಮ್ಮ ಪ್ರಾಂತದ ಜನರಿಗೆ ಕುಡಿಯುವ ನೀರು, ಅನ್ನ ಬಟ್ಟೆ, ಮತ್ತು ೨ ಕೋಟಿ ಜನರಿಗೆ ಪ್ರಾಥಮಿಕ ಶಿಕ್ಷಣ ಇವನ್ನೊದಗಿಸುವ ಸುಮಾರು ೬೦ ರಿಂದ ೭೫ ಕೋಟಿ ರೂ. ಗಳ ಪಂಚ ವಾರ್ಷಿಕ ಯೋಜನೆಯು ಮುಖ್ಯವಾದದ್ದಾಗಿದೆ. ಈ ಯೋಜನೆಗಾಗಿ ಕೇಂದ್ರ ಸರಕಾರವು ೨೦ ಕೋಟಿ ರೂ. ಗಳನ್ನು ಕೊಡುವದು ಉಳಿದ ಹಣವನ್ನು ಪ್ರಾಂತಿಕ ಸರಕಾರವು ಕರ ಭಾರ ಹೇರಿ ಇಲ್ಲವೆ ಕಡದ ರೂಪದಿಂದಪಡೆಯುವದು.

ಸರಕಾರವು ತನ್ನ ಧ್ಯೇಯದಿಂದ ಎಂದಿಗೂ ಕದಲುವದಿಲ್ಲ. ಅದನ್ನು ಸಾಧಿಸಲು ಸರ್ವವಿಧದಲ್ಲಿಯೂ ಪ್ರಯತ್ನಿಸುವದು ಎಂದು ಸರಕಾರಿ ವಕ್ತಾರನೊಬ್ಬನು ಹೇಳಿದ್ದಾನೆ.

ಸರಕಾರವು ಸದ್ಯಕ್ಕೆ ಕೈಕೊಳ್ಳಲಿರುವ ಯೋಜನೆಗಳೆಲ್ಲ ಹಳ್ಳಿಗಳ ಬೆಳವಣಿಗೆಗೆ ಒಂದಿಲ್ಲೊಂದು ವಿಧದಿಂದ ಸಂಬಂಧಿಸಿದ್ದಾಗಿವೆ. ಅದ್ದರಿಂದ ಸರಕಾರವು ಹಳ್ಳಿಗಳ ಜೀವನವನ್ನು ರೂಢಿಸಿಕೊಂಡವರನ್ನು ಶಿಕ್ಷಣ ಕೊಡುವದಕ್ಕಾಗಿ ಹುಡುಕುತ್ತಿದೆ. ಅಂದರೆ ಅವರು ಹಳ್ಳಿಗರ ಜೀವನದೊಂದಿಗೆ ತಾದಾತ್ಮ್ಯ ಹೊಂದಬಲ್ಲರು.

ತನ್ನ ಭೂಮಿಯಿಂದ ಹಿಂದೆಂದೂ ಪಡೆಯದಷ್ಟು ಲಾಭವನ್ನು ರೈತನು ಪಡೆದುಕೊಳ್ಳುವಂತೆ ಅವನಿಗೆ ಸಹಾಯ ಮಾಡುವ ಯೋಜನೆಗಳನ್ನು ಈಗಾಗಲೆ ಕೈಕೊಳ್ಳಲಾಗಿದೆ. ಸರಕಾರಿ ವಕ್ತಾರನು ವಿವರಿಸುತ್ತ "ನೀರಾವರಿಗಾಗಿ ಇನ್ನೆರಡು ವರ್ಷಗಳಲ್ಲಿ ಸಾವಿರಾರು ಬಾವಿಗಳನ್ನು ತೋಡವದು, ಉತ್ತಮ ಬೀಜ ಮತ್ತು ಗೊಬ್ಬರ, ಒಕ್ಕಲತನದ ಶಾಸ್ತ್ರೀಯ ಪದ್ಧತಿ, ಬೆಳೆಗಳ ರಕ್ಷಣೆ, ಹೈನ ಬೆಳೆಸುವ ಕೇಂದ್ರಗಳು, ರೈತರಿಗಾಗಿ ಅಲ್ಪಾವಧಿ ಶಿಕ್ಷಣ ಕೇಂದ್ರಗಳು ಇವನ್ನೆಲ್ಲ ಕೂಡಲೆ ಸ್ಥಾಪಿಸಲಾಗುವದು" ಎಂದು ಹೇಳಿದ್ದಾನೆ.

ಮುಂಬಯಿ ಸರಕಾರದ ಕುಡಿಯುವ ನೀರಿನ ಯೋಜನೆಯು ಪೂರ್ಣವಾಯಿತೆಂದರೆ ಈ ಪ್ರಾಂತದಲ್ಲಿಯ ೨೨೦೦೦ ಹಳ್ಳಿಗಳಲ್ಲಿ ಎಲ್ಲಿಯೂ ನೀರಿನ ಅರಬು ಇಲ್ಲದಂತಾಗುವದು. ನೀರಿನ ಅರಬು ಈಗ ಎಲ್ಲಿ ಬಹಳ ಹೆಚ್ಚಾಗಿದೆ ಅಲ್ಲಿ ನೀರನ್ನು ಪೂರೈಸಬೇಕಾದರೆ ಬಾವಿಗಳನ್ನು ತೋಡಬೇಕೊ ಅಣೆಕಟ್ಟುಗಳನ್ನು ಕಟ್ಟಬೇಕೊ ಎಂಬುದನ್ನು ಕಂಡುಹಿಡಿಯಲು ಈಗ ನಿರೀಕ್ಷಣೆ ನಡೆದಿದೆ.

ಈ ಕುಡಿಯುವ ನೀರಿನ ಪ್ರಶ್ನೆಯಲ್ಲದೆ ನೀರಾವರಿಗಾಗಿ ಬಾವಿಗಳನ್ನು ತೋಡುವ ವಿಷಯವನ್ನು ಅಗತ್ಯವಾಗಿ ಪರಿಶೀಲಿಸಲಾಗುವದು. ಯಾವನೊಬ್ಬ ರೈತನು ಬಾವಿಯನ್ನು ತೋಡಬಯಸಿದರೆ ಸರಕಾರವು ಬಾವಿ ತೋಡುವ ವೆಚ್ಚದ ಮೂರರಲ್ಲಿ ಒಂದು ಪಾಲು ಧನ ಸಹಾಯ ಕೊಡುವದಲ್ಲದೆ ಉಳಿದ ಎರಡು ಮೂರಾಂಶ ಹಣವನ್ನು ಅವನಿಗೆ ಕಡಿಮೆ ಬಡ್ಡಿದರದಿಂದ ಸಾಲವೆಂದು ಕೊಟ್ಟು ಚಿಕ್ಕ ಕಂತುಗಳಿಂದ ಅದನ್ನು ಮುಟ್ಟಿಸಿಕೊಳ್ಳುವದು. ಇದಲ್ಲದೆ ಸರಕಾರವೇ ಸುಮಾರು ೫೦—೬೦ ಸಾವಿರ ಬಾವಿಗಳನ್ನು ತೋಡಿಸುವ ವಿಚಾರದಲ್ಲಿದೆ.

ಇದರೊಂದಿಗೆ ಒಕ್ಕಲತನದ ಸರ್ವಾಂಗೀಣ ಅಭಿವೃದ್ಧಿ ನಡೆಯುವದು. ಒಳ್ಳೆಯ ಉಪಕರಣಗಳನ್ನು ಕೊಟ್ಟು ದನಗಳ ಹೀಳಿಗೆ ಸುಧಾರಿಸಿ, ಭೂಮಿಯ ಸವಕಳಿಯನ್ನು ತಡೆದು ಭೂಮಿಯನ್ನು ಸಾಗುಮಾಡುವ ಪದ್ಧತಿಯಲ್ಲಿ ಸುಧಾರಣೆ ಮಾಡಬೇಕಾಗಿದೆ. ಇದಲ್ಲದೆ ಶೇಂಗಾ ಹಿಂಡಿ, ಕೃತಕ ಗೊಬ್ಬರ ಮುಂತಾದವುಗಳನ್ನು ಅಗ್ಗ ದರದಿಂದ ರೈತರಿಗೆ ಪೂರೈಸಲಾಗುತ್ತಿದೆ. ಹೊಲಸು ಹೇಸಿಕೆ ಉಪಯೋಗಿಸಿ ಕೆಗಣಿ ಗೊಬ್ಬರವನ್ನು ದೊಡ್ಡ ಪ್ರಮಾಣದಿಂದ ತಯಾರಿಸುವದನ್ನೂ ವಿಚಾರಿಸಲಾಗುತ್ತದೆ. ಈ ಮುಂಬಯಿ ಪ್ರಾಂತದಲ್ಲಿಯ ೧೬೦ ನಗರ ಸಭೆಗಳೆಲ್ಲ ಈ ಗೊಬ್ಬರವನ್ನು ತಯಾರಿಸುವ ಯೋಜನೆಯನ್ನು ಎರಡು ವರ್ಷಗಳಲ್ಲಿ ಕೈಕೊಳ್ಳುವವೆಂದು ಪ್ರಾಂತಿಕ ಸರಕಾರದ ನಿರೀಕ್ಷೆ ಇದೆ.

ಸ್ವಪ್ನಮಂದಿರದಲ್ಲಿ

ನಾರದ ಕಥೆ

★

ಲೇ- ಸಾ. ಹ. ದೇಶಪಾಂಡೆ ಸಾಂಗಲಿ

"ನೀಮಾತಾಯಿಯವರು ಮನೆಯಲ್ಲಿ ಇದ್ದಾರೇನ್ರಿ" ಎಂದು ೪೫-೪೬ ವರುಷದ ಗೃಹಸ್ಥನೊಬ್ಬನು ವಿಚಾರಿಸುತ್ತಲೇ ಬಂಗಲೆಯನ್ನು ಸೇರಿದನು. ಅವನ ಪೋಷಾಕಿನ ಮೇಲಿಂದ ನೋಡಿದರೆ ಅವನು ಕಾಂಗ್ರೆಸ್ಸಿನವನಿರಬೇಕೆಂದು ಯಾರಾದರೂ ತಿಳಿಯುವಂತಿತ್ತು. ಅವನು ಉಟ್ಟಿದ್ದು ಬೆಳ್ಳನ್ನ ಖಾದಿಯ ಧೋತರ, ತೊಟ್ಟಿದ್ದು ಬಣ್ಣದ ಅಂಗಿ ಮೇಲೊಂದು ಕೋಟು, ಹಾಕಿದ್ದು ಗಾಂಧಿಯ ಟೊಪ್ಪಿಗೆ, ಹಿಡಿದದ್ದು ಒಂದು ಚೀಲ. ಒಟ್ಟಿನ ಮೇಲೆ ಅವನೇನು ಅಷ್ಟು ಟಾಪುಟೀಪಿನವನಾಗಿರಲಿಲ್ಲ. ಅವನನ್ನು ನೋಡಿದರೆ ಅದೇ ಊರಿಂದ ಬಂದಿರಬೇಕೆಂದು ಊಹಿಸಿದರೆ ತಪ್ಪಾಗಲಾರದಂತಿತ್ತು.

ನಾನು ಅದೇ ನನ್ನವರಿಗೆ ಸ್ವೇಟರನ್ನು ಹೆಣೆಯುತ್ತ ಕುಳಿತಿದ್ದೆ. ಮುಂದೆ ಬಂದು "ಯಾರು ಬೇಕು?" ಎಂಬ ಪ್ರಶ್ನೆಯನ್ನು ಮುಂದಿಟ್ಟೆ. ಎಡಗೈಯಲ್ಲಿಯ ಚೀಲವನ್ನು ಬಲಗೈಯಲ್ಲಿ ತೆಗೆದುಕೊಳ್ಳುತ್ತ "ನಾನು 'ಮನೋಹರ' ಪತ್ರಿಕೆಯ ಸಂಪಾದಕ ನನಗೆ ನೀಮಾ ತಾಯಿಯವರನ್ನು ಸ್ವಲ್ಪ ಕಾಣುವದಿತ್ತು" ಎಂದು ಚಿಗುರು ನಗೆಯನ್ನು ಬೀರುತ್ತ ಉತ್ತರ ಕೊಟ್ಟ. ಆದಕ್ಕೆ ನಾನು "ನಾನೇ ಅವರು" ಎಂದು ಅಂದು ಅವರನ್ನು ಮೇಲಕ್ಕೆ ಕರೆದು ಅಲ್ಲಿಯೆ ಹತ್ತಿರದಲ್ಲಿ ಇದ್ದ ಸೋಫಾದ ಮೇಲೆ ಕುಳ್ಳಿರಿಸಿ ಕುರ್ಚಿಯ ಮೇಲೆ ಕುಳಿತೆ.

ಅವರು ಕುಳಿತುಕೊಂಡ ಮೇಲೆ ನನ್ನನ್ನು ದಿಟ್ಟಿಸಿ ನೋಡಿ "ನೀವು ಇಷ್ಟು ಚಿಕ್ಕವರಿರುವಿರೆಂಬ ಕಲ್ಪನೆಯೂ ನನಗೆ ಇದ್ದಿಲ್ಲ" ಎಂದರು. ಅದಕ್ಕೆ ನಾನು, "ನಾನು ಚಿಕ್ಕವಳೇ? ನನಗೀಗ ೨೫ ವರುಷ. ನನ್ನ ೨೦ (ಇಪ್ಪತ್ತು) ನೇ ವರುಷದಲ್ಲಿಯೇ ಕರ್ನಾಟಕ ಕಾಲೇಜಿನಿಂದ ಬಿ ಎ ಪಾಸಾದೆನು. ಮುಂದೆ ೧-೨ ತಿಂಗಳಲ್ಲಿಯೆ ನನ್ನ ಲಗ್ನವಾದ್ದರಿಂದ ಇಲ್ಲಿಗೆ ಬರಬೇಕಾಯಿತು. ಇಲ್ಲಿಗೆ ಬಂದ ಮೇಲೆ ನನ್ನ ೩ನೇ ವರುಷದಲ್ಲಿ ಎಮ್ ಎ ಪಾಸಾದೆನು. ನಮ್ಮವರು ಎಮ್ ಬಿ ಬಿ ಎಸ್ ಪಾಸಾಗಿ ೪-೫ ವರುಷಗಳಿಂದ ಇಲ್ಲಿಯೆ ಪ್ರಾಕ್ಟೀಸ್ ಸುರುವು ಮಾಡಿದ್ದಾರೆ. ಇಷ್ಟರಲ್ಲಿಯೆ ಅವರು ಬಹಳ ಕೀರ್ತಿಯನ್ನು ಸಂಪಾದಿಸಿದ್ದಾರೆ. ಒಂದು ಅರಕ್ಷಣವಾದರೂ ಅವರಿಗೆ ವೇಳೆ ದೊರೆಯುವದಿಲ್ಲ ಅಷ್ಟು ಕೆಲಸ ಅವರಿಗೆ. ಅವರಾದರೂ ಇದೇ ಈಗ ಹೊರಗೆ ಹೋದರು. ಇಲ್ಲವಾದರೆ ನಿಮಗೆ ಅವರ ಭೆಟ್ಟಿಯಾಗುತಿತ್ತು. ನನ್ನ ಭೆಟ್ಟಿಯು ನಿಮಗೆ ಈಗಾದದ್ದು ಅಪರೂಪವೇ ಅನ್ನಿ, ಯಾಕಂದರೆ ನಾಳೆ ನಮ್ಮವರ ಹುಟ್ಟಿದ ದಿವಸ ಅದ್ದರಿಂದ ಇದನ್ನು ಹೆಣೆದು ಮುಗಿಸುವದಕ್ಕಾಗಿ ಕುಳಿತಿದ್ದೆ. ಶ್ರೀಕಾಂತನು ಇದೇ ಈಗ ಆಳಿನ ಸಂಗಡ ಹೊರಗೆ ಹೋದನು. ನಾನೂ ಮುಚ್ಚಂಜೆಗೆ ಸ್ವಲ್ಪ ತಿರುಗಾಡಿ ಬರುವ ಪರಿಪಾಠವನ್ನು ಇಟ್ಟುಕೊಂಡಿದ್ದೇನೆ. ಅವರು ರಾತ್ರಿ ಒಂಬತ್ತು ಗಂಟೆಗೆ ಬರುತ್ತೇನೆಂದು ಹೇಳಿ ಹೊರಗೆ ಹೋಗಿರುತ್ತಾರೆ. ನೀವು ಬಂದದ್ದು ಒಳ್ಳೆಯದಾಯಿತು." ಎಂದು ನನ್ನ ಉದ್ದನ್ನ ಭಾಷಣವನ್ನು ತಡೆದೆನು. ಆದಕ್ಕೆ ಅವರು "ಅದು ಇರಲಿ, ೨೫ ವರುಷಗಳಲ್ಲಿಯೆ ಸಾಹಿತ್ಯ ಕ್ಷೇತ್ರದಲ್ಲಿ ಇಷ್ಟೊಂದು ಪ್ರಸಿದ್ಧಿಯನ್ನು ಹೊಂದಬೇಕಾದರೆ ಈ ವಯಸ್ಸು ಸಣ್ಣದೇ ಎನ್ನಬೇಕು. ನಿಮ್ಮ ಹೆಸರು ನಾಡಿನ ಮೂಲೆಮೂಲೆಗಳಲ್ಲಿ ತುಂಬಿದ್ದಲ್ಲದೆ ಹೊರಗೂ ಪಸರಿಸಹತ್ತಿದೆ. ರಸಿಕರ ಬಾಯಲ್ಲಿ ನಿಮ್ಮ ಹೆಸರೇ ಹೆಸರು. ಅಂತೆಯೆ ನೀವು ಎಲ್ಲರ ಪ್ರೀತಿಯ ಕಾದಂಬರಿಕಾರರಾಗಿರುತ್ತೀರಿ. ೭—೮ ವರುಷಗಳ ಹಿಂದೆ ನಿಮ್ಮ ಮೊದಲನೇ ಕತೆಯು ನಮ್ಮ ಮಾಸಿಕದಲ್ಲಿಯೆ ಪ್ರಕಟವಾದಂತೆ ನನಗೆ ನೆನಪಿದೆ. ನಾನು ನಿಮಗೆ ಎಷ್ಟೋ ದಿವಸಗಳಿಂದ ನಿಮ್ಮ ಫೋಟೋ ಕಳಿಸಲಿಕ್ಕೆ ಕೇಳಿಕೊಂಡೆ. ಆದರೆ ನೀವು ನನ್ನ ಬಿನ್ನಹವನ್ನು ಮಾನ್ಯ ಮಾಡಲಿಲ್ಲ. ನೀವು ಕುರೂಪಿಗಳಿರಬೇಕೆಂದು ಮಾಡಿಕೊಂಡಿದ್ದೆನು. ಆದರೆ ನಿಮ್ಮನ್ನು ನೋಡಲು ನನ್ನ ವಿಚಾರವು ಎತ್ತಲೋ ಓಡಿಹೋಯಿತು. ಆದರೆ ನಾನೀಗ ಪ್ರತ್ಯಕ್ಷ ಬಂದಿದ್ದೇನೆ. ನೀವು ನಿಮ್ಮ ಚಿತ್ರದೊಂದು ಪ್ರತಿಯನ್ನು ಕೊಡಲಿಕ್ಕೆ ಬೇಕು. ನಾನು ಈ ಸಾರೆ ನಮ್ಮ ದೀಪಾವಳಿ ಸಂಚಿಕೆಯಲ್ಲಿ ಪ್ರಕಟಿಸತಕ್ಕವನಿದ್ದೇನೆ" ಎಂದು ಉದ್ದಾದ ತಮ್ಮ ವಿಚಾರವನ್ನು ಮುಂದಿಟ್ಟರು.

ಅಲ್ಲದೆ ವ [illegible] "ನಿಮಗೆ ಒಂದೇ ಪುತ್ರರತ್ನವೇನು?" ಎಂದರು. ಆದಕ್ಕೆ ನಾನು ತಲೆಯಲ್ಲಾಡಿಸಿ ಸಮ್ಮತಿಯನ್ನು ಕೊಟ್ಟೆನು. ಮುಂದೆ ಅವರು ಮಾತಾಡಹತ್ತಿದರು. "ನಿಮ್ಮ ಸಂಸಾರವು ಅಂದವಾಗಿದೆ. ಕಲಿತು ಗಳಿಸುವ ಯಜಮಾನರು ಪುತ್ರರತ್ನ, ಇದಕ್ಕೆಲ್ಲ ಬಂಗಾರದ ಶಿಖರದಂತಿರುವ ನೀವು."

ಅವರನ್ನು ಅಷ್ಟಕ್ಕೇ ತಡೆದು ಸಂತೋಷದಿಂದ ಮುಂದೆ ನಾನು ಮಾತಾಡಹತ್ತಿದೆನು. "ನಮ್ಮ ಮೇಲೆ ನಿಮ್ಮ ಉಪಕಾರವು ಬಹಳವಾಯಿತು. ಆದಕ್ಕೆ ನಾನು ಋಣಿಯಾಗಿದ್ದೇನೆ. ನನ್ನ ಮೊದಲು ಕತೆಯನ್ನು ಪ್ರಕಟಿಸಿ ನೀವು ನನ್ನನ್ನು ಪ್ರೋತ್ಸಾಹಿಸಿದಿರಿ. ಇಲ್ಲದಿದ್ದರೆ ನನ್ನಿಂದ ಇಷ್ಟು ಸಾಹಿತ್ಯ ಸೇವೆಯು ಆಗುತ್ತಿದ್ದಿಲ್ಲ. ನಿಮ್ಮ ಆ ಪ್ರೋತ್ಸಾಹನದಿಂದಲೇ ನಾನೀಗ ೫—೬ ಕಾದಂಬರಿಗಳನ್ನಲ್ಲದೆ ಎಷ್ಟೋ ಕತೆಗಳನ್ನೂ ಪ್ರಕಟಿಸಿದ್ದೇನೆ. ನೀವು "ಆಶಾ" ಎಂಬ ನನ್ನ ಮೊದಲ ಕತೆಯನ್ನು ಪ್ರಕಟಿಸದಿದ್ದರೆ ನಾನು ನಿರುತ್ಸಾಹಿಯಾಗಿ ಮುಂದೆ ನನ್ನ ಲೆಕ್ಕಣಿಕೆಯನ್ನು ಎತ್ತುತ್ತಿದ್ದಿಲ್ಲ. ಆ ಸಾರೆ ನಿಮ್ಮ ಮಾಸಿಕವು ಬರುವ ಹಾದಿಯನ್ನೇ ನೋಡುತ್ತಿದ್ದೆನು. ವಿದ್ಯಾರ್ಥಿಗಳು ತಮ್ಮ ಪರೀಕ್ಷೆಗಳ ಪರಿಣಾಮವನ್ನು ನಿರೀಕ್ಷಿಸುವಂತೆಯೂ ಹೆಂಡತಿಯು ತನ್ನ ಪತಿಯಿಂದ ಓಲೆಯನ್ನು ನಿರೀಕ್ಷಿಸುವಂತೆಯೂ ಆ ದಿನ ನನ್ನ ಸ್ಥಿತಿಯಾಗಿತ್ತು. ಕಡೆಗೊಮ್ಮೆ ನಿಮ್ಮ ಮಾಸಿಕವು ನನ್ನ ಕೈಸೇರಿತು. ಒಡೆದು ನೋಡಲಾಗಿ ಕತೆಯು ಪ್ರಕಟವಾಗಿತ್ತು. ನನಗೆ ಅಮೃತ ಪಾತ್ರೆಯು ಕೈಯಲ್ಲಿ ಸಿಕ್ಕಂತಾಗಿತ್ತು ಕುಣಿದಾಡಿದೆ, ಹಾರಾಡಿದೆ. ಆಗಲೇ ನನ್ನ ಬೋರ್ಡಿಂಗಿನ ಗಂಟೆಯಾಯಿತು. ಎಲ್ಲ ವಿದ್ಯಾರ್ಥಿನಿಯರು ಊಟಕ್ಕೆ ನಡೆದಿದ್ದರು. ನಾನೂ ಅವರನ್ನು ಕೂಡಿದೆ. ಎಲ್ಲ ನನ್ನ ಗೆಳತಿಯರು ನನ್ನ ಅಭಿನಂದನೆಯನ್ನು ಮಾಡುವವರೇ. ಉಳಿದವರಲ್ಲಿ ಕೆಲವರು ನನ್ನ ಕಡೆಗೆ ಮತ್ಸರದಿಂದ ನೋಡಿದರು. ನಾನು ಅವರನ್ನು ಗಣನೆಗೆ ತರಲಿಲ್ಲ. ಆ ಕತೆಯು ಪ್ರಕಟವಾದಾಗ ಆದಷ್ಟು ಆನಂದವು ಬೇರೆ ಎಂದೂ ಆಗಿದ್ದಿಲ್ಲ. ಅದ್ದರಿಂದಲೇ ನನಗೆ ಆದಿನ ಊಟ ಹೋಗಿದ್ದಿಲ್ಲ. ಅದೇ ನನ್ನ ಅತಿ ಆನಂದದ ಪ್ರತೀಕವಾಗಿತ್ತು.

"ಮರುದಿನ ಕ್ಲಾಸಿನಲ್ಲಿ ನನ್ನನ್ನು ಎಲ್ಲರೂ ಹೊಗಳುವವರೇ. 'ಮನೋಹರ'ದಂಥ ಪ್ರಸಿದ್ಧ ಮಾಸಪತ್ರಿಕೆಯಲ್ಲಿ ನನ್ನ ಕತೆಯು ಪ್ರಕಟವಾಗುವದೆಂದರೆ ಎಲ್ಲರಿಗೂ ಆಶ್ಚರ್ಯವೇ ಆಗಿತ್ತು. ನನಗಾಗದವರೂ ಆ ದಿನ ನನ್ನನ್ನು ಕೂಡಿಕೊಂಡಿದ್ದರು. ಎಲ್ಲ ಹುಡುಗಿಯರೂ ನನ್ನ ಸುತ್ತಲೂ ನೆರೆದಿದ್ದರು. ಅಲ್ಲೊಂದು ಸಂತೆಯಾದಂತಾಗಿತ್ತು. "ಮಾಸ್ತರರು ಬಂದದ್ದು ಸಹ ಯಾರಿಗೂ ತಿಳಿಯಲಿಲ್ಲ. 'ಏನ್ರಿವಾ ಅಪ್ಪಾಕ ಗದ್ಲ ಕೂಡೇದಲ್ಲ' ಎಂದು ಕೂಗಿಕೊಂಡಾಗಲೇ ಎಲ್ಲರಿಗೆ ಗೊತ್ತಾಯಿತು. ಆಗ್ಗೆ ಎಲ್ಲ ವಿದ್ಯಾರ್ಥಿನಿಯರು ಲಗುಬಗೆಯಿಂದ ತಮ್ಮ ತಮ್ಮ ಆಸನಗಳ ಮೇಲೆ ಕುಳಿತುಕೊಂಡರು. ಕೂಡಲೆ ಮಾಸ್ತರರು 'ಇಷ್ಟ್ಯಾಕ ಗದ್ಲ ಕೂಡಿತ್ತೇ ಅಲ್ಲಿ' ಎಂದು ಕೇಳಿದರು. ನನ್ನ ಹತ್ತಿರದಲ್ಲಿಯೆ ಕುಳಿತ ಕುಲಕರ್ಣಿ ಪ್ರಭಾವತಿಯು ಎದ್ದು ನಿಂತು 'ಸರ್ ಈ ಸಾರೆ ಮನೋಹರ ಮಾಸಿಕದಲ್ಲಿ ಈಕೆಯ ಕತೆಯು ಪ್ರಕಟವಾಗಿ ಬಂದಿದೆ' ಎಂದು ಹೇಳಿದಳು.

"ಮಾಸ್ತರರಿಗೆ ಆಶ್ಚರ್ಯವೇನೂ ಆಗಲಿಲ್ಲ. ಕೂಡಲೆ ಅವರು ಅಂದರು. 'ಇಂಥ ಚಿಕ್ಕವಳ ಕತೆಯು "ಮನೋಹರ" ದಂಥ ಪ್ರಸಿದ್ಧ ಮಾಸಿಕದಲ್ಲಿ ಪ್ರಕಟವಾಗುವದೆಂದರೆ ಅವಳ ಲೆಕ್ಕಣಿಕೆಯ ಶಕ್ತಿಯನ್ನು ತೋರಿಸುತ್ತದೆ. ಇವಳ ಕನ್ನಡ ಪೇಪರಿನಲ್ಲಿ ನಾನು ಆ ಶಕ್ತಿಯನ್ನು ಕಂಡು ಹಿಡಿದಿದ್ದೇನೆ. ಅಲ್ಲದೆ ಇವಳು ಸ್ಕಾಲರ ಹುಡುಗಿ ಇರುತ್ತಾಳೆ. ಇವಳಂತೆ ಎಲ್ಲರೂ ಆಗಲು ಪ್ರಯತ್ನಿಸಬೇಕೆಂದು' ನನ್ನ ಗುಣಗಳನ್ನು ಎತ್ತಿ ಹಿಡಿದು ಮಾದರಿಯಂತೆ ತೋರಿಸಿದರು. ಈ ಎಲ್ಲ ಸಂಗತಿಗೆ ನೀವೇ ಕಾರಣರಲ್ಲವೆ ಸಂಪಾದಕರೆ? ಇಲ್ಲವಾದರೆ ನಾನು ಇಷ್ಟು ಪ್ರಸಿದ್ಧಳಾಗುವದಕ್ಕೆ ಶಕ್ಯವಿದ್ದಿಲ್ಲ. ಮುಂದೆ ಎಷ್ಟೋ ವಿಷಯಗಳ ಸೂಕ್ಷ್ಮ ಅಭ್ಯಾಸವನ್ನು ಮಾಡಿ ಈ ಮಟ್ಟಕ್ಕೆ ಬಂದು ಮುಟ್ಟಿರುತ್ತೇನೆ. ಅದ್ದರಿಂದ ನಾನು ನಿಮಗೆ ಚಿರಋಣಿಯಾಗಿದ್ದೇನೆ. ಆದರೆ............"

ನಾನು ಮುಂದೆ ಮಾತನಾಡುವದರಲ್ಲಿದ್ದೆ. ಆದರೆ ಸಂಪಾದಕರು ನನ್ನನ್ನು ಅಷ್ಟಕ್ಕೆ ತಡೆದು "ಛೇ, ಛೇ, ಹಾಗೆನ್ನಬೇಡಿರಿ ನಿಮ್ಮಂಥ ಸರಸ ಲೇಖಕರ ಕತೆಗಳು ನಮ್ಮ ಮಾಸಿಕಕ್ಕೆ ಬರುತ್ತವೆ. ಅಂತೆಯೆ ನಮ್ಮ ಮಾಸಿಕವು ಮತ್ತಿಷ್ಟು ಪ್ರಗತಿಯನ್ನು ಹೊಂದಿರುತ್ತದೆ. ಅದಕ್ಕೆ ನಾನು ನಿಮ್ಮ ಉಪಕಾರವನ್ನು ತೀರಿಸಬೇಕು. ಅದೆಲ್ಲವಾಯಿತು. ನಾನಿನ್ನು ಹೋಗುತ್ತೇನೆ. ನಾಳೆ ಮುಂಜಾನೆ ೯॥ ಗಂಟೆಗೆ ಬರುತ್ತೇನೆ. ನಿಮ್ಮ ಯಜಮಾನರನ್ನೂ ಸ್ವಲ್ಪ ಕಾಣಬೇಕಾಗಿದೆ. ೯॥ ಗಂಟೆಗೆ ಬರಲೋ, ನಿಮ್ಮವರು ಸೂರ್ಯವಂಶಿಗಳೇನು ಮತ್ತೆ?" ಎಂದು ಮಾತಾಡಿ ನಗುತ್ತ ಏಳತೊಡಗಿದರು. ಆದರೆ ನಾನು ಕುರ್ಚಿಯಿಂದ ಎದ್ದು "ಛೇ, ಛೇ, ಎಲ್ಲಿಗೆ ಹೋಗುತೀರಿ? ನಮ್ಮಲ್ಲಿಯೇ ಇರಬೇಕು. ಸ್ಟೇಶನದಿಂದ ನಮ್ಮಲ್ಲಿಗೆ ಬಂದೀರೆಂದ ಮೇಲೆ ನೀವು ನಮ್ಮ ಅತಿಥಿಗಳೇ. ಇನ್ನೂ ನೀವು ಬರೋದು ಗೊತ್ತಿದ್ದರೆ ಸ್ಟೇಶನ್‌ಕ್ಕೆ ನಮ್ಮ ಕಾರು ಕೊಟ್ಟು ಕಳಿಸ್ತಿದ್ದೆ. ನೀವು ಹಾಗೇನು ಮಾಡದೆ ಬಂದು ಬಿಟ್ಟಿರಿ. ನೀವು ಎಲ್ಲಿಗೂ ಹೊರಡಕೂಡದು ನಮ್ಮಲ್ಲಿಯೆ ಇರಬೇಕು ಇಲ್ಲವಾದರೆ ಡಾಕ್ಟರರು ನನಗೆ ಏನಂದಾರು?"

ಮುಂದೆ ಅವರು ಕೂಡುತ್ತ "ನೀವು ಇಷ್ಟು ಆಗ್ರಹ ಮಾಡುತ್ತೀರೆಂದ ಮೇಲೆ ನಾನು ಇಲ್ಲಿಯೆ ಇಳಿಯುತ್ತೇನೆ. ನಾನು ಇನ್ನೊಬ್ಬರ ಮನೆಗೆ ಬರುತ್ತೇನೆಂದು ಪತ್ರ ಬರೆದಿದ್ದರಿಂದ ಅವರು ನನ್ನ ಹಾದಿ ನೋಡಹತ್ತಿರಬಹುದು. ಅವರಿಗೆ ಒಂದು ಚೀಟಿ ಕಳಿಸಿಬಿಟ್ಟರೆ ನಾನು ನಿಮ್ಮ ಅತಿಥಿಯಾದೆ" ಎಂದಂದು ಮತ್ತೆ ಸೋಫಾದ ಮೇಲೆ ಕುಳಿತರು.

ನಾನು ಆಳಿಗೆ ಚಹಾ ತೆಗೆದುಕೊಂಡು ಬರಲಿಕ್ಕೆ ಹೇಳಿ "ನಾ ಎಲ್ಲಾ ಚೀಟಿ ವ್ಯವಸ್ಥಾ ಮಾಡತೇನಿ" ಎಂದು ಮತ್ತೆ ಸ್ವೆಟರನ್ನು ಹೆಣೆಯುತ್ತ ಕುಳಿತೆನು. ಅವರೊಂದು ದೀರ್ಘ ಶ್ವಾಸವನ್ನು ಬಿಟ್ಟು ಮತ್ತೆ ಮಾತಾಡಹತ್ತಿದರು, "ನಮ್ಮ ಮೇಲೆ ನಿಮ್ಮದು ಬಹಳ ಉಪಕಾರವಾಯಿತು. ಆದಿರಲಿ ನಿಮ್ಮ ಫೋಟೋ ತೋರಿಸಿರಲ್ಲ?" ಆಗ ನಾನು ಎದ್ದು ಒಂದು ಫೋಟೋದ ಪುಸ್ತಕವನ್ನು ತಂದು ಅವರಿಗೆ ಕೊಟ್ಟೆನು. ಸಂಪಾದಕ ಮಹಾಶಯರು ಅದನ್ನು ತೆಗೆದುಕೊಂಡು ಒಂದೊಂದೇ ನೋಡಹತ್ತಿದರು. ಅದರಲ್ಲಿ ನಾನೂ ನನ್ನವರು ಕೂಡಿ ಲಗ್ನದಲ್ಲಿ ತೆಗೆದ ಫೋಟೋ ಇತ್ತು. ಅದನ್ನು ಅವರು ಕೈಯಲ್ಲಿ ತೆಗೆದುಕೊಂಡು "ಇದು ಚೆನ್ನಾಗಿದೆ. ಆದರೆ ನೀವು ಮೂವರೂ ಕೂಡಿ ತೆಗೆದ ಫೋಟೋ ಇದ್ದರೆ ಇದಕ್ಕೂ ಚೆನ್ನಾಗಿ ಆಗುತ್ತಿತ್ತು" ಎಂದರು. ನಾನು ಮುಂದೆ ಬಂದು "ಮುಂದೆ ಅದೂ ಅದ ನೋಡಿರಿ" ಎಂದು ಅದನ್ನು ತೆಗೆದು ಅವರ ಕೈಯಲ್ಲಿ ಕೊಟ್ಟೆನು. ಅದನ್ನು ಕೈಯಲ್ಲಿ ತೆಗೆದುಕೊಂಡು "ಬಹಳ ಚೆನ್ನಾಗಿದೆ." ಎಂದು ದಿಟ್ಟಿಸಿ ನೋಡುತ್ತ ಹೊಗಳಿದರು.

ನಾನು ಮನಸಿನಲ್ಲಿ ನನ್ನ ಈ ಯೋಗ್ಯತೆಯ ಬಗ್ಗೆ ಆನಂದಪಡುತ್ತಿದ್ದೆ ಅಷ್ಟರಲ್ಲಿಯೆ ಸಂಪಾದಕರು ಮುಖವನ್ನು ಮೇಲಕ್ಕೆ ಎತ್ತಿ "ನೀವು ಈಗ ಯಾವ ಕಾದಂಬರಿಯನ್ನು ಬರೆಯುತ್ತಿದ್ದೀರಿ?" ಎಂದು ಕೇಳಿದರು.


"ಕಲಂಕಶೋಭಾ" ಎಂದು ನಾನಂದೆ.

"ಹೆಸರು ಬಹಳ ಚೆನ್ನಾಗಿದೆ ನೀವು ಅದನ್ನು ನನಗೆ ಓದಲಿಕ್ಕೆ ಕೊಡುತ್ತೀರೇನು? ಸ್ವಲ್ಪೇ ಬರೆದಿದ್ದರೂ ಅಡ್ಡಿಯಿಲ್ಲ. ಅಷ್ಟೇ ಮನರಂಜನೆಯನ್ನು ಮಾಡಿಕೊಳ್ಳುತ್ತೇನೆ." "ಓಹೋ ಅಗತ್ಯವಾಗಿ ಕೊಡುತ್ತೇನೆ, ಮುಂದೆ ನಿಮ್ಮ ಅಭಿರುಚಿಯನ್ನು ಕೇಳುತ್ತೇನೆ" ಎಂದು ಅಲ್ಲಿಂದ ಎದ್ದು ಅವರಿಗೆ ಅರ್ಧವಾದ ನನ್ನ ಕಾದಂಬರಿಯನ್ನು ತಂದುಕೊಟ್ಟು ಚೀಟಿಯನ್ನು ಬರೆಯತೊಡಗಿದೆನು.

ಅಷ್ಟರಲ್ಲಿಯೆ ಯಾವದೋ ಧ್ವನಿಯು ನನ್ನನ್ನು ಎಚ್ಚರಗೊಳಿಸಿತು. ಎದ್ದು ಕಣ್ಣೊರಸಿಕೊಂಡು ಕನ್ನಡಿಯ ಮುಂದೆ ಹೋಗಿ ಕೂದಲವನ್ನು ನೆಟ್ಟಗೆ ಮಾಡಿಕೊಂಡು ಬಾಗಿಲವನ್ನು ತೆರೆದು ನೋಡಲಾಗಿ ಪೋಸ್ಟಮನ್‌ನು ಒಂದು ಉದ್ದನ್ನ ಲಕೋಟೆಯನ್ನು ತಂದು ಕೊಟ್ಟು ಮುಂದೆ ಹೋದನು. ಅದನ್ನು ನಾನು ಒಡೆದು ನೋಡಲಾಗಿ ನಾನು ೫—೬ ದಿವಸಗಳ ಹಿಂದೆ "ಮನೋಹರ" ಮಾಸಿಕಕ್ಕೆ ಕಳಿಸಿದ ನನ್ನ "ಆಶಾ" ಎಂಬ ಕತೆಯನ್ನು ಸಂಪಾದಕರಿಗೆ ಮುದ್ರಿಸುವದು ಆಗದ್ದರಿಂದ ಅದನ್ನು ತಿರುಗಿ ಕಳಿಸಿದ್ದರು. ಆಗ್ಗೆ ನನಗೆ ಹೊಳೆಯಿತು — ಇಲ್ಲಿಯ ವರೆಗೆ ನಾನು ಸ್ವಪ್ನದಲ್ಲಿ ಇದ್ದೆನೆಂದು.

— ಪುಟ ೧೬ಕ್ಕೆ

Reg. No. 3148 | LICENCE No. 3 Licenced to Post without Prepayment | **KARMAVEER 16-9-46**



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಸಪ್ಟಂಬರ ೧೬ ರಿಂದ ೨೨ ರ ವರೆಗೆ

ಮೇಷ

ಎಲ್ಲರ ಪ್ರಕೃತಿ ಉತ್ತಮ. ಆದರೆ ವಿಪರೀತ ಆಗಂತುಕ ಅಡಚಣಿಗಳಿಂದ ಪ್ರಾಪಂಚಿಕ ಸುಖ ಬಹಳ ಕಡಮೆ. ಅಗ್ರಹದ ಮತ್ತು ಅಪ್ರಿಯ ಅತಿಥಿಗಳು ಬರುವ ಯೋಗ. ಉದ್ಯೋಗದಲ್ಲಿ ಉತ್ತಮಪ್ರಗತಿ ಬಹಳ ಪ್ರತಿಷ್ಠೆ. ಆದರೆ ಲಾಭ ಬಹಳ ಕಡಮೆ. ನಿಜ ಮಿತ್ರ ವಿಶ್ವಾಸಿಕರ ಬಗ್ಗೆಯೂ ಮನಸಿನಲ್ಲಿ ಸಂಶಯದ ಭೂತ ಸಂಚಾರವಾಗುವದು. ಬಂಧುವರ್ಗದವರು ಶತ್ರುಗಳಿಗೆ ಅನುಕೂಲ. ನೀವಾದರೂ ಹೆಚ್ಚಿನ ಅಭಿಮಾನಕ್ಕೆ ಬಲಿಬಿದ್ದು ಒಳ್ಳೆ ಮಿತ್ರರೊಡನೆಯೂ ಅಡ್ಡ ದಾರಿಯಿಂದ ವರ್ತಿಸುವಿರಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನ ಸ್ಥಿತಿ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ. ಭರಣಿಗೆ ತೊಂದರೆ ಕಡಮೆ. ತಾ. ೧೬, ೧೮, ೧೯, ೨೦ ಅನುಕೂಲ.

ವೃಷಭ

ಸ್ವತಃ ನಿಮ್ಮ ಹಾಗು ಹೆಂಡತಿಯ ಆರೋಗ್ಯ ಸರಿಯಿಲ್ಲದಿದ್ದರೂ ಉಭಯತರಲ್ಲಿ ಐಕಮತ್ಯ. ಮಕ್ಕಳಲ್ಲಿ ವಿಶೇಷ ಸಮಾಧಾನದ ಕೆಲ ಸಂಗತಿಗಳು. ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಅಜ್ಜನ ಮನೆಯವರಲ್ಲಿ ಕೆಲವರಿಗೆ ಕ್ಲೇಶ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅನುಕೂಲ. ಆದರೆ ಲಾಭ ಕಡಮೆ ಆದರೂ ಸಾಲ ಇಲ್ಲವೆ ಕೈಗಡವೆಂದು ಕೆಲ ಮೂಲ್ಯ ವಸ್ತುಗಳನ್ನು ಅಲ್ಪ ಬೆಲೆಯಲ್ಲಿ ಸಂಗ್ರಹಿಸುವ ಯೋಗ ಮಿತ್ರರಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಕೆಲ ಸಂಗತಿಗಳು ನಿಮಗೆ ಅನುಕೂಲವಿದ್ದರೆ ಕೆಲ ಸಂಗತಿಗಳು ಶತ್ರುಗಳಿಗೆ ಅನುಕೂಲ. ಭೆಟ್ಟಿಗಿಂತ ಪತ್ರವ್ಯವಹಾರ ಮತ್ತು ಪ್ರವಾಸ ಹೆಚ್ಚು ಅನುಕೂಲ. ರೋಹಿಣಿಗೆ ತೊಂದರೆ ಕಡಮೆ. ತಾ. ೧೮, ೧೯, ೨೦, ೨೧ ಅನುಕೂಲ.

ಮಿಥುನ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅನುಕೂಲ. ಮಕ್ಕಳ ಉನ್ನತಿ ಆದರೆ ವರ್ತನೆ ಮಾತ್ರ ಸ್ವಲ್ಪ ವ್ರಾತ್ಯ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ ಆಸ್ತಿಯಲ್ಲಿ ಹೆಚ್ಚಳ ಇಲ್ಲವೆ ಅನುಕೂಲ ಘಟನೆಗಳು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಬಹಳ ತೊಂದರೆಯಿಂದ ಆಗುತ್ತ ನಡೆದರೂ ದ್ರವ್ಯ ಲಾಭ ಅಂದಾಜಿಗಿಂತ ಹೆಚ್ಚು. ಶತ್ರುಗಳ ಮೇಲೆ ಬಹಳ ವಿಜಯ ಅತುಲ ಪರಾಕ್ರಮದ ಕೃತ್ಯಗಳನ್ನು ಮಾಡುವದರಿಂದ ಸರ್ವತ್ರಲೌಕಿಕ. ಪ್ರವಾಸಕ್ಕಿಂತ ಪತ್ರವ್ಯವಹಾರ ಅನುಕೂಲ. ಆದರೆ ಭೆಟ್ಟಿ ಕಿಂಚಿತ್ ತೊಂದರೆಯಿಂದಲೆ ಸಾಧ್ಯ. ಆರಿದ್ರೆಗೆ ತೊಂದರೆ ಕಡಮೆ. ತಾ. ೧೯, ೨೦, ೨೧, ೨೨ ಅನುಕೂಲ.

ಕರ್ಕ

ಪ್ರಕೃತಿ ನಿಮ್ಮದು ಮತ್ತು ಹೆಂಡತಿಯದು ಅನುಕೂಲ ಆದರೆ ಮಕ್ಕಳಿಗೆ ಅಲ್ಪ ಸ್ವಲ್ಪ ಕ್ಲೇಶ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣವೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಮಧ್ಯಮ. ಆದರೆ ಪ್ರತಿಷ್ಠೆ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಆದರೆ ನಿಮ್ಮ ಜನರೆ ಸ್ವಲ್ಪ ಮಟ್ಟಿಗೆ ಫಿತೂರ ಆಗುವರು. ಮಿತ್ರತ್ವದಲ್ಲಿ ವಿರೋಧ ಸಮೀಪದ ಪ್ರವಾಸ ಬಹಳ ಸುಖದು. ಆದರೆ ದೂರದ ಪ್ರವಾಸ ಮಾತ್ರ ಗಂಡಾಂತರದ್ದು. ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಪುಷ್ಯಕ್ಕೆ ತೊಂದರೆ ಕಡಮೆ. ತಾ. ೧೬, ೧೭, ೨೨ ಅನುಕೂಲ.

ಸಿಂಹ

ನಿಮ್ಮ ಪ್ರಕೃತಿ ಉತ್ತಮ. ಆದರೆ ಹೆಂಡತಿಯ ಆರೋಗ್ಯದಲ್ಲಿ ಕುರಕುರಿ. ಮಕ್ಕಳು ಭಯಪ್ರದವಾಗಿ ಸಾಹಸಕೃತ್ಯ ಮಾಡುವರು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ರೋಖ ಇಲ್ಲವೆ ಬೆಲೆಯುಳ್ಳ ವಸ್ತುಗಳ ಸಂಗ್ರಹ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆಗೆ ಕುಂದುಬೀಳುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಮಿತ್ರ ಸುಖ ಉತ್ತಮ ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಪೂರ್ವಾಕ್ಕೆ ತೊಂದರೆ ಕಡಮೆ. ತಾ. ೧೮, ೧೯, ೨೦ ಅನುಕೂಲ.

ಕನ್ಯಾ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡತಿಗೆ ಸ್ವಲ್ಪ ಕ್ಲೇಶ. ಬಂಧುವರ್ಗದವರಲ್ಲಿ ಒಬ್ಬರಿಗೆ ಬಹಳ ಕ್ಲೇಶ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಮಾನ್ಯವಾಗಿ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಮಧ್ಯಮ ಆದರೆ ಪ್ರತಿಷ್ಠೆ ಉತ್ತಮ ವೆಚ್ಚ ಹೆಚ್ಚು ಆದರೆ ಅದರಲ್ಲಿಯ ಹೇತು ಸಾಧ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳು ಒಡಂಬಡಿಕೆಯ ಇಚ್ಛೆ ಪ್ರದರ್ಶಿಸುವವು. ಮಿತ್ರರಲ್ಲಿ ಕ್ಲೇಶ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಹಸ್ತಾಕ್ಕೆ ತೊಂದರೆ ಕಡಮೆ. ತಾ. ೧೯, ೨೦, ೨೧, ೨೨ ಅನುಕೂಲ.

ತುಲಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಅನುಕೂಲ. ಆದರೆ ಅದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ವೆಚ್ಚ ಮಾಡಬೇಕಾದ ಪ್ರಸಂಗ. ಪ್ರತಿಷ್ಠೆ ಸಾಧಾರಣವೆ. ಆದರೆ ದ್ರವ್ಯ ಲಾಭ ತುಂಬ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಹಿಮ್ಮೆಡುವದು ಆದರೆ ಶತ್ರುಗಳಲ್ಲಿಯೂ ಇಬ್ಬಣವಾಗುವ ಸಂಭವ ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ತೊಂದರೆಯದು. ಸ್ವಾತಿಗೆ ತೊಂದರೆ ಕಡಿಮೆ. ತಾ. ೧೯, ೨೦, ೨೧, ೨೨ ಅನುಕೂಲ.

ವೃಶ್ಚಿಕ

ನಿಮ್ಮ ಮತ್ತು ಹೆಂಡತಿಯ ಆರೋಗ್ಯ ಬಹಳ ಕೆಡುವದು. ಕುಟುಂಬದಲ್ಲಿ ಎಲ್ಲರಿಂದಲೂ ಅತಿಶಯ ತೊಂದರೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ಹೆಚ್ಚು ವೆಚ್ಚದ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಮಿತ್ರ ಸುಖ ಉತ್ತಮ. ಪ್ರವಾಸ ತೊಂದರೆಯದು ಆದರೆ ಭೆಟ್ಟಿ ಪತ್ರವ್ಯವಹಾರ ಅನುಕೂಲ. ಅನುರಾಧೆಗೆ ತೊಂದರೆ ಕಡಮೆ. ತಾ. ೧೭, ೨೧, ೨೨ ಅನುಕೂಲ.

ಧನು

ಪ್ರಕೃತಿ ಉತ್ತಮ. ಸ್ತ್ರೀ ಸುಖ ಅನುಕೂಲ. ಮತ್ತು ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಆಸ್ತಿಯಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ದೊಡ್ಡ ಪ್ರತಿಷ್ಠೆ ಮತ್ತು ತುಂಬ ಲಾಭ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ವಿಜಯ. ದುರ್ಘಟ ಸಂಗತಿಗಳಲ್ಲಿಯೂ ಯಶಸ್ಸು. ವೆಚ್ಚ ಹೆಚ್ಚು. ಆದರೆ ಹೇತು ಸಾಧ್ಯ. ಪ್ರವಾಸಾದಿ ಕೆಲಸ ಸುಖದ್ದು. ಪೂರ್ವಾಷಾಢಾಕ್ಕೆ ಹೆಚ್ಚು ಅನುಕೂಲ. ತಾ. ೧೯, ೨೦, ೨೨ ಅನುಕೂಲ.

ಮಕರ

ಪ್ರಕೃತಿ ಅನುಕೂಲ. ಎಲ್ಲರ ಆರೋಗ್ಯ ಅನುಕೂಲ ಆದರೆ ನಿಮ್ಮ ನಿಮ್ಮಲ್ಲಿ ತೀವ್ರ ಮತಭೇದ. ಅಸಾಧ್ಯ ಕೆಲಸದಲ್ಲಿ ಅವಸರ ಮಾಡುವದರಿಂದ ಬಹಳ ಹಾನಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಅನುಕೂಲ ಆದರೆ ಲಾಭ ಕಡಮೆ. ಸ್ವಲ್ಪ ಅವಚಿತ ಅಂದರೆ ಗುಪ್ತ ಲಾಭವಾಗುವ ಸಂಭವ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ವಿಜಯ. ಪ್ರವಾಸಾದಿ ಕೆಲಸ ಬಹಳ ಹಿತದ್ದು. ಶ್ರವಣೆಗೆ ತೊಂದರೆ ಕಡಮೆ. ತಾ. ೧೭, ೨೧, ೨೨ ಅನುಕೂಲ.

ಕುಂಭ

ಪ್ರಕೃತಿ ಸಾಧಾರಣವೆ ಸ್ತ್ರೀ ಸುಖ ಉತ್ತಮ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಸ್ವಲ್ಪ ಆಗಿಯೇ ತೀರುವದು. ಮಕ್ಕಳು ನಿಮ್ಮ ಇಚ್ಛೆಯ ವಿರುದ್ಧ ವರ್ತಿಸುವರು. ಅವರಿಂದ ಕಿರಕಳ ಉಪದ್ರವ ಬಹಳ ಉದ್ಯೋಗದಲ್ಲಿ ಪ್ರತಿಷ್ಠೆ ಕಡಿಮೆ. ಆದರೆ ಪ್ರಗತಿ ಮತ್ತು ಲಾಭ ಉತ್ತಮ. ಮಿತ್ರ ಸುಖ ಉತ್ತಮ. ಅವಚಿತ ಲಾಭದ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಪತ್ರವ್ಯವಹಾರ ಮತ್ತು ಭೆಟ್ಟಿಗಿಂತ ಪ್ರವಾಸ ಅನುಕೂಲ. ಶತತಾರಿಕೆಗೆ ತೊಂದರೆ ಕಡಮೆ. ತಾ. ೧೬, ೧೯, ೨೦, ಅನುಕೂಲ.

ಮೀನ

ಪ್ರಕೃತಿಗೆ ಸ್ವಲ್ಪ ಕ್ಲೇಶ. ಸ್ತ್ರೀ ಸುಖ ಉತ್ತಮ. ಉಳಿದ ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಸ್ವಲ್ಪ ಆಗುತ್ತ ನಡೆದರೂ ಕೆಲವೊಂದು ಸಂಗತಿಯಲ್ಲಿ ಬಹಳ ಉತ್ಕರ್ಷವಾಗುವ ಯೋಗ. ಉದ್ಯೋಗದಲ್ಲಿ ಲಾಭ ತುಂಬ ಆದರೆ ಪ್ರಗತಿ ಮತ್ತು ಪ್ರತಿಷ್ಠೆ ಕಡಮೆಯೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಮಿತ್ರ ಸುಖ ಉತ್ತಮ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಉತ್ತರಾ ಭಾದ್ರಪದಕ್ಕೆ ತೊಂದರೆ ಕಡಮೆ. ತಾ. ೧೬, ೧೭, ೨೧, ೨೨ ಅನುಕೂಲ.

ಪುಸ್ತಕ ಮತ್ತು ವಿಮರ್ಶೆ

೨ ನೇ ಪುಟದಿಂದ ಮುಂದರಿದುದು

Shri Raghavendra Vijaya, Comprising Lite Stotram and Miracles by R. A. Katageri B A., Publishers: G. R. Patankar, Continental Book Service, 626 Shanawar Poona 2 Crown ¼ pp. 80. Price 1-4-0.

ಮಾಧ್ವ ಸಂಪ್ರದಾಯದಲ್ಲಿ ಒಳ್ಳೆ ಪ್ರಖ್ಯಾತಿಯನ್ನು ಪಡೆದು ಇಂದಿಗೂ ಭಕ್ತರ ಅಭೀಷ್ಟಗಳನ್ನು ಪೂರಯಿಸಿ ಕೊಡುವಂಥ ಮಂತ್ರಾಲಯದ ಶ್ರೀ. ರಾಘವೇಂದ್ರ ಸ್ವಾಮಿಗಳ ಜೀವನ ಚರಿತ್ರೆಯನ್ನು ಶ್ರೀ. ಕಟಗೇರಿಯವರು ಇಂಗ್ಲೀಷಿನಲ್ಲಿ ಸಾರರೂಪವಾಗಿ ಪ್ರಕಟಿಸಿದ್ದಾರೆ. ಪ್ರಾರಂಭದಲ್ಲಿ ಸುದೀರ್ಘವಾದ ಪ್ರಸ್ತಾವನೆಯಲ್ಲಿ ಆಚಾರ್ಯರು ಸಾಧುಸತ್ಪುರುಷರ ಜೀವನಗಳು ಸಾಮಾನ್ಯ ಮನುಷ್ಯನ ಜೀವನದ ಮೇಲೆ ಎಂಥ ಸುಪರಿಣಾಮಗಳನ್ನು ಮಾಡುತ್ತವೆಂಬದನ್ನು ವಿವರಿಸುತ್ತ ಹಿಂದೂ ಸಂಸ್ಕೃತಿಯಲ್ಲಿ ಆಚಾರ್ಯತ್ರಯರು ಮಾಡಿದ ಕಾರ್ಯ ಅವರಲ್ಲಿ ಮಾಧ್ವ ಸಂಪ್ರದಾಯಕ್ಕೆ ಸೇರಿದ ಶ್ರೀ ರಾಘವೇಂದ್ರ ಸ್ವಾಮಿಗಳ ಶ್ರೇಷ್ಠತೆ ಮೊದಲಾದ್ದನ್ನು ವರ್ಣಿಸಿದ್ದಾರೆ. ಅನಂತರ ಅವರು ಶ್ರೀ ರಾಯರ ಚರಿತ್ರೆಯನ್ನು ಸಂಕ್ಷೇಪತಃ ಬರೆದಿದ್ದಾರೆ ಮೂರನೆಯ ಪ್ರಕರಣದಲ್ಲಿ ರಾಯರ ಭಕ್ತರಲ್ಲಿ ಶ್ರೇಷ್ಠರೂ ಅಪರೋಕ್ಷ ಜ್ಞಾನಿಗಳೂ ಆಗಿದ್ದ ಶ್ರೀ ಅಪ್ಪಣಾಚಾರ್ಯರು ಬರೆದ ಶ್ರೀ ಗುರುಸ್ತೋತ್ರ ಮೂಲವನ್ನು ಕೊಟ್ಟು ಪ್ರತಿ ಶ್ಲೋಕ ಅರ್ಥ ಮತ್ತು ವಿವರಣೆಯನ್ನು ಕೊಟ್ಟಿದ್ದಾರೆ. ಕೊನೆಯ ಪ್ರಕರಣದಲ್ಲಿ ಶ್ರೀ ರಾಯರ ಅಗಾಧ ಮಹಿಮೆಯನ್ನು ವ್ಯಕ್ತಪಡಿಸುವ ಅವರ ಅದ್ಭುತ ಲೀಲೆಗಳನ್ನು ವಿವರಿಸಿದ್ದಾರೆ ಒಟ್ಟಾರೆ ಈ ಪುಸ್ತಕವು ಶ್ರೀ ರಾಯರ ಮಹಿಮೆಯನ್ನು ತಿಳಿದುಕೊಳ್ಳಲು ಉಪಯುಕ್ತವಾಗಿದೆ. ಇಂಗ್ಲಿಶ ಓದುಗರು ಈ ಪುಸ್ತಕದಿಂದ ಶ್ರೀ ರಾಯರ ಜೀವನ ಚರಿತ್ರೆಯನ್ನು, ಅಗಾಧ ಮಹಿಮೆಯನ್ನು ತಿಳಿದುಕೊಂಡು ಅವರನ್ನಾರಾಧಿಸಿ ಇಹಪರ ಸಾಧನ ಮಾಡಿಕೊಳ್ಳಬೇಕೆಂದು ಸೂಚಿಸುತ್ತೇವೆ

ಅಂಚೆಯಿಂದ ತರಿಸಿಕೊಳ್ಳುವ ನಮ್ಮ

ಚಂದಾದಾರರಲ್ಲಿ ವಿನಂತಿ

ಪತ್ರವ್ಯವಹಾರ ಮಾಡುವಾಗ್ಗೆ ಮತ್ತು ಮನಿಆರ್ಡರ ಕಳಿಸುವಾಗ್ಗೆ ನಿಮಗೆ ಬರುತ್ತಿದ್ದ ಪತ್ರಿಕೆಯ ಮೇಲಿನ ವಿಳಾಸದಲ್ಲಿ ನಾವು ಸೇರಿಸಿದ ನಂಬರ ಬರೆಯಬೇಕು. ನಂಬರ ಇಲ್ಲದ ಪತ್ರಕ್ಕೆ ಉತ್ತರ ಸಿಗಲಾರದು.

ಅವಧಿ ಮುಗಿಯುವ ೧೫ ದಿನ ಮುಂಚೆಯೆ ನಾವು ನಮ್ಮ ಪದ್ಧತಿಯಂತೆ ವ್ಹಿ. ಪಿ. ಮಾಡುವೆವು. ಬೇಡಾದವರು ಮೊದಲೇ ನಮಗೆ ತಿಳಿಸಬೇಕು.

ತಿಂಗಳು, ಎರಡು ತಿಂಗಳು ಚಂದಾದಾರರಾಗಲಿಚ್ಛಿಸುವವರು ಮುಂಗಡ ಹಣ ಕಳಿಸಬೇಕು. ಅವರಿಗೆ ವ್ಹಿ. ಪಿ. ಯನ್ನು ಕಳಿಸಲಾಗುವದಿಲ್ಲ. ವಾರಪತ್ರಿಕೆ (ಕರ್ಮವೀರ) ಯನ್ನು ೬ ತಿಂಗಳಿಗಿಂತ ಕಡಿಮೆ ವ್ಹಿ. ಪಿ. ಮಾಡುವದಿಲ್ಲ. ಮೊದಲನ ವ್ಹಿ. ಪಿ. ಕಳಿಸಿದ ಪ್ರತಿಯನ್ನು ನಾವು ಲೆಕ್ಕಕ್ಕೆ ಹಿಡಿಯದೆ ನಿಮ್ಮಿಂದ ವ್ಹಿ. ಪಿ. ಹಣ ಬಂದು ನಮ್ಮ ಕೈಸೇರಿದ ನಂತರ ಪತ್ರಿಕೆಯನ್ನು ಕಳಿಸಲು ಪ್ರಾರಂಭಿಸಿ ಅಂದಿನಿಂದಲೆ ನಿಮ್ಮ ಅವಧಿಯನ್ನು ಗಣಿಸಲಾಗುವದು. —ವ್ಯವಸ್ಥಾಪಕ

ಕರ್ಮವೀರ, ಹುಬ್ಬಳ್ಳಿ

ವಾರದ ಕತೆ

೧೫ ನೇ ಪುಟದಿಂದ ಮುಂದರಿದುದು

ನನ್ನ ಸ್ವಪ್ನಮಂದಿರವು ಕಳಚಿಬಿದ್ದಿತು. ಗಾಳಿಗೋಪುರವು ಹಾರಿಹೋಯಿತು. ಎಲ್ಲ ಮುಂದಿನ ಆಶೆಗಳು ಬಯಲಾದವು. ಅಲ್ಲಿಯವರೆಗೆ ಕನಸಿನಲ್ಲಿ ಇದ್ದೆ, ಕುರ್ಚಿಯ ಮೇಲೆ ಕುಳಿತು ಎಲ್ಲಿಯ ಕಾದಂಬರಿ ಬರೆಯುವವಳು, ಎಲ್ಲಿಯ ಡಾಕ್ಟರರು, ಎಲ್ಲಿಯ ಸಂಪಾದಕರು ? ಎ... ಒಟಗುಟ್ಟಿದೆನು. ಕತೆಯನ್ನು ಹೊರಗೆ ತೆಗೆದು ಚರಚರ ಹರಿದು ಕಿಡಕಿಯಿಂದ ಹೊರಗೆ ತೂರಿದೆನು.

ಆಗ್ಗೆ ಸಂಜೆಯಾಗಿತ್ತು. ರವಿಯು ತಾಯಿಯನ್ನು ಸೇರುವದಕ್ಕೆ ಮುಂದೆ ಮುಂದೆ ಸರಿಯುತ್ತಿದ್ದನು. ಎಲ್ಲ ವಿದ್ಯಾರ್ಥಿನಿಯರು ಹೊರಗಿಂದ ಬರುವದಕ್ಕೂ ಹೊರಗೆ ಹೋಗುವದಕ್ಕೂ ಗಡಿಬಿಡಿ ಮಾಡುತ್ತಿದ್ದರು. ನನ್ನ ಆ ನಿರಾಶೆಯ ಕತೆಯ ತುಂಡುಗಳು ಹಾರಿ ಹಾರಿ ಕೊನೆಗೆ ಮಾಯವಾದವು. ಅದರಂತೆ ನನ್ನ ಕತೆ ಬರೆಯುವ ಆಶೆಯು ಚಿಗುರಿನಲ್ಲಿಯೆ ಚಿವುಟಿದಂತಾಯಿತು.

ಈಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿತ ಪ್ರಕಟವಾಯಿತು